ಸಂಪುಟ: 14 Volume | ಸಂಚಿಕೆ: 81 Issue | ಪುಟಗಳು 08 Pages | ಗುರುವಾರ 02 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಕೆಟ್ಟದ್ದನ್ನು ಮಾಡಲೇಬೇಕೆಂದವನಿಗೆ ಅವಕಾಶದ ಕೊರತೆ ಇರದು.

–ಪಿ.ಸೈರಸ್




ಬೆಂಗಳೂರಿನ ಸೇಂಟ್ ಜೋಸೆಫ್ ಸಂಸ್ಥೆಯ ಫಾದರ್ ಡೇನಿಯಲ್, ಫಾದರ್ ಚಾರ್ಲ್ಸ್, ಫಾದರ್ ಜೋಯಲ್, ಫಾದರ್ ನೋರ್ವಿನ್ ಹಾಗೂ ಪ್ರವೀಣ್ ಪೀಟರ್ ಅವರು ಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸಿಎಂ ಗೃಹಕಚೇರಿ "ಕೃಷ್ಣಾ"ದಲ್ಲಿ ಬುಧವಾರ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.



ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರ ಮಹಾ ಸಂಸ್ಥಾನ ದಾಸೋಹ ಮಠ ಆಯೋಜಿಸಿದ್ದ ಶ್ರೀ ಗುರು ಮಲ್ಲೇಶ್ವರರ 127ನೇ ಪುಣ್ಯಾರಾಧನೆ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.

## ಗೃಹಲಕ್ಷ್ಮಿ: ವಿಶೇಷ ತನಿಖೆ ಮಾಡಲು ಸಿ.ಟಿ.ರವಿ ಆಗ್ರಹ

**ಬೆಂಗಳೂರು:** ಗ್ಯಾರಂಟಿ ಯೋಜನೆ ಗೃಹಲಕ್ಷ್ಮಿ ಹಣದ ವಿಚಾರದಲ್ಲಿ ಸಿಎಜಿ, ನಕಲಿ ಖಾತೆಗಳಿಗೆ ಹಣ ಹೋಗಿದೆ. ಒಂದೇ ಖಾತೆಗೆ ಹಣ ಹಾಕಿದ್ದಾರೆ, ಸತ್ತವರ ಹೆಸರಿಗೆ ಹಣ ಹೋಗಿದೆ ಎಂದು ತಿಳಿಸಿದೆ.ಇದರ ಕುರಿತು ಯಾಕೆ ಇನ್ನೂ ಎಸ್‌ಐಆರ್ ದಾಖಲಿಸಿಲ್ಲ ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಕೇಳಿದ್ದಾರೆ. ಇಂದು ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಡವರ ಹೆಸರಿನಲ್ಲಿ ಲೂಟಿಯನ್ನು ಕಾಂಗ್ರೆಸ್ ಪಕ್ಷ ಸಮರ್ಥಿಸುವುದೇ ಎಂದು ಪ್ರಶ್ನೆ ಹಾಕಿದರು. ಯಾಕೆ ಇವತ್ತಿನವರೆಗೂ ಎಸ್‌ಐಟಿ ರಚಿಸಿಲ್ಲ? ಎಂದರು.



ಭಾರತೀಯ ಜನತಾ ಪಾರ್ಟಿ ಚಾಮರಾಜಪೇಟೆ ಮಂಡಲದ ವತಿಯಿಂದ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಚುನಾವಣಾ ಅಧಿಕಾರಿ ಶ್ರೀಮತಿ ಗುಲ್ತಾಜ್ ಫಾತಿಮಾ ರವರಿಗೆ, ದೂರು ಸಲ್ಲಿಸಿದ ಬಿಜೆಪಿ ನಿಯೋಗ..

## ಅಮಾಯಕರ ಬಂಧನ ವಿರೋಧಿಸಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ಕೆಂಪೇಗೌಡ ಜಯಂತಿ ವೇಳೆ ನಡೆದ ಗದ್ದಲ ಪ್ರಕರಣದಲ್ಲಿ ಅಮಾಯಕರನ್ನು ಬಂಧಿಸಲಾಗಿದೆ. ಆದರೆ ಘಟನೆಗೆ ಪ್ರಚೋದನೆ ನೀಡಿದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಮೊನ್ನೆಯಷ್ಟೇ ಎನ್‌ಡಿಎ ನಿಯೋಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿತ್ತು.ಅದರ ಮುಂದುವರಿದ ಭಾಗವಾಗಿ ಇದೇ ತಿಂಗಳ 8ರಂದು ಚಿಕ್ಕಬಳ್ಳಾಪುರದಲ್ಲಿ ಅಮಾಯಕರ ಬಂಧನ ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮುಕ್ತಾ ಮುನಿಯಪ್ಪ ತಿಳಿಸಿದರು.

ಬುಧವಾರ ನಗರದ ಪಕ್ಷದ ಜಿಲ್ಲಾ ಕಚೇರಿಯಲ್ಲಿ ನಡೆದ ಪ್ರತಿಭಟನೆ ಕುರಿತ ಪೂರ್ವಭಾವಿ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಮುಕ್ತ ಮುನಿಯಪ್ಪ,ಕೆಂಪೇಗೌಡ ಜಯಂತಿ ಸಂದರ್ಭದಲ್ಲಿ ನಡೆದ ಘಟನೆಗೆ ಪ್ರಚೋದನೆಯೂ ಪ್ರಮುಖ ಕಾರಣವಾಗಿದೆ



ಈ ಹಿನ್ನೆಲೆಯಲ್ಲಿ ಸಂಬಂಧಿತ ಶಾಸಕರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸರಿಗೆ ಮನವಿ ಸಲ್ಲಿಸಲಾಗಿದೆ.ಆದರೆ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಲ್ಲದೆ, ಪ್ರಕರಣದಲ್ಲಿ ಇನ್ನೂ ಹೆಚ್ಚಿನ ಮಂದಿಯನ್ನು ಆರೋಪಿಗಳೆಂದು ಗುರುತಿಸಿ ಬಂಧಿಸುವ ಸಾಧ್ಯತೆ ಇದೆ ಎಂಬ ಭಯದಿಂದ ಕೆಲವರು ತಮ್ಮ ಅಳಲನ್ನು ವ್ಯಕ್ತಪಡಿಸಿದ್ದಾರೆ.ಈ ಎಲ್ಲಾ ಬೆಳವಣಿಗೆಗಳನ್ನು ಖಂಡಿಸಿ ಎನ್‌ಡಿಎ ವತಿಯಿಂದ ಜುಲೈ 8ರಂದು ಚಿಕ್ಕಬಳ್ಳಾಪುರದಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

## ಸಾಲ ಸಂಕಷ್ಟಕ್ಕೆ ಬಲಿಯಾದ ರೈತ

• ಮಲ್ಲಮ್ಮ ನುಡಿ ವಾರ್ತೆ ಆಳಂದ್

ಸಾಲದ ಹೊರೆ ಹಾಗೂ ಸಾಲದಾತರ ಒತ್ತಡ ತಾಳಲಾರದೆ 19 ವರ್ಷದ ಯುವ ರೈತನೊಬ್ಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ಆಳಂದ ತಾಲೂಕಿನ ಬೆಣ್ಣೆಶಿರೂರು ಗ್ರಾಮದಲ್ಲಿ ನಡೆದಿದೆ.



ಆತ್ಮಹತ್ಯೆಗೆ ಶರಣಾದ ಯುವ ರೈತನನ್ನು ಬೆಣ್ಣೆಶಿರೂರು ಗ್ರಾಮದ ಯಲ್ಲಾಲಿಂಗ ಬಂಡಗಾರ (19) ಎಂದು ಗುರುತಿಸಲಾಗಿದೆ.

ಕುಟುಂಬದವರ ಮಾಹಿತಿ ಪ್ರಕಾರ, ಯಲ್ಲಾಲಿಂಗ ಕೃಷಿ ಚಟುವಟಿಕೆಗಳಿಗಾಗಿ ಸಮೀಪದ ಮಾಡ್ಯಾಳ ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಿಂದ ಸುಮಾರು 1.35 ಲಕ್ಷ ರೂಪಾಯಿ ಕೃಷಿ ಸಾಲ ಪಡೆದಿದ್ದ. ಇದಲ್ಲದೆ, ಕೃಷಿ ವೆಚ್ಚ ಹಾಗೂ ಇತರೆ ಅಗತ್ಯಗಳಿಗಾಗಿ ಖಾಸಗಿಯಾಗಿ 5 ಲಕ್ಷರೂಪಾಯಿಗೂ ಅಧಿಕ ಸಾಲ ಮಾಡಿದ್ದ ಎನ್ನಲಾಗಿದೆ.

ಸಾಲ ಮರುಪಾವತಿಗಾಗಿ ಸಾಲದಾತರು ನಿರಂತರವಾಗಿ ಒತ್ತಡ ಹೇರಿದ್ದರಿಂದ ಯಲ್ಲಾಲಿಂಗ ಮಾನಸಿಕವಾಗಿ ತೀವ್ರ ನೊಂದಿದ್ದ. ಇದೇ ಕಾರಣದಿಂದ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಕುಟುಂಬದವರು ಆರೋಪಿಸಿದ್ದಾರೆ. ಘಟನೆಯ ಮಾಹಿತಿ ತಿಳಿದು ನಿಂಬರ್ಗಾ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.ಇದೇ ವೇಳೆ, ಯುವ ರೈತನ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಿಸಾನ್ ಸಭಾ ಜಿಲ್ಲಾ ಅಧ್ಯಕ್ಷ ಭೀಮಶಂಕರ್ ಮಾಡ್ಯಾಳ್ ರಾಜ್ಯ ಸರ್ಕಾರವನ್ನು ತಕ್ಷಣ ಮಧ್ಯಪ್ರವೇಶಿಸಿ ಮೃತ ರೈತನ ಕುಟುಂಬಕ್ಕೆ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕು ಹಾಗೂ ಕುಟುಂಬದ ಸದಸ್ಯರಿಗೆ ಅಗತ್ಯ ನೆರವು ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಆತ್ಮಸಾಕ್ಷಿಗೆ ತಕ್ಕ ಕಾರ್ಯ

## ನಿರ್ಭೀತ ಪತ್ರಿಕಾ ವೃತ್ತಿ ಸವಾಲನ್ನು ವೃತ್ತಿಪರತೆಯಿಂದ ಗೆಲ್ಲಿ: ಸಿಎಂ ಡಿ.ಕೆ. ಶಿವಕುಮಾರ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನಿರ್ಭೀತಿಯ ಪತ್ರಿಕಾ ವೃತ್ತಿ ಇಂದಿನ ಸಂದರ್ಭದಲ್ಲಿ ಅತ್ಯಂತ ಸವಾಲಿನ ಕೆಲಸವಾಗಿದೆ ಎಂದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ತತ್ವಬದ್ಧ ವೃತ್ತಿಪರತೆ ಇಂದಿನ ಅಗತ್ಯವಾಗಿದೆ. ಇದರಿಂದ ಆ ಸವಾಲನ್ನು ಗೆಲ್ಲಬಹುದು ಎಂದು ಹೇಳಿದ್ದಾರೆ.

**ಸಮಾಜಕ್ಕೆ ಒಳಿತು:** ಪತ್ರಕರ್ತರು ವೃತ್ತಿಯ ತತ್ವ, ನೈತಿಕತೆ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದರೆ ಸಮಾಜಕ್ಕೆ ಒಳಿತಾಗುತ್ತದೆ. ಫೇಕ್ ನ್ಯೂಸ್‌ನಿಂದ ಪತ್ರಿಕಾ ವೃತ್ತಿ ಹೊರಬರಬೇಕಿದೆ ಎಂದು ಅವರು ಹೇಳಿದ್ದಾರೆ.

**ಸಂಪೂರ್ಣ ತಪ್ಪು ಸುದ್ದಿ:** ನಾನು ಬೆಳಗ್ಗೆ ಸಾಮಾನ್ಯ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಹೋಗಿದ್ದೆ. ಆದರೆ, ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದು ಕೆಲವು ಟಿವಿ ವಾಹಿನಿಗಳು ಪ್ರಸಾರ ಮಾಡಿದ್ದವು. ಇದು ಸಂಪೂರ್ಣ ತಪ್ಪು ಸುದ್ದಿ," ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮಹಾತ್ಮ ಗಾಂಧಿ ಸೇರಿದಂತೆ ಅನೇಕ ಮಹನೀಯರು ಪತ್ರಕರ್ತರಾಗಿ ಪತ್ರಿಕಾ ವೃತ್ತಿಯ ಘನತೆಯನ್ನು ಹೆಚ್ಚಿಸಿದ್ದಾರೆ. ಆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಯಾಕೆಂದರೆ ಅಂತಹ ಗುರುತರ ಹೊಣೆಗಾರಿಕೆ ನಿಮ್ಮ ಮೇಲೆ ಇದೆ. ನೀವೇ ಅದನ್ನ ನೆರವೇರಿಸದಿದ್ದಾರೆ ಆರೋಗ್ಯಕರ ಸಮಾಜಕ್ಕೆ ಬೇರೆ ರೀತಿಯ ಸಂದೇಶ ಹೋದಂತಾಗುತ್ತದೆ.

–ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

### ತಲ್ಲಾಟದಿಂದ ತೊಂದ್ರೆ

ಮೇಕೆದಾಟು ಪಾದಯಾತ್ರೆಯ ವೇಳೆ ನಿತ್ರಾಣಗೊಂಡು ಕಾರ್ಯಕರ್ತರ ತಳ್ಳಾಟದಿಂದ ತೊಂದರೆಯಾಗಿದ್ದ ಘಟನೆಯನ್ನು ಕುಡಿದು ನಡೆದುಕೊಂಡು ಬರುತ್ತಿದ್ದಾರೆ ಎಂಬ ರೀತಿಯಲ್ಲಿ ಬಿಂಬಿಸಲಾಗಿತ್ತು. ಇದು ಜನರಿಗೆ ತಪ್ಪು ಸಂದೇಶ ನೀಡುವ ಉದ್ದೇಶಪೂರ್ವಕ ಪ್ರಯತ್ನವಾಗಿತ್ತು ಎಂದು ಅವರು ಟೀಕಿಸಿದ್ದಾರೆ.

### ಸುಳ್ಳು ಸುದ್ದಿ ಬೇಡ

ನಾನು ತಪ್ಪು ಮಾಡಿದರೆ ಅದನ್ನು ಬಹಿರಂಗಪಡಿಸಿ. ಆದರೆ ಸುಳ್ಳು ಸುದ್ದಿಗಳನ್ನು ಪ್ರಕಟಿಸಬೇಡಿ, ಪ್ರಸಾರ ಮಾಡಬೇಡಿ. ಸುದ್ದಿ ಪ್ರಕಟವಾಗುವವರೆಗೆ ಅದು ಪತ್ರಕರ್ತರದ್ದಾಗಿರುತ್ತದೆ. ಪ್ರಕಟವಾದ ನಂತರ ಅದು ಸಮಾಜದ ಆಸ್ತಿಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಸುದ್ದಿಯಲ್ಲೂ ಸತ್ಯ ಮತ್ತು ಪ್ರಾಮಾಣಿಕತೆ ಇರಬೇಕು," ಎಂದು ಅವರು ಕಿವಿಮಾತು ಹೇಳಿದ್ದಾರೆ.

## ಪ್ರಜಾಪ್ರಭುತ್ವದ ಯಶಸ್ಸಿಗೆ ಮಾಧ್ಯಮದ ಪಾತ್ರ..!

• ಮಲ್ಲಮ್ಮ ನುಡಿ ವಾರ್ತೆ ಹೊನ್ನಾಳಿ

ಸಮಾಜದ ತಪ್ಪು ತಿದ್ದುವ, ಜನಾಭಿಪ್ರಾಯ ಮೂಡಿಸುವ ಮಾಧ್ಯಮಗಳು ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.



ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ 91ನೇ ವರ್ಷದ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು ಇಂದು ಪತ್ರಿಕಾ ದಿವಾಗಿದ್ದು, ಈ ಸಮಾರಂಭದಲ್ಲಿ ಪತ್ರಕರ್ತರನ್ನು ಪುರಸ್ಕರಿಸಲಾಗುತ್ತಿದೆ. ಇಂದು ಪ್ರಶಸ್ತಿ ಪಡೆಯುತ್ತಿರುವ ಎಲ್ಲ ಪತ್ರಕರ್ತರಿಗೂ ಅಭಿನಂದನೆಗಳು ಹಾಗೂ ಎಲ್ಲ ಮಾಧ್ಯಮ ಮಿತ್ರರಿಗೂ ಪತ್ರಿಕಾ ದಿನದ ಶುಭಾಶಯಗಳನ್ನು ಸಲ್ಲಿಸುತ್ತೇನೆ ಎಂದರು. ಹಿಂದೆ ಅರಣ್ಯ ಸಚಿವನಾಗಿದ್ದಾಗ ಪ್ರಕೃತಿ ಪರಿಸರ ಉಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾಗಿ ಹೇಳಿದ ಅವರು, ಪ್ರಸ್ತುತ ಗ್ರಾಮೀಣಾಭಿವೃದ್ಧಿ ಸಚಿವನಾಗಿ ಜನರ ನಿರೀಕ್ಷೆಯಂತೆ ಕೆಲಸ ಮಾಡುವುದಾಗಿ ತಿಳಿಸಿದರು.

## ಗಾಂಜಾ ಮಾರಾಟ: ಮೂವರ ಬಂಧನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರ ಪೋಲಿಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ವಿವಿಧ ಪೋಲಿಸ್ ಠಾಣೆಗಳ ವ್ಯಾಪ್ತಿಯಲ್ಲಿ ಪೋಲಿಸರು ಕಾರ್ಯಾಚರಣೆ ಕೈಗೊಂಡು ನಿಷೇಧಿತ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿ, ಸುಮಾರು 2.60 ಲಕ್ಷ ರೂ.ಗಳ ಮೌಲ್ಯದ 2 ಕೆಜಿ 600 ಗ್ರಾಮ್ ಗಾಂಜಾ ವಶಪಡಿಸಿಕೊಂಡಿದ್ದಾರೆ. ಬಂಧಿತರನ್ನು ಮೂಲತ: ಮಹಾರಾಷ್ಟ್ರದ ಮುಂಬಯಿನ ಖಿಡಿಪಾರ್ ದಾವೂದ್ ಕಿರಾಣಿ ಅಂಗಡಿ ಹತ್ತಿರದ ಲಾರಿ ಕ್ಲೀನರ್, ಹಾಲಿ



ವಸ್ತಿ ಮಿಜಗುರಿಯ ನಿವಾಸಿ ಲದಾಫ್ ಬಸೀರ್ ಹಸನ್ ತಂದೆ ಹಸನ್ ಲದಾಫ್ (42), ಮಹಾರಾಷ್ಟ್ರದ ಅಪ್ಪಕಿ ಚಾವಿಂ ಪ್ರದೇಶದ ಗೌಂಡಿ ಕೆಲಸಗಾರ, ಕುತುಬುದ್ದೀನ್ ತಂದೆ ಮೈಬೂಬ್ ಶೇಖ್ (50) ಹಾಗೂ ಅಬ್ದುಲ್ ಗನಿ ತಂದೆ ಹಾಶೀಮ್ ಶೇಖ್ (41) ಎಂದು ಗುರುತಿಸಲಾಗಿದೆ.

## ಮಾದಕ ದ್ರವ್ಯ ಸೇವನೆಯೇ ಅಪಾಯಕಾರಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಯುವ ರೆಡ್ ಕ್ರಾಸ್ ಘಟಕ, ಕೆಬಿಎನ್ ವಿಶ್ವವಿದ್ಯಾಲಯ ಮತ್ತು ಖಾಜಾ ಬಂದನವಾಜ್ ವಿಶ್ವವಿದ್ಯಾಲಯವು ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಮತ್ತು ಆರೋಗ್ಯಕರ, ಮಾದಕ ರಹಿತ ಜೀವನಶೈಲಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 30 ಜೂನ್ 2026 ರಂದು ಕೆಬಿಎನ್ ವಿಶ್ವವಿದ್ಯಾಲಯದ ಅನ್ಯಾಟಮಿ ಹಾಲ್‌ನಲ್ಲಿ ಮಾದಕ ದ್ರವ್ಯ ಸೇವನೆ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದೆ.

ಮುಖ್ಯ ಸಂಪನ್ಮೂಲ ವ್ಯಕ್ತಿಗಳಾದ ಸರ್ಕಲ್ ಪೊಲೀಸ್ ಅಧಿಕಾರಿ ಶ್ರೀ ದಿಲೀಪ್ ಕುಮಾರ್ ಸಾಗರ್ ಮತ್ತು ಸಹಾಯಕ ಪಿಎಸ್‌ಐ ಶ್ರೀ ಸಿಕಂದರ್ ಅವರು ಮಾದಕ ದ್ರವ್ಯ ಸೇವನೆಯ ಅಪಾಯಗಳು, ಅದರ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಕಾನೂನು ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡಿದರು. ಜವಾಬ್ದಾರಿಯುತ ಆಯ್ಕೆಗಳನ್ನು ಮಾಡುವ ಪ್ರಾಮುಖ್ಯತೆಯನ್ನು ಒತ್ತಿಹೇಳಿದರು.

ಕೆಬಿಎನ್ ವಿಶ್ವವಿದ್ಯಾನಿಲಯದ ಯೂತ್ ರೆಡ್ ಕ್ರಾಸ್ ಘಟಕದ ನೋಡಲ್ ಅಧಿಕಾರಿ ಡಾ.ಗಜಾಲಾ ಶೈರೀನ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಫಾರ್ಮ್ಸ್ ಡೀನ್ ಡಾ.ಗುರುಪ್ರಸಾದ್, ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಡಾ.ಅನುಪ್ ದೇಸಾಯಿ ಮತ್ತು ವೈದ್ಯಕೀಯ ವಿಜ್ಞಾನ ವಿಭಾಗದ ಸಹಾಯಕ ಡೀನ್ ಡಾ.ಗೀತಾಂಜಲಿ ಉಪಸ್ಥಿತರಿದ್ದರು.



### ಯುವಕರ ಪಾತ್ರ ಅರ್ಥ ಮಾಡಿಕೊಳ್ಳಲು ಅನುವು

ಕೆಬಿಎನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಸಂವಾದಾತ್ಮಕ ಅಧಿವೇಶನವು ವಿದ್ಯಾರ್ಥಿಗಳು ತಮ್ಮ ಅನುಮಾನಗಳನ್ನು ಸ್ಪಷ್ಟಪಡಿಸಲು ಮತ್ತು ಮಾದಕ ದ್ರವ್ಯ ಸೇವನೆಯನ್ನು ತಡೆಗಟ್ಟುವಲ್ಲಿ ಮತ್ತು ಮಾದಕ ದ್ರವ್ಯ ಮುಕ್ತ ಸಮಾಜವನ್ನು ಉತ್ತೇಜಿಸುವಲ್ಲಿ ಯುವಕರ ಪಾತ್ರವನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಟ್ಟಿತು.

## ಕಾರುಣ್ಣಿಮೆ ಸಂಭ್ರಮ ಸ್ಪರ್ಧೆ: ವಿಜೇತರಿಗೆ ಬೆಳ್ಳಿ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ತಾಲೂಕಿನ ಹಿರೇಜಂತಕಲ್ ಗ್ರಾಮದಲ್ಲಿ ಕಾರುಣ್ಣಿಮೆ ಹಬ್ಬದ ಅಂಗವಾಗಿ ಸಂಪ್ರದಾಯಬದ್ಧ ಎತ್ತು ಓಡಿಸುವ ಹಾಗೂ ಕರಿ ಬಿಡಿಸುವ ಸ್ಪರ್ಧೆ ವಿಜೃಂಭಣೆಯಿಂದ ನಡೆಯಿತು.

ಸ್ಪರ್ಧೆಯಲ್ಲಿ ಸುಮಾರು 10 ರಿಂದ 20 ಜೋಡಿ ಎತ್ತುಗಳು ಭಾಗವಹಿಸಿ ತಮ್ಮ ಶಕ್ತಿ ಹಾಗೂ ಚುರುಕುತನವನ್ನು ಪ್ರದರ್ಶಿಸಿದವು. ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಊರಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧೆಯನ್ನು ಕಣ್ತುಂಬಿಕೊಂಡರು.

ಗುರುಹಿರಿಯರ ನಿರ್ಧಾರದಂತೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಬಹುಮಾನವಾಗಿ ₹10,000 ನಗದು ಹಾಗೂ 25 ಗ್ರಾಂ ಬೆಳ್ಳಿ ಸರ ನೀಡಿ ಗೌರವಿಸಲಾಯಿತು. ಸುನಿಲ್ ಆರತಿ ಅವರು ನಗದು ಬಹುಮಾನವನ್ನು ನೀಡಿದರೆ, ಮಂಜುನಾಥ್ ಅವರು 25 ಗ್ರಾಂ ಬೆಳ್ಳಿ ಸರವನ್ನು ಪ್ರಾಯೋಜಿಸಿದರು.

ಈ ಸಂದರ್ಭದಲ್ಲಿ ರಾಮು ಕಿರಿಕಿರಿ ಅವರು ಪ್ರತಿ ವರ್ಷದಂತೆ ಈ ವರ್ಷವೂ ಕಾರ್ಯಕ್ರಮದಲ್ಲಿ ಭಾಗವಹಿಸಿ, ಎತ್ತು ಓಡಿಸುವ ಸ್ಪರ್ಧೆಯ ವಿಜೇತರಿಗೆ ಟ್ರೋಫಿ ನೀಡಿ ಗೌರವಿಸಿ, ಸ್ಪರ್ಧಾಳುಗಳ ಉತ್ಸಾಹವನ್ನು ಹೆಚ್ಚಿಸಿದರು. ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ಗುರುಹಿರಿಯರು ಹಾಗೂ ಗಂಗಾವತಿಯ ಗಣ್ಯರು ವಿತರಿಸಿದರು. ಸ್ಪರ್ಧೆಗೆ ಆಗಮಿಸಿದ್ದ ಎತ್ತುಗಳನ್ನು ಬಣ್ಣಬಣ್ಣದ ಅಲಂಕಾರಗಳಿಂದ ಸಿಂಗರಿಸಲಾಗಿತ್ತು. ಕಾರುಣ್ಣಿಮೆ ಹಬ್ಬದ ಸಂಭ್ರಮದಲ್ಲಿ ಗ್ರಾಮಸ್ಥರು ಸಂಪ್ರದಾಯದಂತೆ ಎತ್ತುಗಳನ್ನು ಓಡಿಸುವ ಮೂಲಕ ಹಬ್ಬವನ್ನು ಸಡಗರದಿಂದ ಆಚರಿಸಿದರು.



**SIR ಪ್ರಕ್ರಿಯೆಗೆ ರಾಜ್ಯ ಸರ್ಕಾರವೇ ಅಡ್ಡಿ; ಕಾಂಗ್ರೆಸ್ ನಾಯಕರನ್ನೇ BLOಗಳಾಗಿ ನೇಮಿಸಿದ್ದಾರೆ: ಆರ್. ಅಶೋಕ್ ಆರೋಪ**

# ಪತ್ರಿಕೆಗಳು ಬಡವರ ಧ್ವನಿಯಾಗಿ ಕಾರ್ಯ ನಿರ್ವಹಿಸಬೇಕು

ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವೆಂದು ಕರೆಯಲ್ಪಡುವ ಪತ್ರಿಕಾರಂಗವು ಸಮಾಜದ ಸಮಸ್ಯೆಗಳನ್ನು ಬೆಳಕಿಗೆ ತರುವ ಮಹತ್ತರ ಜವಾಬ್ದಾರಿಯನ್ನು ಹೊಂದಿದೆ. ಅದರಲ್ಲೂ ಸಮಾಜದ ದುರ್ಬಲ ವರ್ಗಗಳು, ಬಡವರು, ರೈತರು, ಕಾರ್ಮಿಕರು ಹಾಗೂ ಶೋಷಿತ ಜನರ ಧ್ವನಿಯಾಗಿ ಪತ್ರಿಕೆಗಳು ಕಾರ್ಯನಿರ್ವಹಿಸಿದಾಗ ಮಾತ್ರ ಮಾಧ್ಯಮದ ನಿಜವಾದ ಉದ್ದೇಶ ಸಾರ್ಥಕವಾಗುತ್ತದೆ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಇಂದಿನ ಸಮಾಜದಲ್ಲಿ ಅನೇಕ ಬಡ ಕುಟುಂಬಗಳು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸರ್ಕಾರಿ ಯೋಜನೆಗಳ ಲಾಭ ಹಲವರಿಗೆ ತಲುಪುತ್ತಿಲ್ಲ. ಅನ್ಯಾಯ, ಭ್ರಷ್ಟಾಚಾರ, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸಾಮಾಜಿಕ ಅಸಮಾನತೆಗಳಿಂದ ಸಾಮಾನ್ಯ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರ ಸಮಸ್ಯೆಗಳನ್ನು ಸರ್ಕಾರ ಮತ್ತು ಸಮಾಜದ ಗಮನಕ್ಕೆ ತರುವ ಕೆಲಸವನ್ನು ಪತ್ರಿಕೆಗಳು ಪ್ರಾಮಾಣಿಕವಾಗಿ ಮಾಡಬೇಕು.

ಸುದ್ದಿ ಎಂದರೆ ಕೇವಲ ರಾಜಕೀಯ ಬೆಳವಣಿಗೆಗಳು ಅಥವಾ ಸಂಚಲನಕಾರಿ ಘಟನೆಗಳಷ್ಟೇ ಅಲ್ಲ. ಗ್ರಾಮೀಣ ಪ್ರದೇಶಗಳ ಸಮಸ್ಯೆಗಳು, ರೈತರ ನೋವು, ಕಾರ್ಮಿಕರ ಹಕ್ಕುಗಳು, ಮಹಿಳೆಯರು ಮತ್ತು ಮಕ್ಕಳ ಸಂಕಷ್ಟಗಳು, ಬಡವರ ಬದುಕಿನ ಹೋರಾಟವೂ ಸುದ್ದಿಯಾಗಬೇಕು. ಇಂತಹ ವರದಿಗಳು ಸಮಾಜದಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಅಧಿಕಾರಿಗಳನ್ನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತವೆ.

ಪತ್ರಿಕಾರಂಗವು ಯಾವುದೇ ಒತ್ತಡ ಅಥವಾ ಪ್ರಭಾವಕ್ಕೆ ಒಳಗಾಗದೆ ನಿಷ್ಪಕ್ಷಪಾತವಾಗಿ ಜನಪರ ನಿಲುವು ತಾಳಬೇಕು. ಸತ್ಯವನ್ನು ನಿರ್ಭೀತಿಯಿಂದ ಪ್ರಕಟಿಸಿ, ನ್ಯಾಯಕ್ಕಾಗಿ ಧ್ವನಿ ಎತ್ತಿದಾಗ ಮಾತ್ರ ಜನರ ವಿಶ್ವಾಸ ಮತ್ತಷ್ಟು ಬಲವಾಗುತ್ತದೆ.

ಬಡವರ ಕಣ್ಣೀರಿಗೆ ಧ್ವನಿಯಾಗುವ, ಶೋಷಿತರ ಪರವಾಗಿ ನಿಲ್ಲುವ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವ ಪತ್ರಿಕೆಗಳೇ ಸಮಾಜದ ಅಭಿವೃದ್ಧಿಗೆ ನಿಜವಾದ ಕೊಡುಗೆ ನೀಡಬಲ್ಲವು. ಆದ್ದರಿಂದ ಪ್ರತಿಯೊಂದು ಪತ್ರಿಕೆಯೂ ಜನರ ಸಮಸ್ಯೆಗಳಿಗೆ ಆದ್ಯತೆ ನೀಡಿ, ಬಡವರ ಆಶಾಕಿರಣವಾಗಿ ಕಾರ್ಯನಿರ್ವಹಿಸಬೇಕು. ಅದುವೇ ಪತ್ರಿಕಾರಂಗದ ನೈತಿಕ ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಯಶಸ್ಸಿನ ಮೂಲಾಧಾರವಾಗಿದೆ.

# ಖ್ಯಾತ ವೈದ್ಯ ಡಾ. ಬಂಡ್ರಿ ವಿಶ್ವನಾಥ್‌ಗೆ ದಲಿತ ಸಂಘರ್ಷ ಸಮಿತಿಯಿಂದ ಗೌರವ ಸನ್ಮಾನ



**ಹಗರಿಬೊಮ್ಮನಹಳ್ಳಿ:** ಅಂತಾರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಹಗರಿಬೊಮ್ಮನಹಳ್ಳಿಯ ಹೆಸರಾಂತ ವೈದ್ಯರಾದ ಡಾ. ಬಂಡ್ರಿ ವಿಶ್ವನಾಥ್ ಅವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ–47/74–75) ಹಗರಿಬೊಮ್ಮನಹಳ್ಳಿ ತಾಲೂಕು ಸಮಿತಿಯ ವತಿಯಿಂದ ಗೌರವ ಸನ್ಮಾನ ಸಲ್ಲಿಸಲಾಯಿತು.

ತಾಲೂಕು ಸಮಿತಿ ಅಧ್ಯಕ್ಷರಾದ ಪರಶುರಾಮ್ ಹೆಗ್ಡಾಳ್ ಅವರ ನೇತೃತ್ವದಲ್ಲಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಡಾ. ಬಂಡ್ರಿ ವಿಶ್ವನಾಥ್ ಅವರ ಆಸ್ಪತ್ರೆಗೆ ಭೇಟಿ ನೀಡಿ, ಹೂಗುಚ್ಛ ನೀಡಿ ಶಾಲು ಹೊದಿಸಿ ಆತ್ಮೀಯವಾಗಿ ಅಭಿನಂದಿಸಿದರು. ವೈದ್ಯರ ಸಮಾಜಮುಖಿ ಸೇವೆಯನ್ನು ಕೊಂಡಾಡಿ, ಅವರ ಆರೋಗ್ಯ, ಆಯುಷ್ಯ ಮತ್ತು ನಿರಂತರ ಸೇವೆಗೆ ಶುಭ ಹಾರೈಸಿದರು.

"ವೈದ್ಯೋ ನಾರಾಯಣೋ ಹರಿ" ಎಂಬ ನುಡಿಯಂತೆ ವೈದ್ಯರು ಭೂಮಿಯ ಮೇಲಿನ ದೇವರ ಪ್ರತಿರೂಪರಾಗಿದ್ದಾರೆ. ಆ ಮಾತಿಗೆ ಜೀವಂತ ಉದಾಹರಣೆಯಾಗಿ ಡಾ. ಬಂಡ್ರಿ ವಿಶ್ವನಾಥ್ ಅವರು ಹಲವು ವರ್ಷಗಳಿಂದ ಹಗರಿಬೊಮ್ಮನಹಳ್ಳಿ ತಾಲೂಕಿನ ಜನರಿಗೆ ನಿಸ್ವಾರ್ಥ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಆಸ್ಪತ್ರೆಯ ಬಾಗಿಲು ತಟ್ಟುವ ಪ್ರತಿಯೊಬ್ಬ ರೋಗಿಗೂ ಮೊದಲಿಗೆ ಧೈರ್ಯ ತುಂಬುವ ಮಾತುಗಳ ಮೂಲಕ ಆತ್ಮಸ್ಥೈರ್ಯ ನೀಡುವುದು, ನಂತರ ಸೂಕ್ತ ಚಿಕಿತ್ಸೆಯನ್ನು ಒದಗಿಸುವುದು ಅವರ ವಿಶೇಷ ಗುಣವಾಗಿದೆ ಎಂದು ಪದಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿನಿತ್ಯ ನೂರಾರು ಸಂಖ್ಯೆಯಲ್ಲಿ ಆಸ್ಪತ್ರೆಗೆ ಆಗಮಿಸುವ ಅನಾರೋಗ್ಯ ಪೀಡಿತರಿಗೆ ಯಾವುದೇ ಬೇಧಭಾವವಿಲ್ಲದೆ, ಶಾಂತ, ಸೌಮ್ಯ ಹಾಗೂ ಮಾನವೀಯ ಮನೋಭಾವದಿಂದ ಚಿಕಿತ್ಸೆ ನೀಡುತ್ತಿರುವ ಡಾ. ವಿಶ್ವನಾಥ್ ಅವರು ತಾಲೂಕಿನ ಜನರ ವಿಶ್ವಾಸವನ್ನು ಗಳಿಸಿರುವ ಅಪರೂಪದ ವೈದ್ಯರಾಗಿದ್ದಾರೆ. ಅವರ ಸರಳತೆ, ಸೇವಾ ಮನೋಭಾವ ಹಾಗೂ ರೋಗಿಗಳೊಂದಿಗೆ ತೋರುವ ಆತ್ಮೀಯತೆ ಅವರನ್ನು ಜನಮನದ ವೈದ್ಯರನ್ನಾಗಿ ರೂಪಿಸಿದೆ ಎಂದು ಸಮಿತಿಯ ಮುಖಂಡರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಪರಶುರಾಮ್ ಹೆಗ್ಡಾಳ್, "ಸಮಾಜದಲ್ಲಿ ವೈದ್ಯರ ಸೇವೆ ಅತ್ಯಂತ ಅಮೂಲ್ಯವಾದದ್ದು. ಅನಾರೋಗ್ಯದಿಂದ ಬಳಲುವ ಜನರಿಗೆ ಹೊಸ ಜೀವನ ನೀಡುವ ವೈದ್ಯರು ನಿಜವಾದ ಮಾನವತಾವಾದಿಗಳು. ಡಾ. ಬಂಡ್ರಿ ವಿಶ್ವನಾಥ್ ಅವರು ತಮ್ಮ ಸೇವಾ ಮನೋಭಾವದಿಂದ ಸಾವಿರಾರು ಕುಟುಂಬಗಳ ಆಶಾಕಿರಣವಾಗಿದ್ದಾರೆ. ದೇವರು ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ನೀಡಿ ಇನ್ನಷ್ಟು ವರ್ಷಗಳ ಕಾಲ ಜನಸೇವೆ ಮಾಡುವ ಶಕ್ತಿ ನೀಡಲಿ" ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ತಾಲೂಕು ದಲಿತ ಸಂಘರ್ಷ ಸಮಿತಿಯ ಸಂಘಟನಾ ಸಂಚಾಲಕರಾದ ಮರಿಯಪ್ಪ ದಶಮಾಪುರ, ಪಕೀರಪ್ಪ ಕಡಲಬಾಳು, ಜಿಲ್ಲಾ ಸಂಘಟನಾ ಸಂಚಾಲಕರಾದ ನಾಗರಾಜ್ ಕಲ್ಲಹಳ್ಳಿ, ತಾಲೂಕು ಖಜಾಂಚಿ ರಮೇಶ್ ಚಿಂತ್ರಪಳ್ಳಿ, ಹೆಚ್.ಎಂ. ಬಸವರಾಜ್, ಕೇಚ್ಚಿನಬಂಡಿ ಗೋಣೆಪ್ಪ, ಮದ್ದಾನಸ್ವಾಮಿ, ಕೋಗಳಿ ಮೈಲಪ್ಪ ಸೇರಿದಂತೆ ಅನೇಕ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದು, ವೈದ್ಯರಿಗೆ ಗೌರವ ನಮನ ಸಲ್ಲಿಸಿದರು.

# ಸ್ಟಾರ್ಟ್‌ಅಪ್ ನಿರ್ಮಾಣಕ್ಕೆ ವೇದಿಕೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಕಲಬುರಗಿ ಆಡಳಿತವು ಕೆಡಿಇಎಂ (KDEM) ಸಹಭಾಗಿತ್ವದಲ್ಲಿ "ಕಲಬುರಗಿ ರೊಟ್ಟಿ ಗ್ಲೋಬಲ್ ಚಾಲೆಂಜ್ 2026" ಅನ್ನು ಆಯೋಜಿಸುತ್ತಿದೆ. ನಮ್ಮ GIಟ್ಯಾಗ್ ಪಡೆದ ಕಲಬುರಗಿ ರೊಟ್ಟಿಯಿಂದ ಒಂದು ಆಹಾರ ಬ್ರ್ಯಾಂಡ್ ಕಟ್ಟುವುದು ನಮ್ಮ ಗುರಿಯಾಗಿದೆ. ಈ ಚಾಲೆಂಜ್ ಎಲ್ಲರಿಗೂ ಮುಕ್ತವಾಗಿದ್ದು, ವಿಶೇಷವಾಗಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಇತ್ತೀಚೆಗೆ ಪದವಿ ಪಡೆದವರನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಕಲ ಕಲ್ಬುರ್ಗಿ ಉಪ ವಿಭಾಗದ ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ ಹೇಳಿದರು.

ಬುಧುವಾರ, ನಗರದ ಜಗತ್ ವೃತ್ತದಲ್ಲಿರುವ ಸಹಾಯಕ ಆಯುಕ್ತರ ಕಚೇರಿಯಲ್ಲಿ ಕಲಬುರಗಿ ರೊಟ್ಟಿ ಜಾಗತಿಕ ಸವಾಲುಗಳು ಕುರಿತು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ಕಲಬುರಗಿ ರೊಟ್ಟಿ ಮತ್ತು ಸಂಬಂಧಿತ ಉತ್ಪನ್ನಗಳನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೇಗೆ ವಿಸ್ತರಿಸಬಹುದು ಎಂಬುದರ ಬಗ್ಗೆ ನಾವೀನ್ಯಪೂರ್ಣ ಆಲೋಚನೆಗಳನ್ನು ತರಲು ತಂಡಗಳನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಇದೆ 2026 ಜುಲೈ 6 ರಂದು ಗಿಖಿಗ ಪ್ರಾದೇಶಿಕ ಕೇಂದ್ರದಲ್ಲಿ ತಂಡಗಳ ಪರಿಶೀಲನೆ (ಸ್ಕ್ರೀನಿಂಗ್) ನಡೆಯಲಿದ್ದು, ನಂತರ ಜುಲೈ 12, ರಂದು ಅಂತಿಮ ಸುತ್ತು ನಡೆಯಲಿದೆ. ಆಯ್ಕೆಯಾದ ತಂಡಕ್ಕೆ ಇನ್ಕ್ಯುಬೇಶನ್, ಸೀಡ್ ಫಂಡಿಂಗ್‌ಗೆ ನೆರವು ಹಾಗೂ ಅವರ ಸ್ಟಾರ್ಟ್‌ಅಪ್‌ಗೆ




ಮಾರ್ಗದರ್ಶನ ಬೆಂಬಲ ನೀಡಲಾಗುವುದು.

ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಆಸಕ್ತರು ಪೋಸ್ಟರ್‌ದಲ್ಲಿರುವ ಕಿಖ ಕೋಡ್ ಸ್ಕ್ಯಾನ್ ಮಾಡಿ ಇದೇ 2026ರ ಜುಲೈ 5ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಇದಕ್ಕೆ ಯಾವುದೇ ವಯಸ್ಸಿನ ಮಿತಿಯಿರುವುದಿಲ್ಲ. ಯಾವುದೇ ಸ್ಪಷ್ಟೀಕರಣ ಮತ್ತು ಸಂದೇಹಗಳಿಗೆ ಹಾಗೂ ಹೆಚ್ಚಿನ ಮಾಹಿತಿಗಾಗಿ ನೀಡಲಾದ ಏಆಇಒ ಸಹಾಯವಾಣಿ ಅ7259885680 ಸಂಖ್ಯೆಗೆ ಕರೆ ಮಾಡಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಲಬುರಗಿ ರೊಟ್ಟಿ ಗ್ಲೋಬಲ್ ಚಾಲೆಂಜ್ 2026 ರ ಪೋಸ್ಟರ್ ಬಿಡುಗಡೆ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರೊಬೇಷನರ್ ಐ.ಎ.ಎಸ್. ಅಧಿಕಾರಿ ಶಿಖರ ಮೋಘಾ, ಕೆ.ಡಿ.ಇ.ಎಂ. ಬಿಯಾಂಡ್ ಬೆಂಗಳೂರು ಉಪಾಧ್ಯಕ್ಷ ಚೇತನ ದಿಕ್ಷಿತ್, ಕ್ಲಸ್ಟರ್ ಹೆಡ್ ಸುಜಯ್ ಮುದಗಲ್ ಉಪಸ್ತಿತರಿದ್ದರು.

# ಬಸವ ಮಂಟಪದಲ್ಲಿ ಲಿಂಗಾನಂದ ಶ್ರೀಗಳ ಹಾಗೂ ಫ.ಗು. ಹಳಕಟ್ಟಿ ಸ್ಮರಣೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ**

ನಾಡಿನ ಉದ್ದಗಲಕ್ಕೂ ಸಂಚರಿಸಿ, ಗ್ರಂಥಸ್ಥ ವಚನ ಸಾಹಿತ್ಯವನ್ನು ಜನರ ಮನೆಮನಗಳ ಬಾಗಿಲಿಗೆ ತಲುಪಿಸಿದ ಮನಗೂಳಿಯ ಮಹಾಸಂತ ಪೂಜ್ಯ ಲಿಂಗಾನಂದ ಸ್ವಾಮಿಗಳು ಈ ನಾಡು ಕಂಡ ಅಪರೂಪದ ಬಸವಸುತರಾಗಿದ್ದಾರೆ ಎಂದು ಪೂಜ್ಯ ಶ್ರೀ ಡಾ.ಚನ್ನಬಸವಾನಂದ ಸ್ವಾಮೀಜಿ ತಿಳಿಸಿದರು.

ನಗರದ ಬಸವ ಮಂಟಪದಲ್ಲಿ ರಾಷ್ಟ್ರೀಯ ಬಸವ ದಳ, ಲಿಂಗಾಯತ ಸಮಾಜ ಮತ್ತು ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣ ವತಿಯಿಂದ ಆಯೋಜಿಸಿದ ಪ್ರವಚನ ಪಿತಾಮಹ ಪೂಜ್ಯ ಲಿಂಗಾನಂದ ಸ್ವಾಮಿಗಳ 31ನೇ ಲಿಂಗೈಕ್ಯ ಸಂಸ್ಮರಣೆ ಹಾಗೂ ಫ.ಗು. ಹಳಕಟ್ಟಿಯವರ ಸ್ಮರಣೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ತನ್ನ ಆದಾಯಕ್ಕಾಗಿ ಶಾಲಾ ಕಾಲೇಜು ತೆರೆಯದೆ, ಕೇವಲ ಭಾಷಣದಲ್ಲಿಯೂ ಕಾಲ ಕಳೆಯದೆ ಅಥವಾ ಬರೀ ಏಕಾಂಗಿಯಾಗಿ ತಪಸ್ಸಿನಲ್ಲೂ ಮುಳುಗದೆ, ನಿರಂತರವಾಗಿ ಹರಿವ ಗಂಗೆಯಂತೆ ನಾಡಿನ ಪ್ರತೀ ಹಳ್ಳಿಗಳಿಗೂ ತೆರಳಿ ಬಸವ ತತ್ವದ ಅರುಣೋದಯವನ್ನು ಬಾನ ದಿಗಂತಕ್ಕೆ ಪಸರಿಸಿದ ಬಸವ ತತ್ವದ ಮಹಾನ್ ಸಂತರಾಗಿದ್ದಾರೆ ಎಂದು ಪ್ರತಿಪಾದಿಸಿದರು. ಬಸವ ಮಂಟಪದ ಪೂಜ್ಯ ಸದ್ಗುರು ಮಾತೆ ಸತ್ಯಾದೇವಿ ಮಾತನಾಡಿ ಲಿಂಗಾನಂದ ಸ್ವಾಮಿಗಳು ಅನೇಕ ಕಷ್ಟ ಕಾರ್ಪಣ್ಯ ಅನುಭವಿಸಿ ಬಸವ ಪರಂಪರೆ



ಉಳಿಸಬೇಕೆಂದು ಶ್ರಮಿಸಿದ್ದಾರೆ ಎಂದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಶಿವಶರಣಪ್ಪ ಹುಗ್ಗೆಪಾಟೀಲ ಮಾತನಾಡಿ ನಾಲ್ಕು ದಶಕಗಳ ಹಿಂದೆ ಗುರು ಲಿಂಗಾನಂದರು ಬೀದರ ಜಿಲ್ಲೆಗೆ ಆಗಮಿಸಿ, ಪ್ರವಚನಗೈದು ಲಕ್ಷಾಂತರ ಬಸವ ಭಕ್ತರನ್ನು ತಯಾರಿಸಿ ಹೋಗಿದ್ದಾರೆ. ರಾಷ್ಟ್ರೀಯ ಬಸವ ದಳ ಮೂಲಕ ಇಂದು ಲಕ್ಷ ಲಕ್ಷ ಭಕ್ತರು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತಿ–ದ್ದಾರೆ. ಅವರ ಸಂಘಟನಾ ಶಕ್ತಿ, ಕಂಚಿನ ಕಂಠದ ಪ್ರವಚನ, ನಿಸ್ವಾರ್ಥ ಸೇವೆಯನ್ನು ಇಂದಿನ ಪೂಜ್ಯರು ಮತ್ತು ಕಾರ್ಯಕರ್ತರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಇದೇ ವೇಳೆ ನಿವೃತ್ತ ಶಿಕ್ಷಕ ಜಗನ್ನಾಥ ಮೂಲಗೆ ಷಟಸ್ಥಲ ಧ್ವಜಾರೋಹಣ ನೆರವೇರಿಸಿದರು. ವೇದಿಕೆ ಮೇಲೆ ಮುಖಂಡರಾದ ಶಿವರಾಜ ಶಟಕಾರ, ಶಿವರಾಜ ಪಾಟೀಲ ಅತಿವಾಳ, ಕಲ್ಲಪ್ಪ ದೇಶಮುಖ, ಮಲ್ಲಿಕಾರ್ಜುನ ಜೈಲರ್, ಹಾವಗಿರಾವ ವಟಗೆ, ರವಿಕಾಂತ ಬಿರಾದಾರ, ಓಂಪ್ರಕಾಶ ರೊಟ್ಟೆ, ಜಗದೀಶ್ ಬಿರಾದಾರ, ಗಣಪತಿ ಬಿರಾದಾರ, ನಿರ್ಮಲಾ ನಿಲಂಗೆ ಸೇರಿದಂತೆ ಹಲವರಿದ್ದರು. ಶಿವಕುಮಾರ ಪಾರಾ ನಿರೂಪಿಸಿದರು. ರವಿಕಾಂತ ಸ್ವಾಗತಿಸಿದರು.

# ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ಅವ್ಯವಹಾರ: ಕ್ರಮಕ್ಕೆ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಜಿಲ್ಲೆಯ 2025–26ನೇ ಸಾಲಿನ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ರಸ್ತೆ ದುರಸ್ತಿ ಮತ್ತು ಒಗ್ಗೂಡಿಸುವಿಕೆ ಕಾಮಗಾರಿಗಳನ್ನು ಕೈಗೊಳ್ಳದೇ ಸರ್ಕಾರದ ಕೋಟ್ಯಂತರ ರೂಪಾಯಿ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಸೇವೆಯಿಂದ ವಜಾಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರಜಾ ಶಕ್ತಿ ಸಮಿತಿ ಜಿಲ್ಲಾ ಘಟಕದ ವತಿಯಿಂದ ಜಿ.ಪಂ ಕಚೇರಿ ಎದುರಿಗೆ ಇಂದು ಒಂದು ದಿನದ ಸಾಂಕೇತಿಕ ಸತ್ಯಾಗ್ರಹ ಧರಣಿ ನಡೆಸಿ ಮನವಿ ಸಲ್ಲಿಸಲಾಯಿತು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ರಸ್ತೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳದೇ ಯೋಜನೆಯ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುವ



ಆರೋಪವನ್ನು ಸಂಘಟನೆ ಮಾಡಿದೆ. ಬೀದರ್ ತಾಲ್ಲೂಕಿನ ಅಲಿಯಾಬಾದ್–ಜನವಾಡ ರಸ್ತೆ, ಅಲಿಯಂಬರ್–ಯರನಳ್ಳಿ ರಸ್ತೆ, ಔರಾದ್ (ಬಿ) ತಾಲ್ಲೂಕಿನ ಸುಂಕನಾಳ ಕ್ರಾಸ್–ಸುಂಕನಾಳ ಗ್ರಾಮ ರಸ್ತೆ, ನಾಗೂರ ಭಾಬಜಿ ಕ್ರಾಸ್–ಚಂದರ್ ಮಹಾರಾಜ ತಾಂಡಾ ರಸ್ತೆ ಸೇರಿದಂತೆ ಹಲವೆಡೆ ಕಾಮಗಾರಿಗಳು ನಡೆದಿಲ್ಲ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದೇ ರೀತಿ ಔರಾದ್ (ಬಿ) ತಾಲ್ಲೂಕಿನ ಗೌಡಗಾಂವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದುರಸ್ತಿ ಹಾಗೂ ಕಮಲನಗರ ತಾಲ್ಲೂಕಿನ ಡೋಣಗಾಂವ–ರಂಡ್ಯಾಳ ರಸ್ತೆ ದುರಸ್ತಿ ಕಾಮಗಾರಿಗಳೂ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಶಿವಾಜಿರಾವ ಡೋಣೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕಲೀಮೊದ್ದಿನ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಸುನೀಲ ಚಿಲ್ಲರ್ಗೆ ಹಾಗೂ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಅಭಿಯಂತರ ಕೀರಣ ರಾಠೋಡ್ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಸಂಘಟನೆ ಒತ್ತಾಯಿಸಿದ್ದಾರೆ.

ಒಂದು ವಾರದೊಳಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಅರೆಬೆತ್ತಲೆ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಸಂಘಟನೆ ಎಚ್ಚರಿಕೆ ನೀಡಿದೆ.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಜಾ ಶಕ್ತಿ ಸಮಿತಿ ಜಿಲ್ಲಾಧ್ಯಕ್ಷ ಸಾಯಿ ಶಿಂಧೆ, ಜಿಲ್ಲಾ ಉಪಾಧ್ಯಕ್ಷ ಮಹೇಂದ್ರಕುಮಾರ ಹೊಸಮನಿ, ಕರ್ನಾಟಕ ಕೂಲಿ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ರಮೇಶ್ ಪಾಶ್ವನ್, ನಗರ ಘಟಕದ ಅಧ್ಯಕ್ಷ ವಿನೋದ ಶಿಂಧೆ, ಸಂಜುಕುಮಾರ ವಲ್ಲೆಪೂರೆ, ಯುವ ಮುಖಂಡ ಬಿ. ವೀರೇಶ ಕೋರೆ, ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಂಚಾಲಕ ಸಂದೀಪ್ ಕಾಂಟೆ, ಹೋರಾಟಗಾರ ಉಮೇಶ್ ಮುಗನೂರೆ, ಸಂತೋಷ ಸಂಗಮ, ಜೆಡಸನ್, ಬಸವರಾಜ ಭಾವಿದೊಡ್ಡಿ, ಗೌತಮ ಮುತ್ತಂಗಿಕರ್, ಶಿವುಕುಮಾರ ಗುನ್ನಳ್ಳಿಕರ್ ಉಪಸ್ಥಿತರಿದ್ದರು.

# ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ ಇಬ್ಬರು ಎಂಓಬಿ ರೌಡಿಶೀಟರ್ ಗಡಿಪಾರು







**ಇರಾನಿ ಕಾಲೋನಿಯ**
**–ರಹಮತ್ ಹುಸೇನ್ (25) ಹಾಗೂ ಜಾವಿದ್ ಅಲಿ ಅಲಿಯಾಸ್ ಜಂಬೂ (38)**
**–ವಿವಿಧ ಅಪರಾಧ ಕೃತ್ಯದಲ್ಲಿ ಭಾಗಿ**
**–ಇಬ್ಬರು ಎಂಓಬಿ ಶೀಟರಯಾಗಿದರು**
**–ಸಾರ್ವಜನಿಕರಿಗೆ ಬೆದರಿಕೆಗೆ ಹಾಕುವುದು, ಕಳ್ಳತನ, ಗಾಂಜಾ ಮಾರಾಟ ಪ್ರಕರಣ ಭಾಗಿ**

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಜಿಲ್ಲೆಯಲ್ಲಿ ವಿವಿಧ ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ ಹಾಗೂ ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಇಬ್ಬರು ಎಂಓಬಿ ಶೀಟರ್‌ಗಳನ್ನು ಬೀದರ್ ಜಿಲ್ಲೆಯಿಂದ ಗಡಿಪಾರು ಮಾಡಿ ಜಿಲ್ಲಾ ಪೊಲೀಸ್ ಇಲಾಖೆ ಆದೇಶಿಸಿದೆ.

ಗಾಂಧಿಗಂಜ ಪೊಲೀಸ್ ಠಾಣೆ ವ್ಯಾಪ್ತಿಯ ಇರಾನಿ ಕಾಲೋನಿಯ ನಿವಾಸಿಗಳಾದ ರಹಮತ್ ಹುಸೇನ್ (25) ಹಾಗೂ ಜಾವಿದ್ ಅಲಿ ಅಲಿಯಾಸ್ ಜಂಬೂ (38) ಗಡಿಪಾರಾದವರು.

ರಹಮತ್ ಹುಸೇನ್ ಉತ್ತರ ಕನ್ನಡ ಜಿಲ್ಲೆಗೆ ಮತ್ತು ಜಾವೀದ್ ಅಲಿಗೆ ಚಾಮರಾಜನಗರ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ ಎಂದು ಎಸ್ಪಿ ಪ್ರದೀಪ ಗುಂಟಿ ಅವರು ಬುಧವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇಬ್ಬರು ಮಾರಕ ಆಯುಧ ಹೊಂದುವುದು, ಸಾರ್ವಜನಿಕರಿಗೆ ಬೆದರಿಕೆ ಹಾಕುವುದು, ಕಳ್ಳತನ, ಗಾಂಜಾ ಮಾರಾಟ ಸೇರಿದಂತೆ ವಿವಿಧ ಅಪರಾಧ ಪ್ರಕರಣಗಳು ದಾಖಲಾಗಿದ್ದವು. ಪದೇ ಪದೇ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡು ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಿಂದ ಇಬ್ಬರಿಗೆ ಗಡಿಪಾರು ಮಾಡಲಾಗಿದೆ.

ಸಾರ್ವಜನಿಕರ ಶಾಂತಿ, ನೆಮ್ಮದಿಗೆ ಕಂಟಕವಾಗಿದ್ದ ಇಬ್ಬರು ರೌಡಿಗಳನ್ನು ಜೂ.15ರಂದು ಬೇರೆ ಜಿಲ್ಲೆಗಳಿಗೆ ಗಡಿಪಾರು ಮಾಡಿ ಎಸ್ಪಿ ಪ್ರದೀಪ ಗುಂಟಿ ಅವರು ಆದೇಶ ಹೊರಡಿಸಿದ್ದರು. ಇದೀಗ ಮತ್ತಿಬ್ಬರನ್ನು ಗಡಿಪಾರು ಮಾಡುವ ಮೂಲಕ ಅಪರಾಧಿಗಳಿಗೆ ಬಿಸಿ ಮುಟ್ಟಿಸಿದ್ದಾರೆ. ಜಿಲ್ಲೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಕಾನೂನು ಸುವ್ಯವಸ್ಥೆಯಲ್ಲಿ ಅಡೆತಡೆ ಉಂಟು ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಿ ಗಡಿಪಾರು ಮಾಡಲಾಗುವುದು. ಜಿಲ್ಲೆಯ ನಾಗರಿಕರು ಯಾವುದೇ ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿ ತಮ್ಮ ಅಮೂಲ್ಯ ಜೀವನ ಹಾಳುಮಾಡಿಕೊಳ್ಳಬೇಡಿ ಎಂದು ಎಸ್ಪಿ ಪ್ರದೀಪ್ ಗುಂಟಿ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

# ರಜಪೂತ ನಿಗಮ ಮಂಡಳಿ ಸ್ಥಾಪನೆಗೆ ಆಗ್ರಹ: ಸಿಎಂಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ**

ಕರ್ನಾಟಕದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ರಜಪೂತ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ತಕ್ಷಣವೇ ರಜಪೂತ ಅಭಿವೃದ್ಧಿ ನಿಗಮ ಮಂಡಳಿಯನ್ನು ಸ್ಥಾಪಿಸಬೇಕು ಎಂದು ಆಗ್ರಹಿಸಿ, ಹುಮನಾಬಾದ್ ತಾಲೂಕು ರಜಪೂತ ಸಮಾಜದ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಿಗೆ ಹುಮನಾಬಾದ್ ತಹಶೀಲ್ದಾರರ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು.

ಪಟ್ಟಣದ ತಹಶೀಲ್ದಾರ್ ಕಚೇರಿಗೆ ತೆರಳಿದ ರಜಪೂತ ಸಮಾಜದ ಪ್ರಮುಖರು ಹಾಗೂ ಯುವ ಮುಖಂಡರ ನಿಯೋಗವು, ತಹಶೀಲ್ದಾರರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಸಮಾಜದ ಬೇಡಿಕೆಗಳ ಕುರಿತು ಸುದೀರ್ಘವಾಗಿ ಚರ್ಚಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಾಜದ ಮುಖಂಡರು, ರಾಜ್ಯದಲ್ಲಿ ರಜಪೂತ ಸಮುದಾಯವು ಗಮನಾರ್ಹ ಜನಸಂಖ್ಯೆಯನ್ನು ಹೊಂದಿದ್ದರೂ, ರಾಜಕೀಯ ಮತ್ತು ಆರ್ಥಿಕ ಪ್ರಾತಿನಿಧ್ಯದಿಂದ ವಂಚಿತವಾಗಿದೆ. ಸಮುದಾಯದ ಬಡ ಕುಟುಂಬಗಳು, ಕೂಲಿ ಕಾರ್ಮಿಕರು ಮತ್ತು ವಿದ್ಯಾರ್ಥಿಗಳಿಗೆ ಸರ್ಕಾರದ ಸೌಲಭ್ಯಗಳು ಸರಿಯಾಗಿ ತಲುಪುತ್ತಿಲ್ಲ. ನಮ್ಮ ಸಮಾಜದ ಯುವಕರಿಗೆ ಉದ್ಯೋಗಾವಕಾಶ ಹಾಗೂ ಉನ್ನತ ಶಿಕ್ಷಣಕ್ಕೆ ನೆರವು ನೀಡಲು ಪ್ರತ್ಯೇಕ ನಿಗಮದ ಅಗತ್ಯತೆ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಹಿಂದುಳಿದ ರಜಪೂತ ಸಮುದಾಯಕ್ಕೆ ನ್ಯಾಯ ಒದಗಿಸಲು ಸರ್ಕಾರ ಕೂಡಲೇ ಸ್ಪಂದಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ನಿಯೋಗದ ಪ್ರಮುಖರು ಎಚ್ಚರಿಸಿದ್ದಾರೆ.

ರಾಜ್ಯ ಸರ್ಕಾರವು ಇತರೆ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ನಿಗಮಗಳನ್ನು ಸ್ಥಾಪಿಸಿರುವ ಮಾದರಿಯಲ್ಲೇ, ರಜಪೂತ ಸಮಾಜದ ಕಲ್ಯಾಣಕ್ಕಾಗಿಯೂ ವಿಶೇಷ ಅನುದಾನದೊಂದಿಗೆ ನಿಗಮ ಸ್ಥಾಪಿಸಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಲಾಯಿತು. ಮನವಿ ಸ್ವೀಕರಿಸಿದ ತಹಶೀಲ್ದಾರರು, ಈ ಮನವಿಯನ್ನು ಸರ್ಕಾರದ ಗಮನಕ್ಕೆ ತರಲು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ಕಚೇರಿಗೆ ತಕ್ಷಣವೇ ರವಾನಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಹುಮನಾಬಾದ್ ತಾಲೂಕು ರಜಪೂತ ಸಮಾಜದ ರಾಮಲಾಲ್ ಸಿಂಗ್, ಪ್ರಶಾಂತ್ ಠಾಕೂರ್ ವರವಟ್ಟಿ (ಕೆ), ಕಲಾವತಿ, ಮಹಾದೇವ್ ಠಾಕೂರ್, ಗೋವಿಂದ್ ಸಿಂಗ್, ಅಮರ್ ಸಿಂಗ್, ಗಣೇಶ್ ಹಜಾರೆ, ಮದನ್ ಸಿಂಗ್, ಮಹೇಶ ಹಜಾರೆ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ಪದಾಧಿಕಾರಿಗಳು, ಹಿರಿಯ ಮುಖಂಡರು ಹಾಗೂ ನೂರಾರು ಸಮಾಜ ಬಾಂಧವರು ಉಪಸ್ಥಿತರಿದ್ದರು.

# ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಮಲ್ಲಮ್ಮ ಗಂ. ದಿ.ಮರೆಪ್ಪ ಧನ್ನಾಇವರು ದಿನಾಂಕ 1–7–2026 ರಂದು ಮದ್ಯಾಹ್ನ 12.30ಕ್ಕೆ ಸ್ವರ್ಗಸ್ಥರಾಗಿರುತ್ತಾರೆ. ಮೃತರು ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ಅಂತ್ಯಕ್ರಿಯೆ ದಿನಾಂಕ 2–7–2026 ರಂದು ಮದ್ಯಾಹ್ನ1.00 ಗಂಟೆಗೆ ಸ್ವಗ್ರಾಮ ಭಂಕೂರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬಸ್ತರು ತಿಳಿಸಿರುತ್ತಾರೆ.



ಬಸವ ಕಲ್ಯಾಣ: ಮಾನ್ಯ ಶ್ರೀ ಜಗನ್ನಾಥ್ ರೆಡ್ಡಿ ಅಯುಕ್ತರು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಬಸವಕಲ್ಯಾಣ ( BKDB ) ಇವರ ನಿವೃತ್ತಿಯ ಕಾರ್ಯಕ್ರಮದಲ್ಲಿ ಭಾಗಿಯಾಗಿ ನಿವೃತ್ತಿ ಜೀವನ ನೆಮ್ಮದಿಯಾಗಿರಲೆಂದು ಶುಭ ಹಾರೈಸಲಾಯಿತು

# ಹೊಲಿಗೆ ಯಂತ್ರ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣಪತ್ರ ,ಉಪಕರಣಗಳ ವಿತರಣೆ


• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ




ಕುಶಾಲ್ ಇಂಡಸ್ಟ್ರೀಸ್ ಅಸೋಸಿಯೇಷನ್ ಹಾಗೂ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಅವರ ಸಹಯೋಗದಲ್ಲಿ ಆಯೋಜಿಸಲಾದ 45 ದಿನಗಳ ಹೊಲಿಗೆ ಯಂತ್ರ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣ ಪತ್ರಗಳು ಹಾಗೂ ಹೊಲಿಗೆ ಉಪಕರಣಗಳನ್ನು ವಿತರಿಸಲಾಯಿತು. ಸಂಯೋಜಕರಾದ ಅನೀಲಕುಮಾರ ಬಾಗೇವಾಡಿ ಮಾತನಾಡಿ ಸುಮಾರು 45 ದಿನಗಳ ಕಾಲ ನಡೆದ ಈ ತರಬೇತಿಯು ಮಹಿಳೆಯರು ಸ್ವಯಂ ಉದ್ಯೋಗ ಆರಂಭಿಸಿ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಕಾರಿಯಾಗಲಿದೆ. ತರಬೇತಿಯಲ್ಲಿ ಪಡೆದ ಕೌಶಲ್ಯವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು" ಎಂದು ಕರೆ ನೀಡಿದರು. ಮುಖ್ಯ ಅತಿಥಿಯಾಗಿ ವೀರಶೆಟ್ಟಿ ಮಲಶೆಟ್ಟಿ ಮಾತನಾಡಿ ಹೊಲಿಗೆ ಯಂತ್ರ ತರಬೇತಿ ಮಾತ್ರವಲ್ಲದೆ ಮಹಿಳೆಯರಿಗಾಗಿ ಅನೇಕ ಸ್ವಯಂ ಉದ್ಯೋಗ ಅವಕಾಶಗಳಿವೆ. ಮನೆಯಲ್ಲಿಯೇ ಕುಳಿತು ಗೌರವಯುತ ಜೀವನ ಕಟ್ಟಿಕೊಳ್ಳಲು ಸ್ವಯಂ ಉದ್ಯೋಗಗಳು ಉತ್ತಮ ಸಾಧನವಾಗಿವೆ. ಮಹಿಳೆಯರು ಇಂತಹ ಕೌಶಲ್ಯಾಧಾರಿತ ತರಬೇತಿಗಳನ್ನು ಸದು ಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಅತಿಥಿ ಸೂರ್ಯಕಾಂತ ಬಿರಾದಾರ. ತರಬೇತುದಾರರಾದ ವಿಠ್ಠಲ ರಾಯಪ್ಪನೋರ, ಅಂಕುಶ ಖೇಲೆ (ಮಂಠಾಳ), ಆಕಾಶ ರಾಜೋಳೆ ಗೋರ್ಟಾ ಮತ್ತು ಆಕಾಶ ಹೀರೆಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ದ್ವಿಭಾಷಾ ಮಾಧ್ಯಮ ಜಾರಿ ಮುನ್ನ ಚರ್ಚೆ ಆಗಲಿ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ



ಸರಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮವನ್ನು ಸಂಪೂರ್ಣ ಜಾರಿಗೆ ತರುವ ಮುನ್ನ ಅದರ ಸಾಧಕ, ಬಾಧಕ ಕುರಿತಾಗಿ ಶಿಕ್ಷಣ ತಜ್ಞರು, ಸಾರ್ವಜನಿಕರು ಮತ್ತು ಪಾಲಕರ ಜತೆ ಚರ್ಚೆ ನಡೆಸಬೇಕು ಎಂದು ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ದುಂಡುಮೇಜಿನ ಸಭೆ ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ಕನ್ನಡ ಭವನದಲ್ಲಿ ಕರ್ನಾಟಕ ಸಂಘದ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಈ ಚರ್ಚೆ ನಡೆಯಿತು. ದ್ವಿಭಾಷಾ ಮಾಧ್ಯಮ ಮತ್ತು ಕನ್ನಡದ ಭವಿಷ್ಯ ಎಂಬ ವಿಷಯದ ಕುರಿತಾಗಿ ನಡೆದ ಈ ಸಭೆಯಲ್ಲಿ ಶಿಕ್ಷಣ ತಜ್ಞರು, ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರು ಪಾಲ್ಗೊಂಡಿದ್ದರು. ಸಭೆಯು ಸರಕಾರ ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಈ ದ್ವಿಭಾಷಾ ಮಾಧ್ಯಮ ನೀತಿಯ ಕುರಿತಾಗಿ ವಿಸ್ತ್ರತವಾಗಿ ಚರ್ಚೆ ನಡೆಸಿ ಕೆಲ ನಿರ್ಣಯಗಳನ್ನು ಸ್ವೀಕರಿಸಿತು. ಸರಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಒಂದು ಭಾಷೆಯಾಗಿ ಇರಲಿ, ಆದರೆ ಮಾಧ್ಯಮವಾಗಿ ಜಾರಿಯಾದರೆ ಇದರಿಂದ ಕನ್ನಡದ ಅಸ್ಮಿತೆಯ ಮೇಲೆ ದೂರಗಾಮಿಪರಿಣಾಮ ಆಗುವ ಸಾಧ್ಯತೆ ಇದೆ. ಹೀಗಾಗಿ ಈ ನೀತಿಯ ಬಗ್ಗೆ ವಿಸ್ತ್ರತ ಚರ್ಚೆ ಆಗಬೇಕು. ಭಾಷಾ ಮಾಧ್ಯಮ ಆಯ್ಕೆಯ ಹಕ್ಕು ಮಗುವಿಗೆ ಇರಲಿ, ವಿದ್ಯಾರ್ಥಿ– ಪೋಷಕರ ಅಭಿಪ್ರಾಯಕ್ಕೆ ಮನ್ನಣೆ ಇರಲಿ. ರಾಜ್ಯದಲ್ಲಿ ತಕ್ಷಣ ಭಾಷಾ ನೀತಿ ಜಾರಿಗೆ ಬರಲಿ ಎಂದು ಒತ್ತಾಯಿಸಲಾಗಿದೆ. ಕರ್ನಾಟಕ ಸಂಘದ ಉಪಾಧ್ಯಕ್ಷ ಶ್ರೀಧರ ನಾಯಕ, ಹಿರಿಯ ಸಾಹಿತಿ ಶಾಂತಾರಾಮ ನಾಯಕ, ಸೃಜನ ನಾಯಕ, ಕಸಾಪ ಅಧ್ಯಕ್ಷ ಗೋಪಾಲಕೃಷ್ಣ ನಾಯಕ, ನಿವೃತ್ತ ಪ್ರಾಧ್ಯಾಪಕ ರಾಮಾ ನಾಯಕ, ವಿ.ಜಿ. ಗಣೇಶ, ನಿವೃತ್ತ ಪ್ರಾಚಾರ್ಯ ಡಾ. ಆರ್.ಜಿ.ಗುಂದಿ, ನಿವೃತ್ತ ಶಿಕ್ಷಕ ಬಾಲಚಂದ್ರ ನಾಯಕ, ಕರ್ನಾಟಕ ಸಂಘದ ಅಧ್ಯಕ್ಷ ವಿಠ್ಠಲದಾಸ ಕಾಮತ, ರಾಜೇಶ ನಾಯಕ, ಮಹೇಶ ನಾಯಕ ಹಿಚ್ಕಡ, ಪ್ರಮುಖರಾದ ದೇವರಾಯ ನಾಯಕ, ಜಿ.ಎಚ್.ನಾಯಕ, ವಿಠ್ಠಲ ಗಾಂವಕಾರ, ಪ್ರಭಾಕರ ಬಂಟ, ಶ್ರೀದೇವಿ ನಾಯಕ, ರಾಮಮೂರ್ತಿ ನಾಯಕ, ಮಂಜುನಾಥ ಇಟಗಿ, ಮಹಾಂತೇಶ ರೇವಡಿ, ಜಯಶೀಲ ಆಗೇರ, ವಾಸುದೇವ ನಾಯಕ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ ಮಂಡಿಸಿದರು.

# ನಾಡಬಾಂಬ್ ಸ್ಫೋಟ ಪ್ರಕರಣ ಮೂವರ ಆರೋಪಿಗಳ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

: ಇತ್ತೀಚಿಗೆ ತುಮಕೂರಿನಲ್ಲಿ ನಾಡಬಾಂಬ್ ಸ್ಫೋಟಗೊಂಡು ಮೃತಪಟ್ಟ ನಾಗೇಂದ್ರ ಗೌಡ ಬಳಸಿದ ನಾಡಬಾಂಬ್ ಪೂರೈಸಿದವರ ಭೇಟಿಗೆ ಮೂರು ತಂಡಗಳು ಪರಿಚಯಿಸಲಾಗಿದ್ದು, ಅಂಕೋಲಾದ ಮೂವರನ್ನು ಬಂಧಿಸಲು ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಹೊನ್ನಳ್ಳಿಯ ನಾರಾಯಣ ಗೌಡ, ನಾಗರಾಜ ಗೌಡ, ಶಿರಗುಂಜಿಯ ಸಂದೀಪ ಗೌಡ ಬಂಧಿತ ಆರೋಪಿಗಳಾಗಿದ್ದಾರೆ. ಜೂನ್ 27 ರಂದು ಒತ್ತಾಯಪೂರ್ವಕವಾಗಿ ಬೆಂಗಳೂರಿನಿಂದ ತನ್ನ ಪ್ರೇಯಸಿಯನ್ನು ಕರೆದುಕೊಂಡು ಕಾರ್‌ನಲ್ಲಿ ಬರುತ್ತಿದ್ದಾಗ ಇಬ್ಬರ ನಡುವೆ ಮತ್ತೆ ವಾಗ್ವಾದ ನಡೆದು ನಾಗೇಂದ್ರ ಗೌಡ ಚಾಕುವಿನಿಂದ ಪ್ರೇಯಸಿಯ ತಲೆಭಾಗಕ್ಕೆ ಚುಚ್ಚಿದ್ದ ತಕ್ಷಣ ಕಾರ್ ನಿಧಾನಗೊಳಿಸಿದ ಚಾಲಕ ಇಳಿದುಕೊಂಡ. ಹಾಗೇ ಪ್ರೇಯಸಿಯು ಇಳಿದುಕೊಂಡು ಓಡಿದ್ದಳು. ತಾನು ಗಡಿಯಲ್ಲಿ ಇಟ್ಟುಕೊಂಡಿದ್ದ ನಾಡಬಾಂಬ್‌ನ್ನು ಸ್ಫೋಟಿಸಿಕೊಂಡು ಕಾರ್‌ನಲ್ಲಿಯೇ ಸಜೀವ ದಹನವಾಗಿದ್ದ. ಪ್ರೇಯಸಿಯು ಕೂಡ ಅಂಕೋಲಾ ತಾಲೂಕಿನವಳಾಗಿದ್ದು, ಇಬ್ಬರು ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದರು. ಇವರಿಬ್ಬರ ನಡುವೆ ಪ್ರೇಮ ಬಿರುಕು ಬಿಟ್ಟು ಪ್ರೇಯಸಿ ಇತನನ್ನು ದೂರ ಮಾಡಿದ್ದಳು. ಇದೇ ಕಾರಣಕ್ಕಾಗಿ ಆಕೆ ವಾಸವಾಗಿದ್ದ ಬಾಡಿಗೆ ಮನೆಯಿಂದ ಬಲವಂತವಾಗಿ ಕರೆದುಕೊಂಡು ಬಂದು ಬಾಡಿಗೆ ಕಾರಿನಲ್ಲಿ ಕುಳಿಸಿ ಅಂಕೋಲಾದತ್ತ ಆಗಮಿಸುತ್ತಿದ್ದರು. ಇವರಿಬ್ಬರ ಕಿತ್ತಾಟ, ಜಗಳ ನೋಡಿ ಚಾಲಕ ಕಾರ್ ನಿಲ್ಲಿಸಿ ಹೊರಗಡೆ ಬಂದಿದ್ದ. ಅಷ್ಟೊತ್ತಿಗಾಗಲೇ ಪ್ರೇಯಸಿಗೂ ಹಲ್ಲೆ ಮಾಡಿದ್ದರಿಂದಾಗಿ ಆಕೆ–ಯು ಕಾರ್‌ನಿಂದ ಹೊರಬಂದಿದ್ದಳು. ಇದರಿಂದ ವಿಚಲಿತನಾದ ನಾಗೇಂದ್ರ ಗೌಡ ತಾನು ತಂದಿಟ್ಟುಕೊಂಡಿದ್ದ ನಾಡಬಾಂಬ್‌ನ್ನು ಸ್ಫೋಟಿಸಿಕೊಂಡು ಸಾವನ್ನಪ್ಪಿದ್ದ. ಆದರೆ ಈತನಿಗೆ ನಾಡಬಾಂಬ್ ನೀಡಿದರ ಕುರಿತು ಪೊಲೀಸರು ತನಿಖೆ ಕೈಗೊಂಡಾಗ ಮೂವರು ಆರೋಪಿಗಳನ್ನು ವಶಪಡೆದಾಗ ಅರಣ್ಯದಲ್ಲಿ ಇನ್ನು ಎರಡು ಕಚ್ಚಾ ಬಾಂಬ್‌ಗಳು ಬಚ್ಚಿಟ್ಟಿರುವುದಾಗಿ ಒಪ್ಪಿಕೊಂಡರು. ಅದನ್ನು ಪೊಲೀಸರು ನಿಷ್ಕ್ರೀಯಗೊಳಿಸಿದ್ದಾರೆ. ಕರಾವಳಿ ಭಾಗದಲ್ಲಿ ಹಳ್ಳಗಳಲ್ಲಿ ದೊಡ್ಡ ದೊಡ್ಡ ಮೀನು ಬರುವ ಸಮಯದಲ್ಲಿ ಈ ನಾಡಬಾಂಬ್‌ನ್ನು ಸ್ಫೋಟಿಸಿ ಮೀನನ್ನು ಹಿಡಿಯುತ್ತಿದ್ದರು. ಹೀಗಾಗಿ ಇದು ಸ್ಥಳೀಯವಾಗಿ 200 ರಿಂದ 300 ರೂ.ಗೆ ನೀಡುತ್ತಿದ್ದರು. ಆದರೆ ಇದು ಈಗ ಭಾರಿ ದೊಡ್ಡ ಪ್ರಕರಣವಾಗಿದ್ದರಿಂದ ಗಂಭೀರತೆ ಹೆಚ್ಚಿದಂತಾಗಿದೆ. ಇನ್ನು ನಾಡಬಾಂಬ್ ಸಿದ್ಧಪಡಿಸುವವರ ಹುಡುಕಾಟದಲ್ಲಿ ಪೊಲೀಸರಿದ್ದಾರೆ.

# ಶಿಕ್ಷಕಿ ಮಂಗಲಬಾಯಿ ಬಿರಾದಾರ ಅವರಿಗೆ ಆತ್ಮೀಯ ನಿವೃತ್ತಿ ಬಿಳ್ಕೊಡುಗೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನ ಹೊರಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಿಕ್ಷಕಿ ಮಂಗಲಬಾಯಿ ಸೂರ್ಯಕಾಂತ ಬಿರಾದಾರ ಅವರ ವಯೋನಿವೃತ್ತಿ ಬಿಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭ ಜರುಗಿತು.


ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಭುಲಿಂಗ ತೂಗಾವೆ ಮಾತನಾಡಿ,30 ವರ್ಷಕ್ಕೂ ಅಧಿಕ ಕಾಲ ಸುದೀರ್ಘ ಸರ್ಕಾರಿ ಸೇವೆ ಸಲ್ಲಿಸಿದ ಬಳಿಕವೂ ಮಂಗಲಾಬಾಯಿ ಮೇಡಂ ಅವರಲ್ಲಿ ಲವಲವಿಕೆ ಕಡಿಮೆಯಾಗಿಲ್ಲ. ವೃತ್ತಿ ಮೇಲಿನ ಪ್ರೀತಿ ಮತ್ತು ಪ್ರವೃತ್ತಿಯಾಗಿಸಿಕೊಂಡ ಆಸಕ್ತಿ ಅವರಲ್ಲಿನ ಜೀವನೋತ್ಸಾಹವನ್ನು ಇಮ್ಮಡಿಗೊಳಿಸಿದೆ. ಅವರ ವೃತ್ತಿ ಬದುಕಿನ ಸುದೀರ್ಘ ಅನುಭವ ಭವಿಷ್ಯದ ದಿನಗಳಲ್ಲಿ ನೆಮ್ಮದಿ ಹಾಗೂ ಸಂಭ್ರಮ ತುಂಬಲಿ ಎಂದು ಅವರು ಆಶಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕ.ರಾ.ಪ್ರಾ.ಶಾ.ಶಿಕ್ಷಕರ ಸಂಘದ ಜಿಲ್ಲಾ ಘಟಕದ ಕಾರ್ಯದರ್ಶಿ ಪಂಡರಿ ಆಡೆ ಅವರು, ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಉದ್ಯೋಗದ ಜವಾಬ್ದಾರಿ ನಿಭಾಯಿಸುವುದು ಸವಾಲಿನ ಕೆಲಸವಾಗಿದೆ. ಅಂತಹ ಒತ್ತಡದ ವಾತಾವರಣದಲ್ಲೂ ಆತ್ಮತೃಪ್ತಿ, ಸೌಜನ್ಯ ಹಾಗೂ ಅತ್ಯಂತ ಆತ್ಮೀಯತೆಯಿಂದ ಕರ್ತವ್ಯ ನಿರ್ವಹಿಸಿದ ಮಂಗಲಬಾಯಿ ಬಿರಾದಾರ ಅವರು ಇತರೆ ಶಿಕ್ಷಕರಿಗೆ ಮಾದರಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಇದಕ್ಕೂ ಮುನ್ನ ಔರಾದ್ ಕ್ಷೇತ್ರಶಿಕ್ಷಣಾಧಿಕಾರಿ ವಾಘಂಬರ ಗಾಯಕವಾಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಹಿರಿಯ ಮುಖಂಡ ಬಾಬುರಾವ ಪಾಟೀಲ, ಮನೋಹರ ಬಿರಾದಾರ, ಅಧ್ಯಕ್ಷ ಸೂರ್ಯಕಾಂತ ಬಿರಾದಾರ, ಅಧ್ಯಕ್ಷ ವಿಜಯಕುಮಾರ ನೂದನೂರೆ, ಮುಖ್ಯಶಿಕ್ಷಕ ಲಿಂಗಾನಂದ ಮಹಾಜನ, ಸಂಜುಕುಮಾರ ಗಾಯಕವಾಡ, ರಮಾಕಾಂತ ಖೋಂಡೆ, ಸಂಜೀವಕುಮಾರ ಡೋಂಗ್ರೆ, ಅಧ್ಯಕ್ಷ ಪ್ರಶಾಂತ ಮಠಪತಿ, ಪ್ರಭು ತಟಪಟ್ಟೆ, ಬಸವರಾಜ ಮಹಾಜನ, ನಾಗನಾಥ, ವಿವೇಕಾನಂದ ಢಗೆ, ಬಸವರಾಜ ಜಾಗಾವೆ, ಮನೋಜಕುಮಾರ ಹಿರೇಮಠ, ಗಣೇಶ ಬಿರಾದಾರ, ಮಹೆಶ ಬಿರಾದಾರ, ಪ್ರಕಾಶ ಸ್ವಾಮಿ, ಶಾಂತಕುಮಾರ, ರವೀಂದ್ರ, ಮಹಾದೇವ ಮಡಿವಾಳ ಸೇರಿದಂತೆ ಶಾಲೆಯ ಸಿಬ್ಬಂದಿ, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಎಫ್.ಡಿ. ಹಣಕ್ಕೂ ನಕಲಿ ಸಹಿ? ಮಗನನ್ನು ಕಳೆದುಕೊಂಡ ರೈತನಿಗೆ ಮತ್ತೊಂದು ಆಘಾತ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನ ಹೊರಂಡಿ ಗ್ರಾಮದ ರೈತನೊಬ್ಬ ಜೀವನಪೂರ್ತಿ ಕಷ್ಟಪಟ್ಟು ಕೂಡಿಟ್ಟಿದ್ದ ?1.90 ಲಕ್ಷ ಎಫ್.ಡಿ. ಹಣವನ್ನು ನಕಲಿ ಸಹಿ ಮಾಡಿ ದುರುಪಯೋಗಪಡಿಸಿಕೊಂಡಿರುವ ಗಂಭೀರ ಆರೋಪ ಕೇಳಿಬಂದಿದೆ. ರಸ್ತೆ ಅಪಘಾತದಲ್ಲಿ ಮಗನನ್ನು ಕಳೆದುಕೊಂಡ ದುಃಖದಿಂದ ಇನ್ನೂ ಚೇತರಿಸಿಕೊಳ್ಳದ ರೈತನಿಗೆ ಈ ಘಟನೆ ಮತ್ತೊಂದು ಆಘಾತ ಉಂಟುಮಾಡಿದ್ದು, ಪ್ರಕರಣ ಸಹಕಾರ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಹೊರಂಡಿ ಗ್ರಾಮದ ಬಸವರಾಜ ಗುರುಬಸಪ್ಪ ಘಟ್ಟೆ ಅವರು 2025ರ ಡಿಸೆಂಬರ್ 26ರಂದು ತಮ್ಮ ಜೀವನದ ಉಳಿತಾಯವಾದ ?1.90 ಲಕ್ಷವನ್ನು ಒಂದು ವರ್ಷದ ಅವಧಿಗೆ ಎಫ್.ಡಿ. ರೂಪದಲ್ಲಿ ಹೊರಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪಿ.ಕೆ.ಪಿ.ಎಸ್.)ನಲ್ಲಿ ಠೇವಣಿ ಇಟ್ಟಿದ್ದರು. ಆದರೆ 2026ರ ಮೇ 18ರಂದು ಪುತ್ರ ಪ್ರಶಾಂತ ರಸ್ತೆ ಅಪಘಾತದಲ್ಲಿ ಮೃತಪಟ್ಟ ಪರಿಣಾಮ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು.

ಮಂಗಳವಾರ, ಮುಂಗಾರು ಕೃಷಿಗೆ ಬೀಜ ಮತ್ತು ರಸಗೊಬ್ಬರ ಖರೀದಿಸಲು ಹಣದ ಅಗತ್ಯವಿದ್ದ ಕಾರಣ ಬಸವರಾಜ ಅವರು ಎಫ್.ಡಿ. ಹಣ ಪಡೆಯಲು ಸಂಘಕ್ಕೆ ತೆರಳಿದಾಗ, "ನಿಮ್ಮ ಹೆಸರಿನಲ್ಲಿ ಯಾವುದೇ ಎಫ್.ಡಿ. ಇಲ್ಲ. ಹಣವನ್ನು ಈಗಾಗಲೇ ನಿಮ್ಮ ಮಗನಿಗೆ ನೀಡಲಾಗಿದೆ" ಎಂದು ಕಾರ್ಯದರ್ಶಿ ಶಿವಕುಮಾರ ತಿಳಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಉತ್ತರದಿಂದ ಅನುಮಾನಗೊಂಡ ಬಸವರಾಜ ಅವರು ದಾಖಲೆಗಳನ್ನು ಪರಿಶೀಲಿಸುವಂತೆ ಒತ್ತಾಯಿಸಿದಾಗ, ತಮ್ಮ ಹೆಸರಿನ ನಕಲಿ ಸಹಿ ಮಾಡಿ ಹಣ ಡ್ರಾ ಮಾಡಿರುವುದು ಕಂಡುಬಂದಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ತಾವು ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಹಾಗೂ ಹಣವನ್ನು ಸ್ವೀಕರಿಸಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ಘಟನೆ ಮಗನ ಸಾವಿನ ನೋವಿನಲ್ಲಿದ್ದ ಕುಟುಂಬಕ್ಕೆ ಮತ್ತೊಂದು ದೊಡ್ಡ ಹೊಡೆತ ನೀಡಿದ್ದು, ಕೃಷಿ ಚಟುವಟಿಕೆಗಳಿಗೆ ಉಳಿಸಿಕೊಂಡಿದ್ದ ಹಣ ಕಳೆದುಕೊಂಡ ಕಾರಣ ಕುಟುಂಬ ತೀವ್ರ ಸಂಕಷ್ಟಕ್ಕೆ ಸಿಲುಕಿದೆ.

ಈ ಸಂಬಂಧ ಹೊರಂಡಿ ಪಿ.ಕೆ.ಪಿ.ಎಸ್. ಕಾರ್ಯದರ್ಶಿ ಶಿವಕುಮಾರ ಹಾಗೂ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು, ತಮ್ಮ ?1.90 ಲಕ್ಷ ಹಣವನ್ನು ಮರಳಿಸಿಕೊಡಬೇಕು ಎಂದು ಬಸವರಾಜ ಅವರು ಅಪರ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಉಪನಿಬಂಧಕರು, ಸಹಕಾರ ಇಲಾಖೆ, ಸಹಾಯಕ ನಿಬಂಧಕರು ಹಾಗೂ ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.

ಪ್ರಕರಣದ ಬಗ್ಗೆ ಸಹಕಾರ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಮಗ್ರ ತನಿಖೆ ನಡೆಸಿ, ಆರೋಪ ಸಾಬೀತಾದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಂಡು ನೊಂದ ರೈತನಿಗೆ ನ್ಯಾಯ ಒದಗಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

# ವಾಲ್ಮೀಕಿ ಮಕ್ಕಳಿಗೆ ನಗದು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡ ಒಳಮೀಸಲಾತಿ ಹೋರಾಟ ಆಂದೋಲನದ ಮೂಲಕ ಜಿಲ್ಲಾ ಮಟ್ಟದ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಜುಲೈ ಮಾಹೆಯಲ್ಲಿ ಹಮ್ಮಿಕೊಳ್ಳುತ್ತಿದ್ದು, ಆಸಕ್ತರು ಅರ್ಜಿ ಸಲ್ಲಿಸಲು ಆಂದೋಲನದ ಸಂಸ್ಥಾಪಕ ಸಂಚಾಲಕ ಮಂಜುನಾಥ ಜಿ. ಗೊಂಡಬಾಳ ಕೋರಿದ್ದಾರೆ. ಜಿಲ್ಲೆಯ ಮಹರ್ಷಿ ವಾಲ್ಮೀಕಿ ನಾಯಕ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದು ಅತ್ಯುತ್ತಮ ಅವಕಾಶ. 2025–26ನೇ ಸಾಲಿನ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಾಗ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕಾಗುತ್ತದೆ: ಅಂಕಪಟ್ಟಿ: ಎಸ್ಎಸ್ಎಲ್‌ಸಿ ಅಥವಾ ಪಿಯುಸಿ ಅಂಕಪಟ್ಟಿ ಜಾತಿ ಮತ್ತು ಆದಾಯ ಪ್ರಮಾಣಪತ್ರ: ಪರಿಶಿಷ್ಟ ಪಂಗಡ (ನಾಯಕ/ವಾಲ್ಮೀಕಿ ತಳವಾರ ಇತರೆ) ಸಮುದಾಯಕ್ಕೆ ಸೇರಿದ ಜಾತಿ ಪ್ರಮಾಣಪತ್ರ. ಆಧಾರ್ ಕಾರ್ಡ್: ವಿದ್ಯಾರ್ಥಿಯ ಆಧಾರ್ ಕಾರ್ಡ್ ಪ್ರತಿ. ಬ್ಯಾಂಕ್ ಪಾಸ್‌ಬುಕ್: ವಿದ್ಯಾರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯ ವಿವರ (ಪ್ರೋತ್ಸಾಹಧನ ಜಮೆಯಾಗಲು). ಭಾವಚಿತ್ರ: ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋ. ವ್ಯಾಸಂಗ ಪ್ರಮಾಣಪತ್ರ: ಪ್ರಸ್ತುತ ಮುಂದಿನ ತರಗತಿಗೆ ಪ್ರವೇಶ ಪಡೆದಿರುವ ರಶೀದಿ ಅಥವಾ ಕಾಲೇಜು ಗುರುತಿನ ಚೀಟಿ. ಆಸಕ್ತರು ತಮ್ಮ ಮಾಹಿತಿಯನ್ನು ಜುಲೈ 10 ರೊಳಗೆ ಮಂಜುನಾಥ ಜಿ. ಗೊಂಡಬಾಳ (ಮೊ:9448300070), ಮಾರುತಿ ಕಾಟ್ರಳ್ಳಿ (ಮೊ: 6363195339), ನಾರಾಯಣನಾಯಕ (ಮೊ:7411119400) ಸಂಪರ್ಕಿಸಿ ಅರ್ಜಿಯನ್ನು ಪಡೆಯಬಹುದು ಮತ್ತು ಸಲ್ಲಿಸಬಹುದು.

# ರೋಟರಿ ಕ್ಲಬ್ ಪದಾಧಿಕಾರಿಗಳ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ಜು.01.ಹುಣಸೂರು ರೋಟರಿ ಕ್ಲಬ್ ನ 2026_2027ನೇ ಸಾಲಿನ ನೂತನ ಅಧ್ಯಕ್ಷರಾಗಿ ಶ್ಯಾಮಣ್ಣ ಧರ್ಮಾಪುರ ಆಯ್ಕೆಯಾಗಿದ್ದು, ಕಾರ್ಯದರ್ಶಿಯಾಗಿ ಲೂಯಿಸ್ ಪೆರೇರಾ ಆಯ್ಕೆಯಾಗಿದ್ದಾರೆ.

ನಗರದ ರೋಟರಿ ಭವನದಲ್ಲಿ ಜು 07 ರ ಮಂಗಳವಾರ ಸಂಜೆ 6.30.ಕ್ಕೆ ಪದಗ್ರಹಣ ಕಾರ್ಯಕ್ರಮ ನಡೆಯಲಿದ್ದು, ಪದಗ್ರಹಣ ಕಾರ್ಯಕ್ರಮವನ್ನು ಎಂ.ಎಚ್.ಎಫ್ . ಹಾಗೂ 27,28.ನೇ ಸಾಲಿನ ನಿಯೋಜಿತ ಜಿಲ್ಲಾ ಗವರ್ನರ್ ರೊ.ಯಶ್ವಿನಿ ಸೋಮಶೇಖರ್ ನಡೆಸಿಕೊಡಲಿದ್ದಾರೆ.

ಸಹಾಯಕ ಗವರ್ನರಾಗಿ ಕೆ.ಆರ್.ನಗರ ರೋಟರಿ ಕ್ಲಬ್‌ನ ರಾಘವೇಂದ್ರ, ವಲಯ ಸೇನಾನಿಯಾಗಿ ಡಾ.ಪ್ರಸನ್ನ ಕೆ.ಪಿ. ಆಯ್ಕೆಯಾಗಿದ್ದಾರೆ. ಇವರೆಲ್ಲರನ್ನು ಜಿಲ್ಲಾ ಗವರ್ನರ್ ಸತೀಶ್ ಬೋಳಾರ್ ಅಭಿನಂದಿಸಿ ಶುಭ ಹಾರೈಸಿದ್ದಾರೆ ಎಂದು ನಿಕಟಪೂರ್ವ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


# ವೈದ್ಯರ ದಿನದಂಗವಾಗಿ ವೈದ್ಯರ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ರಾಷ್ಟ್ರೀಯ ವೈದ್ಯರ ದಿನದ ಅಂಗವಾಗಿ ನಗರ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಹುಣಸೂರಿನ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯ ವತಿಯಿಂದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಕರ್ತವ್ಯ ನಿರತ ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು, ಹಂಪಲು ಹಾಗೂ ಬ್ರೆಡ್‌ಗಳನ್ನು ವಿತರಿಸುವ ಮೂಲಕ ವೈದ್ಯರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ವೈದ್ಯರ ಸೇವೆಯನ್ನು ಶ್ಲಾಘಿಸಿ, ಸಮಾಜದಲ್ಲಿ ವೈದ್ಯರ ಪಾತ್ರದ ಮಹತ್ವವನ್ನು ತಿಳಿದುಕೊಂಡರು. ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಶಿವಶಂಕರ್ ಡಾ.ಸತೀಶ್ ಡಾ. ಸುಜಾತ ಡಾಕ್ಟರ್ ಸುಜಿತ, ತಾಲೂಕು ಆರೋಗ್ಯ ಅಧಿಕಾರಿಗಳು (ಪ್ರಭಾರಿ) ಡಾ. ವಿ ರವಿಕುಮಾರ್, ಸ ,ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಕರು ಅನಂತಿ ಶ್ರೀನಿವಾಸ್, ಸಾರ್ವಜನಿಕ ಆಸ್ಪತ್ರೆಯ ಶುಶ್ರೂಷಕ ಅಧೀಕ್ಷಕರು ಕಣ್ಣಮ್ಮ , ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯ ಶಿಕ್ಷಕರಾದ ಲೋಹಿತ್, ಮಂಜುನಾಥ್, ಸುಧಾಕರ್ ಹಾಗೂ ವಿಂದ್ಯಾ ಉಪಸ್ಥಿತರಿದ್ದು, ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯ ಈ ಸಮಾಜಮುಖಿ ಕಾರ್ಯವನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

# ಗಣತಿ ನಮೂನೆ ಅರ್ಜಿ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದ ಕಲ್ಕುಣಿಕೆ ರಂಗನಾಥ ಬಡಾವಣೆಯಲ್ಲಿ ನಿವಾಸಿಗಳಿಗೆ ಉಪವಿಭಾಗ ಅಧಿಕಾರಿ ಕಾವ್ಯ ರಾಣಿ ಹಾಗೂ ತಾಸಿಲ್ದಾರ್ ಮಂಜುನಾಥ್ ಭೇಟಿ ನೀಡಿ ಗಣತಿ ನಮೂನೆ ಅರ್ಜಿ ಫಾರಂ ವಿತರಿಸಿದ್ದಾರೆ

ನಂತರ ಉಪಯುವಾಗಾಧಿಕಾರಿ ಕಾವ್ಯ ರಾಣಿ ಮಾತನಾಡಿ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ಕರ್ನಾಟಕದಂತೆ ಜುಲೈ 29 ವರೆಗು ನಡೆಯಲಿದೆ ಅಧಿಕಾರಿಗಳು ಮತದಾರರು ಮಾಹಿತಿ ನೀಡಬೇಕು ಎಂದು ತಿಳಿಸಿದ್ದಾರೆ

ತಹಶೀಲ್ದಾರ್ ಮಂಜುನಾಥ್ ಮಾತನಾಡಿ ತಾಲೂಕಿನ ಒಟ್ಟು 2, 53. 248 ಮತದಾರರಿಗೆ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ ಈ ಸಂದರ್ಭದಲ್ಲಿ ಬಿ.ಎಲ್.ಓ ವೇಣುಗೋಪಾಲ್ ಚುನಾವಣೆ ಶಿರಸ್ದಾರ್ ಪ್ರಕಾಶ್ ಶ್ರೀನಿವಾಸ್ ಹಾಗೂ ನಿತರು ಹಾಜರಿದ್ದರು

# ಹುಸೇನಿ ಆಲಂ ದರ್ಗಾದ ಭಕ್ತರ ಕಾಣಿಕೆ ರೂ.12,72,750



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಹಿಂದೂ ಮುಸ್ಲಿಂ ಭಾವೈಕ್ಯತೆಯ ಐತಿಹಾಸಿಕ ಮುದಗಲ್ ಮೊಹರಂ ಆಚರಣೆ 2026–27ನೇ ಸಾಲಿನ ಹುಸೇನಿ ಆಲಂ ಆಶೂರ್ ಖಾನಾ ದರ್ಗಾ ಭಕ್ತಾಧಿಗಳಿಂದ ಹುಸೇನಿ ಆಲಂ ಹೆಸರಲ್ಲಿ ಹಾಕಿದ ಕಾಣಿಕೆ ಎಣಿಕೆ ಹುಂಡಿ ರೊ.12ಲಕ್ಷ 72ಸಾವಿರ 750 ಒಟ್ಟು ಮೊತ್ತ ಆಗಿದೆ ಎಂದು ದರ್ಗಾ ಕಮಿಟಿ ಕಾರ್ಯಧರ್ಶಿ ಮೊಹ್ಮದ ಸಾಧಿಕಲಿ ಮಂಗಳವಾರ ತಿಳಿಸಿದರು.

ಹುಸೇನಿ ಅಲಂ ಆಶೂರ್ಖಾನ ದರ್ಗಾದಲ್ಲಿ ಹುಸೇನಿ ಆಲಂ ಭಕ್ತರು ಹಾಕಿದ ನಜರಾನೆ ಎಣಿಕೆ ಪ್ರಕ್ರಿಯೇ ರಾಯಚೂರು ಜಿಲ್ಲಾ ವಕ್ಫಅಧಿಕಾರಿ ನೇತತ್ವದಲ್ಲಿ ಜರುಗಿತು. ಭಕ್ತರಿಂದ ಕಳೆದ ವರ್ಷಕ್ಕಿಂತ ರೂ.49,592 ಹಚ್ಚಿನ ಹಣ ದೊರಕಿದೆ. ಹುಸೇನಿ ಆಲಂ ಹೆಸರಲ್ಲಿ ಭಕ್ತರು ನಗದು ಕಾಣಿಕೆ ಜೊತೆಗೆ 5ಗ್ರಾಂ ಬಂಗಾರ ಹಾಗೂ 350ಗ್ರಾಂ ಬೆಳ್ಳಿ ಹರಕೆ ರೂಪದಲ್ಲಿ ಭಕ್ತಿ ಪೂರ್ವಕವಾಗಿ ಸಲ್ಲಿಸಿದ್ದಾರೆ. ಕಳೆದ ವರ್ಷ ಭಕ್ತರು ಹುಂಡಿಗೆ ರೂ.12ಲಕ್ಷ23ಸಾವಿರದ158 ಸಂಗ್ರಹವಾಗಿತ್ತು. ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಿನ ಹಣ ಸಂಗ್ರವಾಗಿರುವದು ಆಲಂಗಳ ಮೇಲಿನ ಧಾರ್ಮಿಕ ಭಕ್ತಿ ಬಲಗೊಂಡಿದೆ. ಭಕ್ತರಿಗೆ (ಅಲ್ಲಾ)ಭಗವಂತ ಎಲ್ಲರಿಗೂ ಸುಖ ಶಾಂತಿ ನೆಮ್ಮದಿ ನೀಡಲಿ ಎಂದು ಹುಸೇನಿ ಆಲಂ ದರ್ಗ ಆಡಳಿತ ಮಂಡಳಿ ಶುಭ ಹಾರೈಕೆ ತಿಳಿಸಿದೆ.

ಹುಸೇನಿ ಆಲಂ ದರ್ಗಾ ಆಢಳಿತ ಮಂಡಳಿ ಅಧ್ಯಕ್ಷ ಅಮೀರ್ಬೇಗ ಉಸ್ತಾದ, ಉಪಾಧ್ಯಕ್ಷ ಮಾಸೂಮ್ ಷರೀಫ, ಖಜಾಂಚಿ ಗಯಾಸುದ್ದೀನ್, ಮಂಡಿ ಖಾಜಾಸಾಬ್, ಮಿರುಷಾ ಮಕಾಂದಾರ, ರಹೆಮಾನ ಅರಬ್, ಮೌಲಾಸಾಬ್ ಆನೆಮೂಡ್, ಶೋಹೆಬ್, ಇರಫಾನ್, ಸಲೀಂಬೇಗ್, ಇದರಿಸ್, ಹೈದರಲಿ ಸೇರಿದಂತೆ ಇತರರಿದ್ದರು.

# ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್


ಪಟ್ಟಣದ ಪರಿಮಳ ಗುರುಕುಲ ವಿದ್ಯಾಪೀಠದಲ್ಲಿ ಪೂಜ್ಯ ಶ್ರೀ ವಿರೇಂದ್ರ ಹೆಗಡೆ ಧರ್ಮಸ್ಥಳ ಗುಂಪು ನೇತ್ರತ್ವದಲ್ಲಿ ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಮಂಗಳವಾರ ಜರುಗಿತು.

ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮಕ್ಕೆ ಬೆಂಗಳೊರು ಗ್ರಾಮಾಂತರ ಪೊಲೀಸ್ ಇಲಾಖೆ ಡಾ! ವೆಂಕಟೇಶ ಪ್ರಸನ್ನ ಜ್ಯೋತಿ ಬೆಳಗಿ ಮಾತನಾಡಿದ ಅವರು ಮಾದಕ ವಸ್ತುಗಳ ಸೇವನೆಯಿಂದ ಅನೇಕ ಕಾಯಿಲೆಗಳಗೆ ಒಳಗಾಗಿ ತಮ್ಮ ಜೀವಕ್ಕೆ ತಾವೇ ನಾಂದಿ ಹಾಡುತ್ತಾರೆ. ಆರ್ಥಿಕವಾಗಿ ದಿವಾಳಿ ಕೂಡ ಆಗುತ್ತಾರೆ. ಇದ–ರಿಂದ ಕುಟುಂಬ ಹಾಗು ಸಮಾಜದ ಸ್ವಾಸ್ಥ್ಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಹೀಗಾಗಿ ಪ್ರತಿಯೊಬ್ಬರು ತಮ್ಮ ಆರೋಗ್ಯದ ಹಿತ ದೃಷ್ಟಿಯಿಂದ ಮಾದಕ ವಸ್ತುಗಳ ಸೇವನೆ ಬಿಟ್ಟು ಸಾಧನೆಯ ಪ್ರಗತಿಯತ್ತ ಸಾಗಬೇಕು. ಸಮಾಜದಲ್ಲಿ ಆಗುವ ಅನಾಹುತಗಳನ್ನು ತಪ್ಪಿಸಬಹುದು ಎಂದು ಕಿವಿ ಮಾತು ಹೇಳಿದರು.

ಬೆಂಗಳೂರಿನ ಹೃದ್ರೋರೋಗ ತಜ್ಞಡಾ! ದೇವಿ ಪ್ರಶಾದ ಶೆಟ್ಟಿ ಮಾತನಾಡಿ , ಪ್ರಸ್ತುತ ದಿಮಾನದಲ್ಲಿ ಪ್ರಜ್ಞಾವಂತರೆ ಹೆಚ್ಚು ಮಾದಕ ವಸ್ತುಗಳ ಸೇವನೆ ಮಾಡುತ್ತಿರುವದು ದುರಾದೃಷ್ಟಕರ ಸಂಗತಿಯಾಗಿದೆ. ಮಾದಕ ವಸ್ತು ಸೇವನೆಯಿಂದ ಹೃದಕ್ಕೆ ಸಂಭಂದಿತ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಆರ್ಥಿಕವಾಗಿ ಸದೃಡವಾಗಿರಲು ಸಾಧ್ಯವಾಗದೆ. ತಮ್ಮ ಜೀವನದ ಹಾದಿ ತಪ್ಪಿ ಸಮಾಜ ಕಂಟಕರಾಗುತ್ತಾರೆ. ವಿದ್ಯಾರ್ಥಿಗಳು ಜಾಗೃತರಾಗಿ, ಇತರರಿಗೂ ಅರಿವು ಮೂಡಿಸಬೇಕು ಎಂದು ಹೇಳಿದರು. ಪ್ರತಿಯೊಬ್ಬರೂ ಜಾಗೃತರಾಗಲು ವಿದ್ಯಾರ್ಥಿಗಳಿಗೆ ಪ್ರೊಜಕ್ಟರ ಸಹಾಯದಿಂದ ಮಾರ್ಗದರ್ಶನ ಮಾಹಿತಿ ನೀಡಿದರು. ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪೂಜ್ಯ ವೀರೇಂದ್ರಹೆಗಡೆಯವರು ನಾಗಾಲಪುರ ಸೇರಿದಂತೆ ವಿವಿಧ ಶಾಲೆಗಳಲ್ಲಿ ಮಾದಕ ವಸ್ತು ಸೇವನೆ ನಿರ್ಮೂಲನೆ ಕಾರ್ಯಕ್ರಮ ಮಾಡಲಾಯಿತು.

ಶಾಲಾ ಆಡಳಿತಗಾರ ನಾರಾಯಣರಾವ್ ದೇಶಪಾಂಡೆ.ವೆಂಕಟೇಶ ಕುಲಕರ್ಣಿ,ಶಶಿಕಲಾಬೋವಿ, ತೋಟಮ್ಮ ಅಡಿವಯ್ಯ ಮಾಲಗತ್ತಿ, ಮೇಲ್ವಿಚಾರಕ ಆಂಜನೇಯ, ಸೇವಾಪ್ರತಿನಿದಿ ಶಾರದ, ಶರಣಮ್ಮ ಸೇರಿದಂತೆ ಶಾಲ ಮುಖ್ಯ ಗುರುಗಳು ಹಾಗೂ ಶಾಲಾ ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

# ಪತ್ರಕರ್ತರು-ವೈದ್ಯರು ಸಮಾಜದ ಎರಡು ಕಣ್ಣುಗಳಿದ್ದಂತೆ:ಡಾ.ರಾಹುಲ್ ನಾಯ್ಕೋಡಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸಮಾಜಕ್ಕೆ ವೈದ್ಯರು ಮತ್ತು ಪತ್ರಕರ್ತ ಕೊಡುಗೆ ಅಪಾರವಾದದ್ದು ಎಂದು ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಹೇಳಿದರು.ನಗರದ ನಾಯ್ಕೋಡಿ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ವೈದ್ಯರ ಮತ್ತು ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.ವೈದ್ಯರು ಕಣ್ಣಿಗೆ ಕಾಣುವ ನಿಜವಾದ ದೇವರು ರೋಗಿಗಳ ಹಾರೈಕೆಗೆ ಹಗಲಿರುಳು ಎನ್ನದೆ ಶ್ರಮಿಸುತ್ತಾರೆ ಎಂದರು ದೇಶದ ಅಭಿವೃದ್ಧಿಯಲ್ಲಿ ಪತ್ರಕರ್ತರ ಪಾತ್ರ ಅತ್ಯಂತ ದೊಡ್ಡದು ತಮ್ಮ ನೇರ ನುಡಿಯ ಬರವಣಿಗೆಯ ಮೂಲಕ ಸಮಾಜದಲ್ಲಿನ ಅಂಕು ಡೊಂಕುಗಳನ್ನು ತಿದ್ದುವ ಮೂಲಕ ಸಮಾಜದ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಎಂದು ಹೇಳಿದರು. ಡಾ.ರಾಹುಲ್ ಎಸ್ ನಾಯ್ಕೋಡಿ ಮಾತನಾಡಿ ವೈದ್ಯರು ಮತ್ತು ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ ಸಮಾಜಕ್ಕಾಗಿ ಹಗಲಿರುಳು ಎನ್ನದೆ ದುಡಿಯುತ್ತಾರೆ.ಪ್ರತಿಯೊಬ್ಬ ಪ್ರಜೆಯು ವೈದ್ಯರು ಮತ್ತು ಪತ್ರಕರ್ತರನ್ನು ಗೌರವಿತವಾಗಿ ಕಾಣಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ.ಬಸವರಾಜ ಕಾವಲಿ,ಭೀಮರಾಯ ಜಂಗಳಿ,ಬಸಲಿಂಗಪ್ಪ ನಾಯಕ್ ಹುಲಕಲ್, ಭೀಮಣ್ಣ ಲಕ್ಷ್ಮಂಪುರ,ಮಾಳಪ್ಪ ಪೂಜಾರಿ ಗೋಡಿಹಾಳ,ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಮದ್ಯ ಧೂಮಪಾನ ಮಾದಕ ವಸ್ತುಗಳಿಂದ ಯುವಜನತೆ ದೂರವಿರಿ:ಪಿಎಸ್ಐ ಮೈಬುಬ್ ಅಲಿ

• ಮಲ್ಲಮ್ಮ ನುಡಿ ವಾರ್ತೆವಡಗೇರಾ




ಮದ್ಯಪಾನ ಧೂಮಪಾನ ಮತ್ತು ಮಾದಕವಸ್ತುಗಳಿಂದ ಯುವಜನತೆ ದೂರವಿರುವಂತೆ ಪಿಎಸ್ಐ ಮೈಬುಬ್ಅಲಿ ಹೇಳಿದರು.ಪಟ್ಟಣದ ಡಿ.ಡಿ.ಯು ಸ್ವತಂತ್ರ ಪದವಿಪೂರ್ವಕಾಲೇಜಿನಲ್ಲಿಬುಧವಾರದಂದು ಜಿಲ್ಲಾ ಪೊಲೀಸ್.ವಡಗೇರಾ ಪೊಲೀಸ್ಠಾಣೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ. ಅಂತರಾಷ್ಟ್ರೀಯ ಮಾದಕ ವಸ್ತುಗಳ ದುರುಪಯೋಗ ಮತ್ತು ಕಾನೂನು ಬಾಹಿರ ಸಾಗಾಟ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಯುವ ಜನಾಂಗ ಮಾದಕ ವಸ್ತುಗಳು ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗಿ ಚಿಕ್ಕ ವಯಸ್ಸಿನಲ್ಲಿಯೇ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದು ಅತ್ಯಂತ ಕಳವಳ ಕಾರಿಯಾಗಿದೆ ಮಧ್ಯ ಗಾಂಜಾ ಅಫೀಮು ಚರಸ್ ನಂತ ವಸ್ತುಗಳ ಸೇವನೆಯಿಂದ ನಶೆಯಲ್ಲಿ ಮೈ ಮರೆತು ಕೊಲೆ ಅತ್ಯಾಚಾರ ಅಪಘಾತದಂತ ಪ್ರಕರಣಗಳು ಹೆಚ್ಚುತ್ತಿವೆ ಯುವಕರು ಮಾದಕ ವಸ್ತುಗಳ ಸೇವನೆಯಿಂದ ಅದೆಷ್ಟು ಹೊರಬರಬೇಕಿದೆ ದುಶ್ಚಟಗಳಿಂದ ದೂರವಿದ್ದು ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕಗಿದೆ.ಸಾರ್ವಜನಿಕಸ್ಥಳ ಶಾಲಾ ಕಾಲೇಜು ಆವರಣದಲ್ಲಿ ಮಾದಕ ವಸ್ತುಗಳ ಸೇವನೆಮಾಡಿದ್ದೆ ಆದಲ್ಲಿಜೈಲು ಶಿಕ್ಷೆ ದಂಡ ವಿಧಿಸಲಾಗುತ್ತದೆ ಎಂದು ತಿಳಿಸಿದರು. ಹೆಚ್ಚಾಗಿ ಕಾಲೇಜು ಯುವಕ ಯುವತಿಯರುಮಾದಕ ವಸ್ತುಗಳ ಸೇವನೆ ಮಾಡುತ್ತಿದ್ದುಅದು ಅಪಾಯಕಾರಿ ನಶಾಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರು ಶ್ರಮಿಸುವಂತೆ ಕಿವಿಮಾತುಹೇಳಿದರು.ಈ ಸಂದರ್ಭದಲ್ಲಿ ಕಾಲೇಜು ಸಿಬ್ಬಂದಿ ವರ್ಗದವರು,ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ದೂರದೃಷ್ಟಿಯ ಆಡಳಿತಗಾರ ಮತ್ತು ಬೆಂಗಳೂರು ನಗರದ ನಿರ್ಮಾತೃ: ಗುರಪ್ಪಾಚಾರ್ಯ ವಿಶ್ವಕರ್ಮ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ನಾಡಪ್ರಭು ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ, ದೂರದೃಷ್ಟಿಯ ಆಡಳಿತಗಾರ ಮತ್ತು ಬೆಂಗಳೂರು ನಗರದ ನಿರ್ಮಾತೃ ಎಂದು ಪ್ರಾಚಾರ್ಯ ಗುರಪ್ಪಾಚಾರ್ಯ ವಿಶ್ವಕರ್ಮ ಹೇಳಿದರು.

ನಗರದ ಲಿಂಗೇರಿ ಕೋನಪ್ಪ ಶಾಲೆಯಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಾಡಪ್ರಭು ಶ್ರೀ ಕೆಂಪೇಗೌಡರವರ ಜಯಂತ್ಯೋತ್ಸವ ಸಮಿತಿ ಯಾದಗಿರಿ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ,ಗೌರವ ಅರ್ಪಿಸಿ ಅವರು ಮಾತನಾಡಿದರು.

ಕೆಂಪೆಗೌಡ ಅವರ ಆಡಳಿತ, ಸಮಾಜ ಸುಧಾರಣೆ ಮತ್ತು ನಗರ ನಿರ್ಮಾಣದ ಸಾಧನೆಗಳು ಇಂದಿಗೂ ಸ್ಮರಣೀಯವಾಗಿವೆ ಎಂದರು.

ಕೆಂಪೇಗೌಡರು 1510ರಲ್ಲಿ ಯಲಹಂಕದಲ್ಲಿ ಕೆಂಪನಂಜೇಗೌಡ ಮತ್ತು ಲಿಂಗಾಂಬೆ ದಂಪತಿಗೆ ಜನಿಸಿದ ಅವರು, ಐಗೊಂಡಾಪುರದ (ಪ್ರಸ್ತುತ ಹೆಸರಘಟ್ಟ) ಗುರುಕುಲದಲ್ಲಿ ಶಿಕ್ಷಣ ಮತ್ತು ಯುದ್ಧ ಕಲೆಗಳನ್ನು ಕಲಿತರು.

ವಿಜಯನಗರದ ಅಚ್ಯುತರಾಯರ ಕಾಲದಲ್ಲಿ ಪಟ್ಟಾಭಿಷಿಕ್ತರಾದ ಅವರು, ಸುಮಾರು 56ವರ್ಷಗಳ ಕಾಲ ಯಶಸ್ವಿಯಾಗಿ ಆಡಳಿತ ನಡೆಸಿದ ಧಿಮಂತರಾಗಿದ್ದಾರೆಂದರು.

1537ರಲ್ಲಿ ಅಚ್ಯುತರಾಯರ ಅನುಮತಿ ಪಡೆದು, ಮಣ್ಣಿನ ಕೋಟೆ ಮತ್ತು ಬೆಂಗಳೂರು ಪೇಟೆಯನ್ನು (ಪ್ರಸ್ತುತ ಕೇಂದ್ರ ಮಾರುಕಟ್ಟೆ ಪ್ರದೇಶ) ನಿರ್ಮಿಸುವ ಮೂಲಕ ಬೆಂಗಳೂರು ನಗರಕ್ಕೆ ಭದ್ರ ಅಡಿಪಾಯ ಹಾಕಿದರು.

ವಿಶಾಲವಾದ ರಸ್ತೆಗಳು, ವ್ಯವಸ್ಥಿತ ಮಾರುಕಟ್ಟೆಗಳು (ಉದಾ: ಅಕ್ಕಿಪೇಟೆ, ಬಳೆಪೇಟೆ) ಮತ್ತು ನಾಲ್ಕು ದಿಕ್ಕುಗಳಲ್ಲಿ ಗಡಿ ಗೋಪುರಗಳನ್ನು ನಿರ್ಮಿಸುವ ಮೂಲಕ ಅತ್ಯುತ್ತಮ ನಗರಾಭಿವೃದ್ಧಿ ಮಾಡಿದರೆಂದು ಅವರ ಸಾಧನೆಗಳ ಮೇಲೆಮೆಲಕು ಹಾಕಿದರು.

ಕೃಷಿ ಮತ್ತು ಕುಡಿಯುವ ನೀರಿನ ಅಗತ್ಯಕ್ಕಾಗಿ ಕೆಂಪಾಂಬುಧಿ ಸೇರಿದಂತೆ ವಿವೀಧೆಡೆ ಸುಮಾರು 1000ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿ "ಕೆರೆಗಳಂ ಕಟ್ಟು, ಮರಗಳಂ ನೆಡು" (ಕೆರೆಗಳನ್ನು ನಿರ್ಮಿಸಿ, ಮರಗಳನ್ನು ನೆಡಿ) ಎಂಬ ಮಂತ್ರವನ್ನು ಸಾಕಾರಗೊಳಿಸಿದ ಜಲಸಾಧಕರಾಗಿದ್ದಾರೆಂದು ವಿಶ್ವಕರ್ಮ ಬಣ್ಣಿಸಿದರು.

ಮೊರಸು ಒಕ್ಕಲಿಗ ಜನಾಂಗದಲ್ಲಿದ್ದ 'ಬಂಡಿ ದೇವರ' ಪದ್ಧತಿಯಡಿ, ಅವಿವಾಹಿತ ಹೆಣ್ಣುಮಕ್ಕಳ ಎಡಗೈಯ ಕೊನೆಯ ಎರಡು ಬೆರಳುಗಳನ್ನು ಕತ್ತರಿಸುವ ಅನಿಷ್ಟ ಪದ್ಧತಿಯನ್ನು ಕಠಿಣವಾಗಿ ನಿಷೇಧಿಸಿ, ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದರು.

ಸ್ವತಃ ಬಹುಭಾಷಾ ಪಂಡಿತರಾಗಿದ್ದ ಅವರು, ತೆಲುಗಿನಲ್ಲಿ 'ಗಂಗಾಗೌರೀವಿಲಾಸ' ಎಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾರೆ. ಅಲ್ಲದೆ, ಹಲವು ದೇವಾಲಯಗಳನ್ನು ಜೀರ್ಣೋದ್ದಾರ ಮಾಡಿ ಧಾರ್ಮಿಕ ಕೇಂದ್ರಗಳನ್ನು ಪೋಷಿಸಿದರೆಂದು ಹೇಳಿದರು.

ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ ಕಾರ್ಯಕ್ರಮ ಉದ್ಘಾಟಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ, ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಒಗ್ಗಟ್ಟಿನಿಂದ ಮಾತ್ರ ಸೌಲಭ್ಯ ಸಾಧ್ಯ, ಶಿಕ್ಷಣ ಪಡೆದು ಹಕ್ಕಿಗಾಗಿ ಹೋರಾಡಿ; ಬಸವರಾಜ ಮೇತ್ರಿ ಕರೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಮಾದಿಗ ಸಮುದಾಯದವರು ಒಗ್ಗಟ್ಟಾದಾಗ ಮಾತ್ರ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ. ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆದು, ತಮ್ಮ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಬೇಕು ಎಂದು ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಮೇತ್ರಿ ಹೇಳಿದರು.ತಾಲೂಕಿನ ಹತ್ತಿಕುಣಿ ಗ್ರಾಮದಲ್ಲಿ ಮಂಗಳವಾರ ಪದಾಧಿಕಾರಿಗಳ ನೇಮಕ ಸಭೆಯಲ್ಲಿ ಅವರು ಮಾತನಾಡಿದರು. ಸಮುದಾಯದ ಅಭಿವೃದ್ಧಿಗೆ ಸಂಘಟನೆ ಮತ್ತು ಶಿಕ್ಷಣ ಅತ್ಯಂತ ಅಗತ್ಯ ಎಂದು ಅವರು ಈ ಸಂದರ್ಭದಲ್ಲಿ ಪ್ರತಿಪಾದಿಸಿದರು.ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷರಾದ ಪ್ರಭಾಕರ್ ಎಂ. ಹದುನೂರು ಹಾಗೂ ರಾಜ್ಯ ಉಪಾಧ್ಯಕ್ಷ ಬಸವರಾಜ್ ಮೈತ್ರಿ ನಾಯ್ಕಲ್ ಅವರ ಆದೇಶದ ಮೇರೆಗೆ, ಜಿಲ್ಲಾ ಅಧ್ಯಕ್ಷರಾದ ಮಲ್ಲಿಕಾರ್ಜುನ ಅವರು ಹತ್ತಿಕುಣಿ ಹೋಬಳಿ ಗ್ರಾಮ ಘಟಕದ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಹತ್ತಿಕುಣಿ ಹೋಬಳಿ ಘಟಕ ಅಧ್ಯಕ್ಷರಾಗಿ ಭೀಮರಾಯ, ಗ್ರಾಮ ಘಟಕ ಅಧ್ಯಕ್ಷರಾಗಿ ತಾಯಪ್ಪ, ಜಿಲ್ಲಾ ಸಂಘಟನೆ ಕಾರ್ಯದರ್ಶಿಯಾಗಿ ರಾಕೇಶ ಪುಟಗಿ, ಜಿಲ್ಲಾ ಕಲಾತಂಡ ಅಧ್ಯಕ್ಷರಾದ ಹಣಮಂತ ಹುಲಕಲ್, ಜಿಲ್ಲಾ ಕಲಾತಂಡ ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ರಾಮಸಮುದ್ರ, ವಡಗೇರಾ ಗೌರವಾಧ್ಯಕ್ಷರಾದ ಮರಿಯಪ್ಪ, ತಾಲೂಕ ಅಧ್ಯಕ್ಷರಾದ ಶರಣಪ್ಪ, ಸಮಾಜದ ಹಿರಿಯ ಮುಖಂಡರಾದ ತಿಪ್ಪಣ್ಣ ಸೇರಿದಂತೆ ಪದಾಧಿಕಾರಿಗಳಾದ ಮಲ್ಲಿಕಾರ್ಜುನ್ ಕಜ್ಜಿ, ಶೇಖರ್ ಹೊಸಳ್ಳಿ, ರಾಜು ಗುಂಡನೂರ್, ಮಲ್ಲಪ್ಪ , ಭೀಮರಾಯ ಸಾತನೂರು, ಲಕ್ಷ್ಮಿಕಾಂತ್ ಡೋಕೇನೂರ್, ಶರಣಪ್ಪ ಡೋಕೇನೂರ್, ಭೀಮರಾಯ ಶಾಪುರ್, ಮಲ್ಲಿಕಾರ್ಜುನ್ ಭೀಮಶೆಪ್ಪೂರ್ , ಸುಭಾಷ್ ಭೀಮಶೆಪ್ಪೂರ್ ಇದ್ದರು.

# ಮಕ್ಕಳನ್ನ ತಪ್ಪದೆ ಶಾಲೆಗೆ ಕಳಿಸಿ : ಶಾಸಕ ಕಂದಕೂರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಸರ್ಕಾರಿ ಶಾಲೆಗಳ ಬೆಳವಣಿಗೆಗಾಗಿ ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಈ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿದರೆ ಹಾಗೂ ಶಿಕ್ಷಣ ಇಲಾಖೆಯ ಯೋಜನೆಯನ್ನು ಸದ್ಬಳಕೆ ಮಾಡಿದರೆ ಖಾಸಗಿ ಶಾಲೆಗಳಿಗಿಂತ ಕಡಿಮೆ ಇಲ್ಲದಂತೆ ಬೆಳವಣಿಗೆಯಾಗುತ್ತದೆ. ಈ ದಿಸೆಯಲ್ಲಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವ ಮೂಲಕ ಸರ್ಕಾರಿ ಶಾಲೆಗಳ ಉನ್ನತ್ತಿಗೆ ಪ್ರೋತ್ಸಾಹಿಸಬೇಕು ಎಂದು ಗುರುಮಠಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ಮನವಿ ಮಾಡಿದರು.

ತಾಲೂಕಿನ ಲಿಂಗೇರಿ ಸ್ಟೇಶನ್ ಸರ್ಕಾರಿ ಪ್ರೌಢ ಶಾಲೆ ಆವರಣದಲ್ಲಿ 60 ಲಕ್ಷ ವೆಚ್ಚದಲ್ಲಿ ಪ್ರೌಢ ಶಾಲಾ ಕೋಣೆಗಳು ಹಾಗೂ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.ಸರ್ಕಾರಿ ಶಾಲೆಗಳ ಬೆಳವಣಿಗೆಯಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಬಹುಮುಖ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಶಾಲೆಯ ಅಭಿವೃದ್ಧಿಯ ಜವಾಬ್ದಾರಿ ಪೋಷಕರು ಮತ್ತು ಶಿಕ್ಷಕರ ಮೇಲಿದ್ದು ಶಾಲೆಯ ಕುಂದು ಕೊರತೆ ಇತರೆ ಚಿಕ್ಕ ಪುಟ್ಟ ಸಮಸ್ಯೆಗಳಿಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸಲಹೆ ನೀಡಿದರು.

ಡಿಡಿಪಿಐ ಚನ್ನಬಸಪ್ಪ ಮುಧೋಳ ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯುಳ್ಳ ಗುರುಮಠಕಲ್ ಶಾಸಕರು ಈ ಭಾಗದಲ್ಲಿ ಅತಿಹೆಚ್ಚು ಶಾಲೆಗಳ ಅಭಿವೃದ್ಧಿಗೆ ತಮ್ಮ ಅನುದಾನ ನೀಡುವುದರ ಜೊತೆಗೆ ಕಾಲಕಾಲಕ್ಕೆ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಮಕ್ಕಳೊಂದಿಗೆ ಚರ್ಚಿಸಿ ಅವರ ಕುಂದಕೊರತೆಗಳನ್ನು ನಿವಾರಿಸುತ್ತಿರುವುದು ಶ್ಲಾಘನೀಯವಾದ ವಿಷಯವಾಗಿದೆ ಎಂದು ಹೇಳಿದರು.

ಕಿಲ್ಲನಕೇರಾ ಗ್ರಾಮದಲ್ಲಿ : ನಮ್ಮ ಜಿಲ್ಲೆಯಲ್ಲಿ ಪ್ರತಿಯೊಬ್ಬರು ಹಿಂದುಳಿದ ಜಿಲ್ಲೆ ಎಂದ ಸಂಬೋಧಿಸುತ್ತಿರುವುದು ಸರಿಯಲ್ಲ ಎಲ್ಲರೂ ಸೇರಿ ಈ ಭಾಗದ ಅಭಿವೃದ್ಧಿಗೆ ಸ್ಪಂದಿಸೋಣ. ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಜನರ ಸಹಕಾರದಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದಲ್ಲಿ ಹಿಂದುಳಿದ ಹಣೆಪಟ್ಟಿ ಕಳಚಲ ಬಹಳ ವರ್ಷಗಳು ಬೇಕಿಲ್ಲ, ಈ ಹಿಂದುಳಿದ ಹಣೆಪಟ್ಟಿ ಕಳಚಲು ಪ್ರತಿಯೊಬ್ಬರೂ ಕೈಜೋಡಿಸೋಣ ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಹೇಳಿದರು.

ಕಿಲ್ಲನಕೇರಾ ಗ್ರಾಮದ ಲಕ್ಷಿ ??ೀ ದೇವಸ್ಥಾನದ ಹತ್ತಿರ 50 ಲಕ್ಷ ವೆಚ್ಚದಲ್ಲಿ ಬ್ರೀಡ್ಜ್ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ನಮ್ ತಂದೆಯವರ ಕಾಲದಿಂದಲೂ ನಾನು ಸಾಕಷ್ಟು ಅನುದಾನವನ್ನು ಈ ಗ್ರಾಮಕ್ಕೆ ನೀಡಿದ್ದೇನೆ. ನಿಮ್ಮೂರಿನ ಅಭಿವೃದ್ಧಿಗೆ ಸ್ಪಂದಿಸುವ ಗುಣ ನಿಮ್ಮಲ್ಲಿರಬೇಕು, ರಸ್ತೆ, ವಿದ್ಯುತ್, ಕುಡಿವ ನೀರು ಸೇರಿದಂತೆ ವಿವಿಧ ಮೂಲಭೂತ ಸೌಕರ್ಯ ನೀಡಲು ನಾನು ಬದ್ದನಾಗಿದ್ದೇನೆ ಎಂದು ಹೇಳಿದರು.

ಜುಲೈ 15ರೊಳಗೆ ರೈತರು ಫಸಲ್ ಭೀಮಾ ಯೋಜನೆಯಲ್ಲಿ ನೋಂದಣಿ ಮಾಡಿಸಬೇಕು, ಯಾವುದೇ ಕಾರಣಕ್ಕೂ ರೈತರು ವಿಳಂಭ ಮಾಡಬಾರದು ವಿಮೆ ಮಾಡಿಸದ ರೈತರಿಗೆ ಮುಂದಿನ ದಿನಗಳಲ್ಲಿ ಬರುವ ಸರ್ಕಾರಿ ಪರಿಹಾರ ಹಣ ಸಿಗುವುದಿಲ್ಲವೆಂದು ತಿಳಿಸಿದರು.

ಇದೇ ವೇಳೆ ಜನರ ಕುಂದು ಕೊರತೆ ಆಲಿಸಿದ ಸಂದರ್ಭದಲ್ಲಿ ಅಲ್ಲಿನ ವಾರ್ಡ್ ನಂ 1 ರಲ್ಲಿ ಕುಡಿವ ನೀರಿನ ಸಮಸ್ಯೆ ತೀರಾ ಹೆಚ್ಚಳವಾಗಿದ್ದನ್ನು ಗಮನಿಸಿದ ಶಾಸಕರು ಸ್ಥಳದಲ್ಲಿಂದಲೇ ಮೇಲಾಧಿಕಾರಿಗಳಿಗೆ ಸಂಪರ್ಕಿಸಿ ಕಿಲ್ಲನಕೇರಾ ಗ್ರಾಮಕ್ಕೆ ಒಂದ್ ಬೋರ್‌ವೆಲ್ ಕೊರೆಸಿ ನೀರಿನ ಸಮಸ್ಯೆ ನೀಗಿಸಬೇಕು ಒಂದೆರಡು ದಿನದಲ್ಲಿ ಸ್ಥಳದಿಂದ ಚಿತ್ರ ತೆಗೆದು ಸಮಸ್ಯೆ ಪರಿಹರಿಸಿ ನನ್ನ ಗಮನಕ್ಕೆ ತರಬೇಕು ಎಂದು ತಾಕೀತು ಮಾಡಿದರು.

ಮಾಧ್ವಾರ ಪ್ರೌಢ ಶಾಲೆ ಆವರಣ : ಸರ್ಕಾರಿ ಶಾಲೆಗಳಿಗೆ ಸೌಲಭ್ಯ ಕೊಡಲು ನಾನು ತಯಾರಿದ್ದೇನೆ, ನೀವು ನಿಮ್ಮ ಮಕ್ಕಳನ್ನು ಶಾಲೆಗೆ ತಪ್ಪದೆ ಕಳಿಸಬೇಕು, ಶಿಕ್ಷಕರೊಂದಿಗೆ ಉತ್ತಮ ಬಾಂಧವ್ಯದಿಂದ ಇರಬೇಕು ಶಾಲೆಯ ಅಭಿವೃದ್ಧಿ ನಿಮ್ಮೂರಿನ ಅಭಿವೃದ್ಧಿಗೆ ವೇದಿಕೆಯಾಗಲಿದೆ ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಹೇಳಿದರು.

ಮಾಧ್ವಾರ ಪ್ರೌಢ ಶಾಲೆ ಆವರಣದಲ್ಲಿ 80 ಲಕ್ಷ ವೆಚ್ಚದಲ್ಲಿ ಶಾಲೆ ಕೋಣೆಗಳು ಹಾಗೂ ಭೋಜನಾಯ ಕೋಣೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ನಾನು ಜನಪರ ಶಾಸಕ ಆಗ್ತಿನಿ: ಸಾಕಷ್ಟು ಬಾರಿ ಹಲವರು ಜನಪ್ರೀಯ ಶಾಸಕ ಅನ್ನುವುದನ್ನು ನಾನು ನೋಡಿದ್ದೇನೆ, ಅಭಿವೃದ್ಧಿಯ ದೃಷ್ಟಿಯಿಂದ ನಾನು ಜನಪರ ಕೆಲಸ ಮಾಡುತ್ತಾ ಜನಪರ ಶಾಸಕ ನಾಗಲೂ ಇಚ್ಚಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿರ್ಮಿತಿ ಕೇಂದ್ರ ಜಿಲ್ಲಾ ಅಧಿಕಾರಿ ಕಿರಣಕುಮಾರ, ಕೌಳುರ್ ಪಿಡಿಒ ಸರೋಜಾ, ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಶ್ಚಂದ್ರ ಕಟಕಟಿ, ಮಲ್ಲಣಗೌಡ ಹಳಿಮನಿ ಕೌಳೂರು, ಶರಣಪ್ಪಗೌಡ ಹೊಸಳ್ಳಿ, ರಾಜಶೇಖರಗೌಡ ಕಿಲ್ಲನಕೇರಾ,ಮಹಿಪಾಲರಡ್ಡಿ ಮಲ್ಹಾರ್,ಮಹಿಪಾಲರಡ್ಡಿ ಬಳಿಚಕ್ರ, ಲಕ್ಷ ??ಣ ನಾಯಕ ಕೂಡ್ಲೂರ, ಸಾಹೇಗೌಡ ಗೌಡಗೇರಾ, ಮಲ್ಲೇಶ ನಾಯಕ, ಆನಂದ ವಡವಟ, ಮಲ್ಲಿಕಾರ್ಜುನ ಅರುಣಿ, ಮರೆಪ್ಪ ನಾಟೆಕಾರ್, ವಿರಪಣ್ಣ ಸಾಹುಕಾರ, ಬನಶಂಕರಗೌಡ, ಅಲ್ಲಾವುದ್ದಿನ್ ನೀಲಹಳ್ಳಿ, ಮೋದಿನ್‌ಸಾಬ, ಬೆಂಜಿಮನ್ ಬಳಿಚಕ್ರ, ಶರಣಯ್ಯಸ್ವಾಮಿ, ಸಾಬು ನಾಯಕ, ನರಸಪ್ಪ ಜೆಗಾರ, ಆನಂದ ಗೌಡಗೇರಾ ತಾಂಡಾ, ಗೋಪಾಲ ಗೌಡಗೇರಾ ತಾಂಡಾ, ವೆಂಕಟೇಶ ಗಡದ, ಮಲ್ಲಣಗೌಡ ಮಲ್ಹಾರ, ಗೋವಿಂದ ಶೆಟ್ಟಿಕೇರಾ, ಬಸವರಾಜ ಶೆಟ್ಟಿಕೇರಾ, ಅಮಾತೆಪ್ಪ ಶೆಟ್ಟಿಕೇರಾ, ಮಲ್ಲು ನಾಯಕ ಜಿನಕೆರಾ, ಲಕ್ಷ್ಮಣ ನಾಯಕ ಜಿನಕೆರಾ, ಶರಣಪ್ಪ ಜಿನಕೆರಾ, ವಿಜಯ ಜಿನಿಕೇರಾತಾಂಡ, ಶಂಕರ ಜಿನಿಕೇರಾತಾಂಡ, ಸಾಬರಡ್ಡಿ ಕೌಳೂರು, ಯಲ್ಲಪ್ಪ ಬೋತಾ, ಶರಣಗೌಡ ಮಾಧ್ವಾರ, ಬನ್ನಪ್ಪಗೌಡ ವಂಕಸಂಬ್ರ, ಶ್ರೀನಿವಾಸ ಸಣ್ಣ ಸಂಬ್ರ, ಖಾಜನಗೌಡ ಮಾದ್ವಾರ, ವಿರುಪಾಕ್ಷೀ ಮಾಧ್ವಾರ, ನಾಗಪ್ಪ ಬುರುಕಲ್, ಬನದೇಶ ಮಾಧ್ವಾರ, ಗೋಪಾಲ ಮಾದ್ವಾರ, ಸಾಯಪ್ಪ ಮಡಿವಾಳ, ಶ್ರೀಶೈಲ ಕಂಬಾರ ಸೇರಿದಂತೆ ಇತರರಿದ್ದರು.

ಪುರಸಭಾ ಕಾರ್ಯಾಲಯ,
ಹಗರಿಬೊಮ್ಮನಹಳ್ಳಿ–583212
ಜಿಲ್ಲೆ: ವಿಜಯನಗರ ರಾಜ್ಯ: ಕರ್ನಾಟಕ

TOWN MUNICIPAL COUNCIL,
HAGARIBOMMANAHALLI-583212
Dist:VijayaNagara State:Karnataka

**Website:**www.hagaribommanahallitown.mrc.gov.in
**Email:**itstaff_ulb_hbhalli@yahoo.in **Phone:**08397-238358

ಸಂಖ್ಯೆ: ತಾಂತ್ರಿಕ/ಕಾಮಗಾರಿ/ಟೆಂಡರ್/2026–27 ದಿನಾಂಕ:01.07.2026

**–: ಅಲ್ಪಾವದಿ ಟೆಂಡರ್ ಪ್ರಕಟಣೆ :–**

ಪುರಸಭೆ ಕಾರ್ಯಾಲಯ ಹಗರಿಬೊಮ್ಮನಹಳ್ಳಿ, ವಿಜಯನಗರ (ಜಿ) ಕೆಳಗೆ ವಿವರಿಸಿದ ಲೆಕ್ಕ ಶೀರ್ಷಿಕೆಗಳಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 1999 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಅರ್ಹ ಗುತ್ತಿಗೆದಾರರು / ಸರಬರಾಜುದಾರದಿಂದ ಕೆಪಿಪಿ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಪುರಸಭೆ ಕಾರ್ಯಾಲಯದ ಸೂಚನಾ ಫಲಕದಲ್ಲಿ ನೋಡಬಹುದು ಹಾಗು ಸಂಬಂಧಿಸಿದ ಶಾಖೆಯ ಸಿಬ್ಬಂಧಿಯಿಂದ ಮಾಹಿತಿ ಪಡೆಯಬಹುದು.

| | | |
|---|---|---|
| 1 | ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 09.07.2026 ಮಧ್ಯಾಹ್ನ 5:30 ಗಂಟೆ ವರೆಗೆ |
| 2 | ಟೆಂಡರ್ ತೆರೆಯುವ ದಿನಾಂಕ & ಸ್ಥಳ | 13.07.2026 ಬೆಳ್ಳಿಗ್ಗೆ 10:30 ಗಂಟೆ, ಪುರಸಭೆ ಹಗರಿಬೊಮ್ಮನಹಳ್ಳಿ. |

ಒಂದು ವೇಳೆ ನಿಗಧಿಪಡಿಸದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

| ಕ್ರ.ಸಂ | ಲೆಕ್ಕಶೀರ್ಷಿಕೆ | ಕಾಮಗಾರಿಯ ಇಂಡೆಂಟ್ ವಿವರ | ಟೆಂಡರ್ ನಿಗದಿಪಡಿಸಿದವರ್ಗ | ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 01 | 15th Finance Tied 2023-24 | DMA/2026-27/OW/WORK_INDENT60448 | ಸಾಮಾನ್ಯ ವರ್ಗ | 5.50 |
| 02 | SBM 2.0 And MP 2026-27 | DMA/2026-27/BD/WORK_INDENT60449 | ಸಾಮಾನ್ಯ ವರ್ಗ | 14.50 |

ಸಹಿ/– ಮುಖ್ಯಾಧಿಕಾರಿಗಳು ಪುರಸಭೆ ಹಗರಿಬೊಮ್ಮನಹಳ್ಳಿ
ಸಹಿ/– ಉಪಾಧ್ಯಕ್ಷರು ಪುರಸಭೆ ಹಗರಿಬೊಮ್ಮನಹಳ್ಳಿ
ಸಹಿ/– ಅಧ್ಯಕ್ಷರು ಪುರಸಭೆ ಹಗರಿಬೊಮ್ಮನಹಳ್ಳಿ


# ಹರಗಿನಡೋಣಿಬಸವನಗೌಡ ಪೌಢಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ

- ಮಲ್ಲಮ್ಮ ನುಡಿ ವಾರ್ತೆಕುರುಗೋಡು

ಜು.1: ಸಮೀಪದ ಕುಡುತಿನಿಯಲ್ಲಿ 1991ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಳೇ ವಿದ್ಯಾರ್ಥಿಗಳಿಂದ ಕುಡುತಿನಿಯ ಹರಗಿನಡೋಣಿಬಸವನಗೌಡ ಪೌಢಶಾಲೆಯಲ್ಲಿ ನೂರಾರು ಮಂದಿ ಹಳೇ ವಿದ್ಯಾರ್ಥಿಗಳ ಸಮೂಹದೊಂದಿಗೆ ಸ್ನೇಹ–ಸಮ್ಮಿಲನ ಹಾಗು ಗುರುವಂದನಾ ಕಾರ್ಯಕ್ರಮ ಸಡಗರ–ಸಂಭ್ರಮದಿಂದ ಜರುಗಿತು.



ಹಳೆ ವಿದ್ಯಾರ್ಥಿಗಳಿಂದ ಸನ್ಮಾನಸ್ವೀಕರಿಸಿದ ನಿವೃತ್ತ ಮುಖ್ಯಗುರು ಬಸವಲಿಂಗಪ್ಪ ಅವರು ಮಾತನಾಡಿ, ನನ್ನ ವಿದ್ಯಾರ್ಥಿಗಳು ನನ್ನ ಸೇವೆ ಗುರುತಿಸಿ ಗುರುವಂದನಾ ಕಾರ್ಯಕ್ರಮ ಮಾಡಿರುವುದು ನನಗೆ ತುಂಬಾ ಸಂತೋಷ ತಂದಿದೆ. ಮುಂದಿನದಿನಗಳಲ್ಲಿ ಅವರು ಉನ್ನತ ಸ್ಥಾನದಲ್ಲಿ ಬೆಳೆಯಲೆಂದು ಹಾರೈಸಿದರು. ನಿವೃತ್ತಮುಖ್ಯಗುರು ಕಮಲಾ, ನಿವೃತ್ತಮುಖ್ಯಗುರುಕೌಶಲ್ಯಾಭಾಯಿ, ನಿವೃತ್ತಮುಖ್ಯಗುರು ದೇವೆಂದ್ರಪ್ಪ, ಅವರು ವಿದ್ಯಾರ್ಥೀಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸುಮಾರು 30 ರಿಂದ 35 ವರ್ಷಗಳಾದರು ನಮ್ಮನ್ನು ವಿದ್ಯಾರ್ಥಿಗಳು ನೆನಪಿನಲ್ಲಿಟ್ಟುಕೊಂಡು ವೇದಿಕೆಯಲ್ಲಿ ಸನ್ಮಾನ ಮಾಡಿ ಅಭಿನಂದಿಸಿ, ಸತ್ಕರಿಸಿರುವುದು ನಮಗೆ ತುಂಬಾ ಖುಷಿತಂದಿದೆ. ಇದಕ್ಕೆ ಕಾರಣ ನಮ್ಮ ವಿದ್ಯಾರ್ಥಿಗಳಲ್ಲಿ ಇರುವ ಉತ್ತಮ ಸಂಸ್ಕಾರವೇ ಸಾಕ್ಷಿ ಎಂದು ಎಂದು ಆನಂದದಿಂದ ಭಾವುಕರಾಗಿ ನುಡಿದರು. ನಮ್ಮ ವಿದ್ಯಾರ್ಥಿಗಳು ಉತ್ತಮ ಆರೋಗ್ಯವಂತರಾಗಿ ಸುಖ, ಸಮೃದ್ದಿಯಿಂದ ಬಾಳಲಿ ಎಂದು ವಿದ್ಯಾರ್ಥಿಗಳನ್ನು ಆಶೀರ್ವದಿಸಿದರು.

ಹಳೇ ವಿದ್ಯಾರ್ಥಿಗಳಾದ ವೇಣಿವಿರಾಪುರದ ಎ.ಶ್ರೀನಿವಾಸ್‌ಚೌಧರಿ, ದೇವೇಂದ್ರಪ್ಪ, ವಿ.ಕ್ರಿಷ್ಣಪ್ಪ, ಗೋಪಾಲ, ತ್ರಿವೇಣಿ, ಮೈತ್ರಿ, ಭಾರತಿ,ಜ್ಯೋತಿ, ಸಣ್ಣಹನುಮಂತ, ಸಂಪತ್, ರಾಮ್‌ಗೋಪಾಲ್‌ರೆಡ್ಡಿ, ರಂಗಯ್ಯ,ಕಾರೆಗವಿಸಿದ್ದಪ್ಪ, ಸೋಮಶೇಖರ, ಇತ–ರೆ ವಿದ್ಯಾರ್ಥಿಗಳು ತಮ್ಮ ಹೆಚ್ಚಿನ ಪರಿಶ್ರಮದಿಂದ ಸ್ನೇಹಸಮ್ಮಿಲನ, ಮತ್ತು ಗುರುವಂದನಾ ಕಾರ್ಯಕ್ರಮದ ನೇತೃತ್ವ ವಹಿಸಿ ಯಶಸ್ವಿಗೊಳಿಸಿದರು. ಮತ್ತು ನಮಗೆ ಕಳೆದ 35 ವರ್ಷಗಳ ಹಿಂದೆ ನಮಗೆ ಪಾಠಕಲಿಸಿದ ಗುರುಗಳಿಗೆ ಸನ್ಮಾನಮಾಡಿ, ಅಭಿನಂದಿಸಿ ನಮ್ಮ ಕೈಲಾದಷ್ಟು ಮಟ್ಟಿಗೆ ಸೇವೆಸಲ್ಲಿಸಿರುವುದು ಮರೆಯಲಾದ ಕ್ಷಣಗಳು ಎಂದು ಹಳೆ ವಿದ್ಯಾರ್ಥಿಗಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ಕುಡಿತಿನಿಯಲ್ಲಾರೆಡ್ಡಿಯವರು ನಿರೂಪಿಸಿದರು. ಪ್ರಾರ್ಥನೆಯನ್ನು ಜ್ಯೋತಿತಂಡದವರು ನೆರ್ರವೇರಿಸಿದರು.

ನಂತರ ಎಲ್ಲರೂ ಸೇರಿಕೊಂಡು ತಮ್ಮ ಫೋನ್‌ಮುಖಾಂತರ ಸೆಲ್ಫಿಮೂಲಕ ಹಿಂದಿನ ಸವಿನೆನಪುಗಳನ್ನು ವೇದಿಕೆಯಲ್ಲಿ ಪರಸ್ಪರವಾಗಿ ಒಬ್ಬರನ್ನೋಬ್ಬರು ಹಂಚಿಕೊಂಡು ಕೈ,ಕೈಮಿಲುಕಿ ಶುಭಾಷಯಕೋರಿದರು. ನಂತರ ವಿವಿದ ರೀತಿಯ ಸಿಹಿಯಾದ ಊಟವನ್ನು ಸವಿದು ಎಲ್ಲರೂ ಖುಷಿಪಟ್ಟರು. ಕಾರ್ಯಕ್ರಮದಲ್ಲಿ ಹರಗಿನಡೋಣಿ ರುದ್ರಮುನಿಸ್ವಾಮಿ, ಪಾಲಾಕ್ಷಗೌಡ, ಶಿವಮೂರ್ತಿ, ನಾಗವೇಣಿ, ರಾಣಿ, ಉಮಾಮಹೇಶ, ವನಜಾಕ್ಷಿ, ಕುಡುತಿನಿ ಆರ್. ಸತ್ಯಪ್ಪ, ವಿಠಲಾಪುರತಿಪ್ಪೇಸ್ವಾಮಿ, ವೀರೇಶ, ಸೋಮಶೇಖರ, ಮಂಜುನಾಥಶೆಟ್ಟಿ, ಸೂರ್ಯನಾರಾಯಣ, ಪೀರಾಸಾಬ್, ವಿನೋದ್ ಹಾಗೂ ಇತರರಿದ್ದರು.

# ಅಭಿವೃದ್ಧಿಯ ಮರೀಚಿಕೆ: ವೆಂಕಟೇಶ್ವರ ಕ್ಯಾಂಪ್‌ನಲ್ಲಿ

## ಮೂಲಸೌಕರ್ಯಗಳೇ ಇಲ್ಲ; ಚುನಾವಣೆ ಬಹಿಷ್ಕಾರಕ್ಕೆ ಗ್ರಾಮಸ್ಥರ ನಿರ್ಧಾರ

- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

:ಜು.01.ತಾಲೂಕಿನ ಗಾಂಧಿನಗರ ಗ್ರಾಮ ಪಂಚಾಯತಿ ವ್ಯಾಪ್ತಿಯ ವೆಂಕಟೇಶ್ವರ ಕ್ಯಾಂಪ್‌ನಲ್ಲಿ ಅಭಿವೃದ್ಧಿಯ ಮರೀಚಿಕೆಯಾಗಿದ್ದು, 2,500ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಈ ಗ್ರಾಮವು ಅಕ್ಷರಶಃ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಕುಡಿಯುವ ನೀರಿನ ಸಮಸ್ಯೆ, ರಸ್ತೆ ಸಂಪರ್ಕದ ಕೊರತೆ ಮತ್ತು ಬಸ್ ಸೌಲಭ್ಯವಿಲ್ಲದೆ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ ಎಂದು ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮಹಿಳೆಯರ ಪಾಲಿಗೆ ಶಾಪವಾದ ಶೌಚಾಲಯ:– ಮಹಿಳೆಯರ ಶೌಚಾಲಯ ನಿರ್ಮಾಣಕ್ಕಾಗಿ 23 ಲಕ್ಷ ರೂ. ಮಂಜೂರಾಗಿದ್ದರೂ, ಕಾಮಗಾರಿ ಮಾತ್ರ ಅತ್ಯಂತ ಕಳಪೆಯಾಗಿದೆ. ಕಟ್ಟಡ ನಿರ್ಮಾಣದಲ್ಲೇ ಭಾರಿ ಲೋಪದೋಷಗಳಿದ್ದು, ಬಿರುಕು ಬಿಟ್ಟಿದೆ. ಶಾಸಕ ಹಂಪನಗೌಡ ಬಾದರ್ಲಿ ಅವರು 3 ತಿಂಗಳಲ್ಲಿ ಉದ್ಘಾಟನೆ ಮಾಡುವುದಾಗಿ ಭರವಸೆ ನೀಡಿ 14 ತಿಂಗಳು ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಇತ್ತಾ ಗಮನ ಹರಿಸದೇ ಕಾರಣ ಮಹಿಳೆಯರು ಬೀದಿಯಲ್ಲಿ ಶೌಚಾಲಯ ಹುಡುಕುವ ದುಸ್ಥಿತಿ ನಿರ್ಮಾಣವಾಗಿದೆ.

ಗ್ರಾಮಕ್ಕೆ ಸರಬರಾಜಾಗುವ ಕುಡಿಯುವ ನೀರನ್ನು ಫಿಲ್ಟರ್ (ಶುದ್ಧೀಕರಣ) ಮಾಡದೆ ನೇರವಾಗಿ ಬಿಡಲಾಗುತ್ತಿದ್ದು, ನಲ್ಲಿಗಳಲ್ಲಿ ಬರುವ ನೀರಿನಲ್ಲಿ ಹುಳಗಳು ಕಂಡುಬರುತ್ತಿವೆ. ಮಲಿನ ನೀರು ಸೇವನೆಯಿಂದ ರೋಗಗಳಿಗೆ ತುತ್ತಾಗುವ ಆತಂಕ ಗ್ರಾಮಸ್ಥರನ್ನು ಕಾಡುತ್ತಿದೆ. ರಸ್ತೆಗಳು ಹದಗೆಟ್ಟಿದ್ದು, ರಾತ್ರಿ ವೇಳೆಯಲ್ಲಿ ವಿದ್ಯುತ್ ಕಂಬಗಳಿಗೆ ಬೀದಿ ದೀಪಗಳಿಲ್ಲದ ಕಾರಣ ಕತ್ತಲಲ್ಲಿ ಸಂಚರಿಸುವುದು ಸಾಹಸದ ಕೆಲಸವಾಗಿದೆ.

ಗ್ರಾಮದ ಸುಮಾರು 150 ರಿಂದ 200 ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ತೆರಳಲು ಪರದಾಡುತ್ತಿದ್ದಾರೆ. ಸಮರ್ಪಕ ಬಸ್ ಸೌಕರ್ಯವಿಲ್ಲದ ಕಾರಣ ಸಕಾಲಕ್ಕೆ ಕಾಲೇಜಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ಮುಖ್ಯವಾಗಿ ಪರೀಕ್ಷಾ ಸಮಯದಲ್ಲೂ ಬಸ್ ಸೌಕರ್ಯ ಸರಿ ಇಲ್ಲದ ಕಾರಣ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ನಮ್ಮ ಕ್ಯಾಂಪು ಯಾರಿಗೂ ಬೇಕಾಗಿಲ್ಲ, ಎಲ್ಲರೂ ನಮ್ಮನ್ನು ಕಡೆಗಣಿಸಿದ್ದಾರೆ" ಎಂದು ಶಾಹಿದ್ ಸಾಬ್, ಬಸವರಾಜ್, ಶ್ಯಾಮ್ ಕುಮಾರ್ ನಾಯಕ ಸೇರಿದಂತೆ ಅನೇಕ ಗ್ರಾಮಸ್ಥರು ಆರೋಪಿಸಿದರು.ಅಧಿಕಾರಿಗಳ ಉಡಾಫೆಯ ಉತ್ತರದಿಂದ ಬೇಸತ್ತಿರುವ ಗ್ರಾಮಸ್ಥರು, ಕೂಡಲೇ ಸಂಬಂಧಪಟ್ಟವರು ಸ್ಥಳ ಪರಿಶೀಲನೆ ನಡೆಸಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈಕೂಡಲೇಉನ್ನತಅಧಿಕಾರಿಗಳುಮಧ್ಯಪ್ರವೇಶಿಸಿ,ಮಹಿಳೆಯರಿಗೆ ಶೌಚಾಲಯ, ಕುಡಿಯುವ ನೀರು, ರಸ್ತೆ, ಬೀದಿ ದೀಪ ಮತ್ತು ವಿದ್ಯಾರ್ಥಿಗಳಿಗಾಗಿ ಸೂಕ್ತ ಬಸ್ ಸೌಲಭ್ಯ ಕಲ್ಪಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.ಇನ್ನು ಮುಂದೆಯಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು, ವೆಂಕಟೇಶ್ವರ ಕ್ಯಾಂಪ್‌ನತ್ತ ಗಮನ ಹರಿಸುತ್ತದೆಯೇ? ಅಥವಾ ಭರವಸೆಗಳಲ್ಲೇ ಕಾಲ ಕಳೆಯುತ್ತದೆಯೇ? ಎಂಬುದು ಕಾದು ನೋಡಬೇಕಿದೆ.

# ಕನ್ನಡ ಫಿಲಂ ಚೇಂಬರ್ ನಿಂದ ಕು. ರಾಣಿ ಹಳ್ಳಿಗೆ ಪ್ರಶಸ್ತಿ



- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಬಳಗೇರಿ ಗ್ರಾಮ ಆಡಳಿತ ಅಧಿಕಾರಿ ಕುಮಾರಿ ರಾಣಿ ಹಳ್ಳಿ ಅವರ ಕನ್ನಡ,ಸಾಹಿತ್ಯ ಮತ್ತು ಸಂಸ್ಕೃತಿಯ ಸೇವೆಯನ್ನು ಗುರುತಿಸಿ ಬೆಂಗಳೂರಿನ ಕನ್ನಡ ಫಿಲಂ ಚೇಂಬರ್ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ಜೂನ್ 28 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಮಾರಿ ರಾಣಿ ಹಳ್ಳಿ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಕೊಪ್ಪಳ ಜಿಲ್ಲೆಯ ಕುಕನೂರ್ ತಾಲೂಕಿನ ಕಂದಾಯ ಇಲಾಖೆಯ ಸೇವೆಯಲ್ಲಿದ್ದುಕೊಂಡೇ ರಾಣಿ ಹಳ್ಳಿ ಅವರು ಕನ್ನಡ ಸಾಹಿತ್ಯ, ಸಂಸ್ಕೃತಿಗೆ ತಮ್ಮದೇ ಅದ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾಗಿ, ಚುಟುಕು ಸಾಹಿತ್ಯ ಪರಿಷತ್ ಉಪಾಧ್ಯಕ್ಷರಾಗಿ ವೃತ್ತಿಯ ಜೊತೆಗೆ ಕನ್ನಡ ಸೇವೆಯಲ್ಲಿ ಸಕ್ರಿಯರಾಗಿದ್ದಾರೆ.

ಸರ್ಕಾರಿ,ಸಂಘಸಂಸ್ಥೆಗಳ ಅನೇಕ ಕಾರ್ಯಕ್ರಮಗಳಲ್ಲಿ ಕುಮಾರಿ ರಾಣಿ ಹಳ್ಳಿ ಅವರು ತಮ್ಮ ನಿರೂಪಣಾ ಶೈಲಿಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರ ಕನ್ನಡಪರ ಸೇವೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ.

# ರಾಯಚೂರು ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ರೈತ ಸಂಘದ ಆಗ್ರಹ

- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

:ಜು.01.ಮಳೆಯಿಲ್ಲದೆ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಿದ್ದು,ರೈತರು ತೀವ್ರಸಂಕಷ್ಟದಲ್ಲಿದ್ದಾರೆ. ಆದ್ದರಿಂದ ರಾಯಚೂರು ಜಿಲ್ಲೆಯನ್ನು ತಕ್ಷಣ 'ಬರಪೀಡಿತ ಪ್ರದೇಶ'ವೆಂದು ಘೋಷಿಸಿ, ವಿಶೇಷ ಅನುದಾನ ಬಿಡುಗಡೆ ಮಾಡಬೇಕೆಂದು ಕರ್ನಾಟಕ ರೈತ ಸಂಘ ಸರ್ಕಾರಕ್ಕೆ ಒತ್ತಾಯಿಸಿದೆ.




ಈ ಕುರಿತು ಸಿಂಧನೂರು ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಕೇಂದ್ರ ಸರ್ಕಾರದತ್ತ ನೋಡದೆ, ರಾಜ್ಯ ಸರ್ಕಾರವೇ ಪ್ರತಿ ತಾಲೂಕಿಗೆ 100 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಬೇಕು.ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಬದಲಾವಣೆಗಳಿಂದ ಕೆಲಸ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ 2002ರ ಮಾದರಿಯ 'ಕೂಲಿಗಾಗಿ ಕಾಳು' ಯೋಜನೆಯನ್ನು ಮರುಜಾರಿಗೆ ತರಬೇಕು. ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಜೆ.ಜೆ.ಎಂ ಯೋಜನೆ ಸಂಪೂರ್ಣ ವಿಫಲವಾಗಿದ್ದು, ಇದರ ಬಗ್ಗೆ ತನಿಖೆಯಾಗಬೇಕು. ಹಾಳಾಗಿರುವ ಕೊಳವೆ ಬಾವಿಗಳನ್ನು ಮತ್ತು ಶುದ್ಧ ನೀರಿನ ಘಟಕಗಳನ್ನು ದುರಸ್ತಿಪಡಿಸಬೇಕು.

ಸರ್ಕಾರ ವಿದ್ಯುತ್ ಪೂರೈಕೆಯನ್ನು ಟಾಟಾ ಕಂಪನಿಗೆ ಗುತ್ತಿಗೆ ನೀಡುವ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು. ಇದರಿಂದ ರೈತರಿಗೆ ಹೊರೆಯಾಗಲಿದೆ ಎಂದು ಸಂಘ ವಿರೋಧಿಸಿದೆ.ಬೆಳೆ ನಷ್ಟ ಅನುಭವಿಸಿದ ಸಣ್ಣ ರೈತರಿಗೆ ಪ್ರತಿ ಎಕರೆಗೆ 25,000 ರೂಪಾಯಿ ಪರಿಹಾರ ನೀಡಬೇಕು ಮತ್ತು ಕೃಷಿ ಸಾಲವನ್ನು ಮನ್ನಾ ಮಾಡಬೇಕು ಮನವಿಯಲ್ಲಿ ದೂರಿದ್ದಾರೆ.

ಸರಕಾರ ಈ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಸಂಘದ ಪ್ರಮುಖರಾದ ಬಸವರಾಜ ಪಡಸಲಗಿ, ಬಿ.ಎನ್. ಯರದಿಹಾಳ, ರಮೇಶ ಪಾಟೀಲ್ ಭೇರಗಿ ಬಸಪ್ಪ ಕಡಬೂರ, ವೆಂಕಟೇಶ ಉದ್ಬಾಳ, ಗಂಗರಾಜು ಭೀಮರಾಜ ಕ್ಯಾಂಪ್ , ನಿಂಗಪ್ಪ ಚಿಕ್ಕ ಬೇರಿಗಿ, ಬಾಲಾಜಿ ಉದ್ಬಾಳ ಮತ್ತು ಇತರರು ಎಚ್ಚರಿಸಿದ್ದಾರೆ.

# ಶ್ರೀನಿವಾಸ ಕ್ಯಾಂಪ್‌ಗೆ ಪ್ರತ್ಯೇಕ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಆಗ್ರಹ



- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಜು.01.ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಜವಳಗೆರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಶ್ರೀನಿವಾಸ ಕ್ಯಾಂಪ್ ನಿವಾಸಿಗಳು ತಮಗೆ ಪ್ರತ್ಯೇಕ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡುವಂತೆ ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ.

ಕ್ಯಾಂಪ್‌ನಲ್ಲಿ ಸುಮಾರು 375ಕ್ಕೂ ಹೆಚ್ಚು ಬಡ ಕುಟುಂಬಗಳಿದ್ದು, 975 ಮತದಾರರಿದ್ದಾರೆ. ಆದರೆ, ಪ್ರಸ್ತುತ ಈ ಕ್ಯಾಂಪ್ ಸುಲ್ತಾನಪುರ ಗ್ರಾಮದ ನ್ಯಾಯಬೆಲೆ ಅಂಗಡಿಗೆ ಒಳಪಟ್ಟಿದೆ. ಈ ಅಂಗಡಿಯು ಸುಮಾರು 4 ಕಿ.ಮೀ. ದೂರದಲ್ಲಿದ್ದು, ಬಡವರು,ವೃದ್ಧರು,ವಿಕಲಚೇತನರು ಹಾಗೂ ದೃಷ್ಟಿಮಾಂದ್ಯರು ರೇಷನ್ ಪಡೆಯಲು ಪರದಾಡುವಂತಾಗಿದೆ.

"ಸಾರಿಗೆ ಸೌಕರ್ಯಗಳಿಲ್ಲದ ಕಾರಣ, ಅಕ್ಕಿ ಹಾಗೂ ದವಸ ಧಾನ್ಯಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮಳೆ–ಚಳಿಗಾಲದಲ್ಲಿ 4 ಕಿ.ಮೀ. ನಡೆದು ಹೋಗುವುದು ಅಸಾಧ್ಯವಾಗಿದೆ. ಅಲ್ಲದೆ, ದಾ–ರಿಯುದ್ದಕ್ಕೂ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, ರೇಷನ್ ಪಡೆಯಲು ಹೋಗುವಾಗ ಸುರಕ್ಷತೆಯೂ ಇಲ್ಲದಂತಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

ಈ ಹಿಂದೆ ಕೂಡ ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ. ಕೂಡಲೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಶ್ರೀನಿವಾಸ ಕ್ಯಾಂಪ್‌ಗೆ ಪ್ರತ್ಯೇಕ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಬೇಕೆಂದು ಆಗ್ರಹಿಸಿದ್ದಾರೆ.

# ಶರಣಬಸವ ವಿಶ್ವವಿದ್ಯಾಲಯದಲ್ಲಿ ಪತ್ರಿಕಾ ದಿನಾಚರಣೆ

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಪತ್ರಿಕೋದ್ಯಮ ವೃತ್ತಿಯ ನೈಜ ಮೌಲ್ಯಗಳನ್ನು ಕಾಪಾಡುವುದು ಹಾಗೂ ಈ ವೃತ್ತಿಯಲ್ಲಿ ಉಂಟಾಗುತ್ತಿರುವ ಅವನತಿಯನ್ನು ತಡೆಹಿಡಿಯುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಹಿರಿಯ ಪತ್ರಕರ್ತ ಶಿವರಂಜನ್ ಸತ್ಯಂಪೇಟೆ ಅಭಿಪ್ರಾಯಪಟ್ಟರು.

ನಗರದ ಶರಣಬಸವ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ವತಿಯಿಂದ ಬುಧವಾರ ಅನುಭವ ಮಂಟಪದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪತ್ರಕರ್ತರಲ್ಲಿ ವೃತ್ತಿಪರ ನೈತಿ–ಕತೆ ಹಾಗೂ ಪ್ರಾಮಾಣಿಕತೆಯ ಮೌಲ್ಯಗಳು ಆತಂಕಕಾರಿ ರೀತಿಯಲ್ಲಿ ಕುಸಿಯುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಉದಾತ್ತ ವೃತ್ತಿಯೆಂದು ಪರಿಗಣಿಸಲ್ಪಟ್ಟ ಪತ್ರಿಕೋದ್ಯಮವು ಇಂದು ಭ್ರಷ್ಟಾಚಾರದ ನೆರಳಿನಲ್ಲಿ ತನ್ನ ಗೌರವವನ್ನು ಕಳೆದುಕೊಳ್ಳುತ್ತಿದೆ. ಕೆಲವರ ತಪ್ಪು ನಡೆ–ನುಡಿಗಳಿಂದ ವೃತ್ತಿಯ ಘನತೆಗೆ ಧಕ್ಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪತ್ರಕರ್ತರು ಆತ್ಮಾವಲೋಕನ ಮಾಡಿಕೊಂಡು ವೃತ್ತಿಯ ಗೌರವವನ್ನು ಮರುಸ್ಥಾಪಿಸಲು ಮುಂದಾಗಬೇಕಾಗಿದೆ. "ವೃತ್ತಿಪರತೆ ಮತ್ತು ನೈತಿಕತೆಗೆ ಧಕ್ಕೆ ಉಂಟಾಗಿದ್ದು, ಕೆಲವು ಪತ್ರಕರ್ತರು ಭ್ರಷ್ಟಾಚಾರದ ಆಮಿಷಕ್ಕೆ ಒಳಗಾಗುತ್ತಿದ್ದಾರೆ" ಎಂದು ಶಿವರಂಜನ್ ಕಳವಳ ವ್ಯಕ್ತಪಡಿಸಿದರು.

ಇಂದು ಯೂಟ್ಯೂಬ್ ಚಾನೆಲ್‌ಗಳು, ಇನ್‌ಸ್ಟಾಗ್ರಾಮ್ ರೀಲ್ಸ್, ಟೆಲಿಗ್ರಾಂ ಹಾಗೂ ವಿವಿಧ ಆನ್‌ಲೈನ್ ಸುದ್ದಿ ವೇದಿಕೆಗಳಂತಹ ಡಿಜಿಟಲ್ ಮಾಧ್ಯಮಗಳ ಆಗಮನದಿಂದ ಪತ್ರಿಕೋದ್ಯಮದ ಸ್ವರೂಪವೇ ಬದಲಾಗಿದೆ. ಹಾಗಾಗಿ ಸ್ವಲ್ಪ ಪ್ರತಿಭೆ ಹಾಗೂ ಆಂಡ್ರಾಯ್ಡ್ ಮೊಬೈಲ್ ಹೊಂದಿರುವ ಯಾರಾದರೂ ಪತ್ರಕರ್ತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದಾಗ್ಯೂ, ಸತ್ಯಾಸತ್ಯತೆ ಹಾಗೂ ವಿಶ್ವಾಸಾರ್ಹತೆಯ ದೃಷ್ಟಿಯಿಂದ ಮುದ್ರಣ ಮಾಧ್ಯಮ ಇನ್ನೂ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಡಿಜಿಟಲ್ ವೇದಿಕೆಗಳಲ್ಲಿ ಹಲವು ಬಾರಿ ಮಾಹಿತಿಯನ್ನು ಪರಿಶೀಲಿಸದೇ ಸುದ್ದಿಗಳನ್ನು ಪ್ರಕಟಿಸುವ ಪ್ರವೃತ್ತಿ ಕಂಡುಬರುತ್ತಿದ್ದು, ಅಲ್ಲಿ ಸೂಕ್ತ ನಿಯಂತ್ರಣ ವ್ಯವಸ್ಥೆಯ ಕೊರತೆಯಿದೆ ಎಂದು ಸತ್ಯಂಪೇಟ್ ಹೇಳಿದರು.



ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿಗಳು ಹಾಗೂ ಶರಣಬಸವ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಾಧಿಪತಿಗಳಾದ ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರ ಪತ್ರಿಕೋದ್ಯಮ ಕ್ಷೇತ್ರದ ಕೊಡುಗೆಯನ್ನು ಸ್ಮರಿಸಿದ ಶಿವರಂಜನ್ ಸತ್ಯಂಪೇಟೆ, ವಿದ್ಯಾವರ್ಧಕ ಸಂಘದಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿ, ಸಂಘದ ಚಟುವಟಿಕೆಗಳು ಹಾಗೂ ಸಂಸ್ಥಾನದ ಧಾರ್ಮಿಕ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ "ದಾಸೋಹ ಜ್ಞಾನರತ್ನ" ಎಂಬ ಪಾಕ್ಷಿಕ ಪತ್ರಿಕೆಯನ್ನು ಆರಂಭಿಸಿದ್ದನ್ನು ನೆನಪಿಸಿದರು.

ಇದಲ್ಲದೇ, ಗೋದುತಾಯಿ ಪದವಿ ಮಹಾವಿದ್ಯಾಲಯದಲ್ಲಿ ಪತ್ರಿಕೋದ್ಯಮದ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಿದ ಪೂಜ್ಯ ಡಾ. ಅಪ್ಪಾಜಿ, ನಂತರ ಶರಣಬಸವ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವನ್ನು ಸ್ಥಾಪಿಸುವ ಮೂಲಕ ಈ ಭಾಗದ ವಿದ್ಯಾರ್ಥಿಗಳಿಗೆ ಹೊಸ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಿದರು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳೂ ಪತ್ರಿಕೋದ್ಯಮವನ್ನು ಅಧ್ಯಯನ ಮಾಡಲು ಸಾಧ್ಯವಾಗುವಂತೆ ಕೋರ್ಸ್ ಶುಲ್ಕವನ್ನು ಅತ್ಯಂತ ಕಡಿಮೆ ಮಟ್ಟದಲ್ಲಿರಿಸುವ ದೂರದೃಷ್ಟಿಯನ್ನೂ ಅಪ್ಪಾಜಿಯವರು ಹೊಂದಿದ್ದರು. "ಡಾ. ಅಪ್ಪಾಜಿಯವರು ಹಾಕಿಕೊಟ್ಟ ಈ ಪರಂಪರೆಯನ್ನು ಇಂದಿಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ ಯಶಸ್ವಿಯಾಗಿ ಮುಂದುವರಿಸಿಕೊಂಡು ಬರುತ್ತಿದ್ದಾರೆ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಎಸ್. ಪಾಟೀಲ ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸುಮಂಗಲಾ ರೆಡ್ಡಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಕೈಯಲ್ಲಿ ಬಣ್ಣ, ಹೃದಯದಲ್ಲಿ ಸೇವೆ ಶಾಲೆಗಳಿಗೆ ಹೊಸ ಜೀವ ತುಂಬಿದ ಅನು ಅಕ್ಕ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ



ಜು 01 ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಹರೇಗೊಂಡನಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ 158ನೇ ಶಾಲೆಯ ಬಣ್ಣಲೇಪನ ಅಭಿಯಾನದ ಅಂಗವಾಗಿ ಸಮಾಜಸೇವಕಿ ಅನು ಅಕ್ಕ ಭೇಟಿ ನೀಡಿ ಶಾಲೆಯ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಅನು ಅಕ್ಕ, "ನಾವು ಭೇಟಿ ನೀಡುವ ಪ್ರತಿಯೊಂದು ಶಾಲೆಯ ಸುತ್ತಮುತ್ತಲಿನ ಗ್ರಾಮದ ಬುದ್ಧಿಜೀವಿಗಳು ಹಾಗೂ ದಾನಿಗಳು ಶಾಲೆಗೆ ಬೇಕಾದ ಬಣ್ಣವನ್ನು ನೀಡುತ್ತಿದ್ದಾರೆ.

ಈ ಕಾರ್ಯಕ್ಕೆ ಅಲ್ಲಿನ ಯುವಕರು ಸಹ ಶ್ರಮದಾನ ಮಾಡುವ ಮೂಲಕ ಕೈಜೋಡಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳು ಸುಂದರವಾಗಿದ್ದರೆ ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಇನ್ನಷ್ಟು ಆಸಕ್ತಿ ಮೂಡುತ್ತದೆ" ಎಂದು ಹೇಳಿದರು.

ಇನ್ನೂ ಮಾತನಾಡಿದ ಅವರು, "ಶಾಲೆಗೆ ಬಣ್ಣ ಹಚ್ಚಿಸುವ ಕಾರ್ಯದಲ್ಲಿ ನನಗೆ ಯಾವುದೇ ಮುಜುಗರವಿಲ್ಲ.ಈ ಸೇವೆಗಾಗಿ ನಾನು ಯಾರಿಂದಲೂ ಹಣದ ಬೇಡಿಕೆ ಇಟ್ಟಿಲ್ಲ. ನಾವು ಯಾವಾಗಲೂ ರೈಲ್ವೆಯಲ್ಲಿ ಪ್ರಯಾಣಿಸಿ ಶಾಲೆಗಳಿಗೆ ತೆರಳಿ ಸೇವಾ ಕಾರ್ಯಗಳನ್ನು ನಡೆಸುತ್ತೇವೆ.

ಕನ್ನಡತಿ ಅನು ಅಕ್ಕ ಮುಂದಿನ ದಿನಗಳಲ್ಲಿ ರಾಜಕೀಯಕ್ಕೆ ಬರುವ ಸಾಧ್ಯತೆ ತುಂಬ ಇದೆ. ವಿದ್ಯಾವಂತರು ರಾಜಕೀಯಕ್ಕೆ ಬರುವುದರಿಂದ ರಾಜಕೀಯ ಕ್ರಾಂತಿಯಲ್ಲಿ ಬದಲಾವಣೆ ಬಯಸುತ್ತಿದ್ದೇನೆ ಎಂದು ಹೇಳಿದರು.ಸಮಾಜದ ಸಹಕಾರವೇ ಈ ಅಭಿಯಾನದ ಯಶಸ್ಸಿನ ಶಕ್ತಿ" ಎಂದು ತಿಳಿಸಿದರು. ಅನು ಅಕ್ಕ ಅವರ ನಿಸ್ವಾರ್ಥ ಸೇವಾ ಮನೋಭಾವ, ಸರ್ಕಾರಿ ಶಾಲೆಗಳ ಮೇಲಿನ ಕಾಳಜಿ ಹಾಗೂ ಮಕ್ಕಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸುವ ಸಂಕಲ್ಪಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಅವರ ಈ ಸೇವಾ ಕಾರ್ಯವು ಅನೇಕ ಮಂದಿಗೆ ಪ್ರೇರಣೆಯಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯ ಅಭಿಯಾನವಾಗಿ ರೂಪುಗೊಳ್ಳುತ್ತಿದೆ.ಎಂದರು ಈ ವೇಳೆ ಶಾಲೆ ಮುಖ್ಯ ಗುರುಗಳಾದ ವಿಶ್ವನಾಥ, ಎಸ್ ಡಿಎಂಸಿ ಅಧ್ಯಕ್ಷರಾದ ಸುರೇಶ್ ಹಾಗೂ ಗ್ರಾಮದ ಹಿರಿಯರು ಭಾಗವಹಿಸಿದರು.

# ವೈದ್ಯರ ದಿನಾಚರಣೆ-ಪತ್ರಿಕಾ ದಿನಾಚರಣೆ ಅಂಗವಾಗಿ ತಜ್ಞ ವೈದ್ಯರಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ





ವೈದ್ಯರ ದಿನಾಚರಣೆ ಹಾಗೂ ಪತ್ರಿಕಾ ದಿನಾಚರಣೆಯ ಅಂಗವಾಗಿ ಬಳ್ಳಾರಿಯಲ್ಲಿ ಸಮಾಜ ಸೇವೆ, ಆರೋಗ್ಯ ಸೇವೆ ಮತ್ತು ಜವಾಬ್ದಾರಿಯುತ ಪತ್ರಿಕೋದ್ಯಮದ ಮಹತ್ವವನ್ನು ಸಾರುವ ವಿಶೇಷ ಸನ್ಮಾನ ಸಮಾರಂಭ ನಡೆಯಿತು. ನಗರದ ಖ್ಯಾತ ಅನುಷ್ಕಾ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಶ್ರೀನಿವಾಸುಲು ಹಾಗೂ ಆರ್.ವಿ.ಜಿ. ಆಸ್ಪತ್ರೆಯ ಡಾ. ವಿ. ಸುರೇಶ್ ಅವರನ್ನು ಶಾಲು ಹೊದಿಸಿ, ಹಾರ ಹಾಕಿ, ಸ್ಮರಣಿಕೆ ನೀಡಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಹಾಗೂ ಹಿರಿಯ ಪತ್ರಕರ್ತ ಎಂ. ಜಂಬುನಾಥ ಮಾತನಾಡಿ, ಸಮಾಜದ ಆರೋಗ್ಯ ಕಾಪಾಡುವಲ್ಲಿ ವೈದ್ಯರು ಸಲ್ಲಿಸುತ್ತಿರುವ ಸೇವೆ ಅತ್ಯಂತ ಅಮೂಲ್ಯವಾದದ್ದು. ಅದೇ ರೀತಿ ಸಮಾಜಕ್ಕೆ ನಿಖರ, ನಿಷ್ಪಕ್ಷಪಾತ ಮತ್ತು ಜವಾಬ್ದಾರಿಯುತ ಮಾಹಿತಿಯನ್ನು ತಲುಪಿಸುವ ಮೂಲಕ ಪತ್ರಕರ್ತರು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಮಹತ್ತರ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದಾರೆ. ವೈದ್ಯರು ಮತ್ತು ಪತ್ರಕರ್ತರ ಸೇವೆ ಎರಡೂ ಸಮಾಜದ ಅಭಿವೃದ್ಧಿಗೆ ಅವಿಭಾಜ್ಯವಾಗಿದ್ದು, ಅವರ ನಿಸ್ವಾರ್ಥ ಸೇವೆಯನ್ನು ಗೌರವಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು, ವೈದ್ಯರು ತಮ್ಮ ವೃತ್ತಿಯನ್ನು ಸೇವಾ ಮನೋಭಾವದಿಂದ ನಿರ್ವಹಿಸುತ್ತಾ ಸಾವಿರಾರು ಜನರ ಜೀವ ಉಳಿಸುವ ಪವಿತ್ರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಮತ್ತೊಂದೆಡೆ ಪತ್ರಕರ್ತರು ಸಮಾಜದ ಧ್ವನಿಯಾಗಿ ಜನಸಾಮಾನ್ಯರ ಸಮಸ್ಯೆಗಳನ್ನು ಬೆಳಕಿಗೆ ತಂದು, ಸತ್ಯ ಹಾಗೂ ವಾಸ್ತವಾಂಶಗಳನ್ನು ಜನರಿಗೆ ತಲುಪಿಸುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ವೆಂಕಟೇಶ್ ದೇಸಾಯಿ ಅವರು ಡಾ. ಶ್ರೀನಿವಾಸುಲು ಹಾಗೂ ಡಾ. ವಿ. ಸುರೇಶ್ ಅವರಿಗೆ ಶಾಲು ಹೊದಿಸಿ, ಹಾರ ಹಾಕಿ, ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿದ ವೈದ್ಯರು, ಈ ಗೌರವವು ತಮ್ಮ ಸೇವೆಯನ್ನು ಇನ್ನಷ್ಟು ಜವಾಬ್ದಾರಿಯುತವಾಗಿ ಮತ್ತು ಸಮರ್ಪಣಾ ಮನೋಭಾವದಿಂದ ಮುಂದುವರಿಸಲು ಪ್ರೇರಣೆಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸಿಬ್ಬಂದಿ, ವಿವಿಧ ಕ್ಷೇತ್ರಗಳ ಗಣ್ಯರು, ವೈದ್ಯರು, ಪತ್ರಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವೈದ್ಯರ ಸೇವೆ ಮತ್ತು ಪತ್ರಿಕಾ ಕ್ಷೇತ್ರದ ಮಹತ್ವವನ್ನು ಸ್ಮರಿಸುವ ಮೂಲಕ ಸಮಾಜದಲ್ಲಿ ಸೇವಾ ಮನೋಭಾವ, ಮಾನವೀಯತೆ ಹಾಗೂ ಜವಾಬ್ದಾರಿಯುತ ಕಾರ್ಯನಿರ್ವಹಣೆಯ ಅಗತ್ಯತೆಯನ್ನು ಎಲ್ಲರೂ ಒತ್ತಿಹೇಳಿದರು. ಸಮಾರಂಭವು ಸೌಹಾರ್ದಯುತ ವಾತಾವರಣದಲ್ಲಿ ಯಶಸ್ವಿಯಾಗಿ ನೆರವೇರಿತು.ಈ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸಿಬ್ಬಂದಿ ಮತ್ತು ರೋಗಿಗಳು ಬಾಗವಾಹಿಸಿದ್ದರು.

# ಜೆಸ್ಕಾಂ ಕಚೇರಿ ಎದುರು ಕಡಿದ ಮರಗಳನ್ನು ಹಾಕಿದ ಪಾಲಿಕೆ ಸಿಬ್ಬಂದಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಸುರಕ್ಷತೆ ದೃಷ್ಟಿಯಿಂದ, ನಗರದ ನಾನಾ ಬಡಾವಣೆಗಳಲ್ಲಿ ವಿದ್ಯುತ್ ತಂತಿಗೆ ಅಡ್ಡ ಬರುವ ಮರದ ಕೊಂಬೆಗಳನ್ನು ಜೆಸ್ಕಾಂ ಇಲಾಖೆ ಸಿಬ್ಬಂದಿಗಳು ಬುಧವಾರ ಕಡಿದಿದ್ದು, ನಂತರ ಅದನ್ನು ಸ್ಥಳದಲ್ಲೇ ಬಿಟ್ಟು ಹೋದ ಹಿನ್ನೆಲೆ, ಆಕ್ರೋಶಗೊಂಡ ಮಹಾನಗರ ಪಾಲಿಕೆ ಸಿಬ್ಬಂದಿಗಳು ಅದನ್ನು ಸಂಗ್ರಹಿಸಿ ನಗರದ ಜೆಸ್ಕಾಂ ಕಚೇರಿ ಮುಖ್ಯದ್ವಾರದ ಬಳಿ ಸುರಿದ ಪ್ರಸಂಗ ನಡೆದಿದೆ. ಇದರಿಂದ ಬೆಳ್ಳಂ ಬೆಳಿಗ್ಗೆ ಕಚೇರಿಗೆ ತೆರಳುವ ಅಧಿಕಾರಿಗಳು, ಸಿಬ್ಬಂದಿಗಳು ಕೆಲ ಕಾಲ ಪರದಾಡಿದರು. ಕಚೇರಿಯ ಮುಖ್ಯ ದ್ವಾರದಲ್ಲಿ ಹಾಕಿದ ಹಿನ್ನೆಲೆ ಬಹುತೇಕ ಸಿಬ್ಬಂದಿಗಳು ಸರದಿಯಲ್ಲಿ ನಿಂತು ಪಾಲಿಕೆ ಸಿಬ್ಬಂದಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಆಗಮಿಸಿದ ಕಚೇರಿಯ ಸಹಾಯಕ ಅಧಿಕಾರಿಗಳು ಎಲ್ಲರನ್ನು ಕಚೇರಿಯೊಳಗೆ ಕಳಿಸಿ, ತಮ್ಮ ಕೆಲಸಕ್ಕೆ ಹಾಜರಾಗಲು ಸೂಚಿಸಿದರು. ಪುರುಷರು ಹೇಗೋ ಮಾಡಿ ಕಚೇರಿಗೆ ತೆರಳಿದರೆ, ಮಹಿಳಾ ನೌಕರರು ಕೆಲಕಾಲ ಪರದಾಡಿದ ದೃಶ್ಯ ಕಂಡು ಬಂತು. ಮೇಲಧಿಕಾರಿಗಳ ಸೂಚನೆಯಂತೆ

ನಗರದ ನಾನಾ ಬಡಾವಣೆಗಳಲ್ಲಿ ವಿದ್ಯುತ್ ಕಂಬಗಳಿಗೆ ಅಡ್ಡ ಬರುವ ಮರದ ಕೊಂಬೆಗಳನ್ನು ಕಡಿಯುವ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ನಾನಾ ಬಡಾವಣೆಗಳಲ್ಲಿ ವಿದ್ಯುತ್ ಕಂಬಗಳಿಗೆ ತಾಗುವ, ತಂತಿಗೆ ತಾಗುವ ಮರದ ಕೊಂಬೆಗಳನ್ನು ಕಡಿದು, ಎದುರಾಗುವ ಸಮಸ್ಯೆಗೆ ಶ್ರಮಿಸಲಾಗಿದೆ. ಸ್ವಲ್ಪ, ಗಾಳಿ, ಮಳೆ ಬಂದ್ರೆ ಸಾಕು ವಿದ್ಯುತ್ ಸಂಪರ್ಕ ಕಡಿತವಾಗುವುದು, ವೈರ್ ಕಟ್ ಆಗಿ ಬೀಳುವುದು ಸಾಮಾನ್ಯವಾಗಿತ್ತು. ಈ ಕುರಿತು ಸ್ಥಳೀಯರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಮರದ ಕೊಂಬೆಗಳನ್ನು ಕಡಿಯಲಾಗಿದೆ. ಅದನ್ನು ಅಲ್ಲೇ ಬಿಟ್ಟಿಲ್ಲ, ನಮ್ಮ ವಾಹನದಲ್ಲೇ ಹಾಕಿಕೊಂಡು ಬಂದಿದೆ. ಕೆಲ ಕಡೆ ಬಿಟ್ಟಿರಬಹುದು. ಆದರೆ, ಮಹಾನಗರ ಪಾಲಿಕೆಯ ಸಿಬ್ಬಂದಿಗಳು ಕಚೇರಿ ಮುಖ್ಯದ್ವಾರಕ್ಕೆ ತಂದು ಸುರಿದಿರುವುದು ಸರಿಯಲ್ಲ, ಎಂದು ಸಿಬ್ಬಂದಿಗಳು ಅಸಮಾಧಾನ ವ್ಯಕ್ತಪಡಿಸಿದರು. ಜೆಸ್ಕಾ ಸಿಬ್ಬಂದಿಗಳು ನಗರದ ನಾನಾ ಬಡಾವಣೆಗಳಲ್ಲಿ ಎಲ್ಲಂದರಲ್ಲೇ ಮರದ ಕೊಂಬೆಗಳನ್ನು ಕಡಿದು, ಸ್ಥಳದಲ್ಲೇ ಬಿಟ್ಟು ಬಂದಿದ್ದಾರೆ. ಇದರಿಂದ ಸಾರ್ವಜನಿಕರಿಗೆ, ಪಾದಚಾರಿಗಳಿಗೆ, ವಾಹನ ಸವಾರರಿಗೆ ಸಾಕಷ್ಟು ತೊಂದರೆಯಾಗಿದೆ. ಕಡಿದ ಮರಗಳ ಕೊಂಬೆಗಳನ್ನು ಅಲ್ಲಿಯೇ ಬಿಟ್ಟು ಬರುವ ಬದಲು ಅವುಗಳನ್ನು ಸ್ಥಳಾಂತರಿಸಬೇಕಿತ್ತು. ನಮಗಾದರೂ ತಿಳಿಸಿದ್ದರೆ, ನಾವೇ ಏನಾದ್ರೂ ವ್ಯವಸ್ಥೆ ಮಾಡ್ತೀದ್ವಿ, ಜೆಸ್ಕಾಂ ಸಿಬ್ಬಂದಿಗಳ ಈ ನಿರ್ಲಕ್ಷತೆ ಸರಿಯಲ್ಲ, ಯಾವಾಗಲೂ ಹೀಗೆ ಮಾಡ್ತಾರೆ, ಒಮ್ಮೆ ಗೊತ್ತಾಗಲಿ ಎಂದು ಅವರ ಕಚೇರಿ ಮುಖ್ಯದ್ವಾರದ ಎದುರು ಹಾಕಲಾಗಿದೆ ಎಂದು ಪಾಲಿಕೆ ಸಿಬ್ಬಂದಿಗಳು ತಿಳಿಸಿದರು.

# ಬಳ್ಳಾರಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಚುರುಕು ಲಿಡ್ಕರ್ ನಿಗಮದ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ನಿವಾಸಕ್ಕೆ ಅಧಿಕಾರಿಗಳ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಮಹತ್ವಾಕಾಂಕ್ಷೆಯಿಂದ ಹಮ್ಮಿಕೊಳ್ಳಲಾಗಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (S.I.R.) ಅಭಿಯಾನವು ಜಿಲ್ಲೆಯಾದ್ಯಂತ ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಪ್ರಜಾಪ್ರಭುತ್ವದ ಬುನಾದಿಯಾದ ಮತದಾನ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಬುಧವಾರ ಮುಂಜಾನೆ ಬಳ್ಳಾರಿಯ ಕೋಟೆ ಪ್ರದೇಶದಲ್ಲಿರುವ ಲಿಡ್ಕರ್ ನಿಗಮದ ಅಧ್ಯಕ್ಷರಾದ ಮುಂಡ್ರಿಗಿ ನಾಗರಾಜ್ ಅವರ ಮನೆಗೆ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಹಾಗೂ ಬೂತ್ ಮಟ್ಟದ ಅಧಿಕಾರಿಗಳು (BLO) ಭೇಟಿ ನೀಡಿ ಎನ್ಯುಮರೇಷನ್ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನೆರವೇರಿಸಿದರು.

ಅಧಿಕಾರಿಗಳ ತಂಡವು ಮುಂಡ್ರಿಗಿ ನಾಗರಾಜ್ ಅವರ ನಿವಾಸಕ್ಕೆ ಭೇಟಿ ನೀಡಿ, ಎನ್ಯುಮರೇಷನ್ (Enumeration) ಫಾರ್ಮ್‌ಗಳನ್ನು ವಿತರಿಸಿ, ಅಗತ್ಯ ಮಾಹಿತಿಯನ್ನು ಅಧಿಕೃತವಾಗಿ ಭರ್ತಿ ಮಾಡಿಕೊಂಡಿತು.ಈ ಸಂದರ್ಭದಲ್ಲಿ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಆಧಾರ್ ಜೋಡಣೆ ಕುರಿತು ಸುದೀರ್ಘವಾಗಿ ಚರ್ಚಿಸಿದರು.ಫೋಟೋ ಸ್ಪಷ್ಟತೆ ಹಾಗೂ ನಿಯಮಗಳ ಕುರಿತು ಜಾಗೃತಿ ಮೂಡಿಸಿದರು. ಇದೇ ಸಂದರ್ಭದಲ್ಲಿ ಚುನಾವಣಾ ಅಧಿಕಾರಿಗಳು ಮತದಾರರ ಗುರುತಿನ ಚೀಟಿಗೆ ಬಳಸಲಾಗುವ ಫೋಟೋಗಳ ತಾಂತ್ರಿಕ ನಿಯಮಗಳ ಬಗ್ಗೆ ಪ್ರಮುಖ ಮಾಹಿತಿಯನ್ನು ಹಂಚಿಕೊಂಡರು. ಮತದಾರರ ಪಟ್ಟಿಯಲ್ಲಿ ಭಾವಚಿತ್ರಗಳು ಅಸ್ಪಷ್ಟವಾಗಿ ಬರುವುದನ್ನು ತಡೆಯಲು ಕೆಲವು ಕಡ್ಡಾಯ ಕ್ರಮಗಳನ್ನು ಪಾಲಿಸಬೇಕು ಎಂದು ಅಧಿಕಾರಿಗಳು ತಿಳಿಸಿದರು. ವಿಶೇಷವಾಗಿ, ಮತದಾರರ ಪಟ್ಟಿಗೆ ಸಲ್ಲಿಸುವ ಫೋಟೋಗಳು ಬಿಳಿ ಹಿನ್ನೆಲೆಯನ್ನು (White Background) ಹೊಂದಿರಬೇಕು ಹಾಗೂ ಕಡ್ಡಾಯವಾಗಿ ಬಣ್ಣದ ಫೋಟೋಗಳಾಗಿರಬೇಕು (Color Photos). ಒಂದು ವೇಳೆ ಹಿನ್ನೆಲೆಯೂ ಬಿಳಿಯಾಗಿದ್ದು, ಮತದಾರ ಧರಿಸಿರುವ ಶರ್ಟ್ ಅಥವಾ ಉಡುಪೂ ಬಿಳಿಯಾಗಿದ್ದರೆ ಎಲೆಕ್ಟೋರಲ್ ರೋಲ್‌ನಲ್ಲಿ ಭಾವಚಿತ್ರವು ಸ್ಪಷ್ಟವಾಗಿ ಕಾಣಿಸದೆ ಕೇವಲ ಮುಖ ಮಾತ್ರ ಎದ್ದು ಕಾಣುತ್ತದೆ ಮತ್ತು ತಾಂತ್ರಿಕವಾಗಿ ತಪ್ಪು (Error) ಎಂದು ಪರಿಗಣಿತವಾಗುವ ಸಾಧ್ಯತೆ ಇರುತ್ತದೆ.

ಆದ್ದರಿಂದ ಸೂಕ್ತ ಹಿನ್ನೆಲೆ ಹಾಗೂ ನಿಯಮಾನುಸಾರ ಇರುವ ಫೋಟೋಗಳನ್ನು ಒದಗಿಸುವುದು ಅತ್ಯಗತ್ಯ ಎಂದು ಅಧಿಕಾರಿಗಳು ಸಾರ್ವಜನಿಕರಲ್ಲಿ ವಿನಂತಿಸಿದರು.

ಪ್ರತಿಯೊಬ್ಬ ಅರ್ಹ ಮತದಾರರ ಭಾಗವಹಿಸುವಿಕೆ ನಮ್ಮೆಲ್ಲರ ಜವಾಬ್ದಾರಿ ಎಂದರು.

ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಬಳಿಕ ಮಾತನಾಡಿದ ಲಿಡ್ಕರ್ ನಿಗಮದ ಅಧ್ಯಕ್ಷರಾದ ಮುಂಡ್ರಿಗಿ ನಾಗರಾಜ್ ಅವರು, "ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಸಶಕ್ತ ಹಾಗೂ ಬಲಪಡಿಸುವ ಈ ಮಹತ್ವದ ಕಾರ್ಯದಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಸಕ್ರಿಯವಾಗಿ ಭಾಗವಹಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಸಾರ್ವಜನಿಕರು ಈ ವಿಶೇಷ ಸಮಗ್ರ ಪರಿಷ್ಕರಣೆ (S.I.R.) ಅಭಿಯಾನದ ಸದುಪಯೋಗ ಪಡಿಸಿಕೊಂಡು, ತಮ್ಮ ಹೆಸರುಗಳನ್ನು ಪರಿಶೀಲಿಸಿಕೊಳ್ಳಬೇಕು ಹಾಗೂ ಸರಿಯಾದ ಮಾಹಿತಿಯನ್ನು ಅಧಿಕಾರಿಗಳಿಗೆ ತಲುಪಿಸಲು ಸಹಕರಿಸಬೇಕು" ಎಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲೆಯ ಜಿಲ್ಲಾ ಸಹಾಯಕ ಆಯುಕ್ತರಾದ ರಾಜೇಶ್ ಹೆಚ್ ಡಿ, ತಹಾಶೀಲ್ದಾರರಾದ ರೇಖಾ ಹಾಗೂ ಕಂದಾಯ ಅಧಿಕಾರಿಗಳು, ಚುನಾವಣಾ ಅಧಿಕಾರಿಗಳು, ಬೂತ್ ಮಟ್ಟದ ಅಧಿಕಾರಿಗಳು (BLO) ಮತ್ತು ಪ್ರಮುಖರು ಉಪಸ್ಥಿತರಿದ್ದರು.

# ಬುಡದಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತೊಮ್ಮೆ ಲೋಕಾಯುಕ್ತಕ್ಕೆ ದೂರು, ಪಾರದರ್ಶಕ ಆಡಳಿತಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ (ಬುಡಾ) ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಇನ್ನೂ ನಿರಂತರವಾಗಿ ನಡೆಯುತ್ತಿದ್ದು, ಇದರಿಂದ ರಿಯಲ್ ಎಸ್ಟೇಟ್ ಉದ್ಯಮಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ರಿಯಲ್ ಎಸ್ಟೇಟ್ ಉದ್ಯಮಿ ವೀರೇಶ್ (ಈರೇಶಿ) ಆರೋಪಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ದಶಕಗಳಿಂದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿದ್ದು, ಲೇಔಟ್ ಅನುಮೋದನೆ ಸೇರಿದಂತೆ ವಿವಿಧ ಕಡತಗಳ ವಿಲೇವಾರಿಗಾಗಿ ಅಧಿಕಾರಿಗಳು ಮತ್ತು ಸಿಬ್ಬಂದಿ ಲಂಚಕ್ಕೆ ಬೇಡಿಕೆ ಇಡುವುದು ಸಾಮಾನ್ಯವಾಗಿದೆ ಎಂದು ದೂರಿದರು.

ಒಂದು ಎಕರೆ ಜಮೀನಿಗೆ ಲೇಔಟ್ ಅನುಮೋದನೆ ಪಡೆಯಲು ಸರ್ಕಾರದ ಅಧಿಕೃತ ಶುಲ್ಕ 8ರಿಂದ 9 ಲಕ್ಷ ರೂ. ಇದ್ದರೂ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಲಂಚದ ರೂಪದಲ್ಲಿ 15ರಿಂದ 16 ಲಕ್ಷ ರೂ. ಹೆಚ್ಚುವರಿಯಾಗಿ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. ವಿಶೇಷವಾಗಿ ಬುಡಾ ಕಚೇರಿಯಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಉದ್ಯಮಿಗಳಿಗೆ ಅನಗತ್ಯ ಕಿರುಕುಳ ನೀಡಲಾಗುತ್ತಿದೆ ಎಂದರು.

2024ರ ಏಪ್ರಿಲ್‌ನಲ್ಲಿ 20 ಎಕರೆ 32 ಸೆಂಟ್ಸ್ ಜಮೀನಿನ ಲೇಔಟ್ ಅನುಮೋದನೆಗಾಗಿ 23.50 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರೆಂದು ಆರೋಪಿಸಿ ಬುಡಾದ ಆರು ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿತ್ತು. ಅದರ ಆಧಾರದ ಮೇಲೆ ಲೋಕಾಯುಕ್ತ ಅಧಿಕಾರಿಗಳು ಬಲೆ ಬೀಸಿ ಆರೋಪಿಗಳನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಿದ್ದರು ಎಂದು ಹೇಳಿದರು.

ಆ ಪ್ರಕರಣದ ಬಳಿಕವೂ ಬುಡಾ ಕಚೇರಿಯ ಕಾರ್ಯವೈಖರಿಯಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ ಎಂದು ಆರೋಪಿಸಿದ ಅವರು, ಇತ್ತೀಚೆಗೆ 2 ಎಕರೆ 34 ಸೆಂಟ್ಸ್ ಜಮೀನಿನ ಮೂರು ಲೇಔಟ್ ಕಡತಗಳಿಗೆ ಅನುಮೋದನೆ ನೀಡಲು ಬುಡಾ ಸರ್ವೆಯರ್ ಹಾಗೂ ಕೇಸ್ ವರ್ಕರ್ ಶಾಂತಮೂರ್ತಿ 3.50 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ದೂರಿದರು. ಈ ಸಂಬಂಧ ಮತ್ತೊಮ್ಮೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿದ್ದು, ಜೂನ್ 19ರಂದು ಮಧ್ಯವರ್ತಿ ಮೂಲಕ ಹಣ ಸ್ವೀಕರಿಸುವ ವೇಳೆ ಆರೋಪಿಯನ್ನು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿದ್ದಾರೆ ಎಂದು ತಿಳಿಸಿದರು.

ಲಂಚಕ್ಕೆ ಸಂಬಂಧಿಸಿದ ಸಂಭಾಷಣೆಯ ಧ್ವನಿಮುದ್ರಣವನ್ನು ಸಹ ಸಾಕ್ಷಿಯಾಗಿ ಲೋಕಾಯುಕ್ತಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದ ಅವರು, ರಾಜ್ಯ ಸರ್ಕಾರ 'ಜೀರೋ ಕರಪ್ಷನ್' ಆಡಳಿತದ ಭರವಸೆ ನೀಡಿದ್ದರೂ ತಳಮಟ್ಟದಲ್ಲಿ ಭ್ರಷ್ಟಾಚಾರ ನಿಲ್ಲದಿರುವುದು ಆತಂಕಕಾರಿ ಬೆಳವಣಿಗೆ ಎಂದು ಹೇಳಿದರು.

"ನಾನು ಹಣಕ್ಕಾಗಿ ಅಲ್ಲ, ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಹೋರಾಟ ನಡೆಸುತ್ತಿದ್ದೇನೆ. ಅನೇಕ ಉದ್ಯಮಿಗಳು ಸಮಸ್ಯೆ ಅನುಭವಿಸುತ್ತಿದ್ದರೂ ಭಯದಿಂದ ದೂರು ನೀಡಲು ಮುಂದೆ ಬರುತ್ತಿಲ್ಲ. ನನ್ನ ವಿರುದ್ಧ ಅಧಿಕಾರಿಗಳು ದ್ವೇಷ ಸಾಧಿಸಿದರೂ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ," ಎಂದು ವೀರೇಶ್ ಹೇಳಿದರು.

ಜಿಲ್ಲೆಯ ಶಾಸಕರು ಹಾಗೂ ಸಂಸದರು ಭ್ರಷ್ಟಾಚಾರ ವಿರೋಧಿ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದ ಅವರು, ಜಿಲ್ಲಾಧಿಕಾರಿ, ತಾಲೂಕು ಹಾಗೂ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಭ್ರಷ್ಟಾಚಾರದ ದೂರು ಸ್ವೀಕರಿಸಲು ವಿಶೇಷ ಸಹಾಯವಾಣಿ ಆರಂಭಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

# ವಾಲ್ಮೀಕಿ ಪುತ್ಥಳಿ ಶೀಘ್ರವೇ ಅನಾವರಣಗೊಳಿಸಿ ; ಜಿಲ್ಲೆಯ ವಾಲ್ಮೀಕಿ ಸಮುದಾಯ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ವಾಲ್ಮೀಕಿ ಸರ್ಕಲ್ ನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಆರು ತಿಂಗಳಾದರೂ ಅನಾವರಣಗೊಳಿಸದಿರುವುದನ್ನು ಖಂಡಿಸಿ, ಇಂದು ವಾಲ್ಮೀಕಿ ಸಮಾಜದ ಮುಖಂಡರು ಪುತ್ಥಳಿಯನ್ನು ಅನಾವರಣಗೊಳಿಸಿ , ಲೋಕಾರ್ಪಣೆ ಗೊಳಿಸಬೇಕೆಂದು ಜಿಲ್ಲಾಡಳಿತ ಮತ್ತು ಸರ್ಕಾರವನ್ನು ಒತ್ತಾಯಿಸಿದರು.

ಈ ಕುರಿತು ಅವರಿಂದ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಮತ್ತು ಭೂಮಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ ಮಾತನಾಡಿ, ಪುತ್ಥಳಿಗೆ ಹೊದಿಸಿರುವ ಬಟ್ಟೆಯನ್ನು ಕೂಡಲೇ ತೆರವುಗೊಳಿಸಿ ವಾಲ್ಮೀಕಿ ಸಮಾಜಕ್ಕೆ ಮತ್ತು ಸಾರ್ವಜನಿಕರಿಗೆ ಪೂಜೆ, ಮಾಲಾರ್ಪಣೆ ಹಾಗೂ ದರ್ಶನಕ್ಕೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿ ಅಖಂಡ ಕರ್ನಾಟಕ ವಾಲ್ಮೀಕಿ ನಾಯಕರ ಒಕ್ಕೂಟದ ಜಿಲ್ಲಾ ಘಟಕದ ನೇತೃತ್ವದಲ್ಲಿ ನೂರಾರು ಜನ ವಾಲ್ಮೀಕಿ ಮುಖಂಡರು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಕಾಗೆ ಪಾರ್ಕ್‌ನಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ರಾಯಲ್ ವೃತ್ತ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಗಿತು. ಮೆರವಣಿಗೆಯಲ್ಲಿ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಸಮಾಜದ ಮುಖಂಡರು, ಯುವಕರು ಹಾಗೂ ಮಹಿಳೆಯರು ಸರ್ಕಾರ ಮತ್ತು ಜನಪ್ರತಿನಿಧಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಅಖಂಡ ಕರ್ನಾಟಕ ವಾಲ್ಮೀಕಿ ನಾಯಕರ ಒಕ್ಕೂಟದ ಜಿಲ್ಲಾಧ್ಯಕ್ಷ ಎನ್. ಮುದಿಮಲ್ಲಯ್ಯ, ನಗರ ಶಾಸಕ ನಾರಾ ಭರತ್ ರೆಡ್ಡಿ ಅವರ ಅನುದಾನದಲ್ಲಿ ಎಸ್‌ಪಿ ವೃತ್ತದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಿಸಲಾಗಿದೆ. ಅನಾವರಣಕ್ಕೆ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿದ್ದರೂ ಕ್ಷುಲ್ಲಕ ಕಾರಣಗಳನ್ನು ಮುಂದಿಟ್ಟು ಕಾರ್ಯಕ್ರಮವನ್ನು ಮುಂದೂಡಲಾಗಿದೆ. ತಿಂಗಳುಗಳು ಕಳೆದರೂ ಪುತ್ಥಳಿ ಅನಾವರಣಗೊಳ್ಳದಿರುವುದು ವಾಲ್ಮೀಕಿ ಸಮಾಜದ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದು, ಇದು ಶ್ರೀ ಮಹರ್ಷಿ ವಾಲ್ಮೀಕಿಯವರಿಗೆ ಸಲ್ಲಿಸಿರುವ ಅಗೌರವವಾಗಿದೆ ಎಂದು ಆರೋಪಿಸಿದ ಮುದುಮಲ್ಲಯ್ಯ, ಇನ್ನು ಒಂದು ತಿಂಗಳ ಕಾಲಾವಧಿಯಲ್ಲಿ ವಾಲ್ಮೀಕಿ ಪುತ್ಥಳಿಯನ್ನು ಲೋಕಾರ್ಪಣೆ ಗೊಳಿಸಿದೆ ಇದ್ದಲ್ಲಿ ವಾಲ್ಮೀಕಿ ಸಮಾಜದ ಸರ್ವ ಜನರಿಂದ ಪುತ್ತಳಿಯನ್ನು ನಾವೇ ಸ್ವತಃ ಅನಾವರಣಗೊಳಿಸಿ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸುತ್ತೇವೆ ಎಂದು

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ. ಸುರೇಶ್ ಮಾತನಾಡಿ, ಜನಪ್ರತಿನಿಧಿಗಳ ನಡುವಿನ ಭಿನ್ನಾಭಿಪ್ರಾಯ ಅಥವಾ ರಾಜಕೀಯ ಕಾರಣಗಳಿಂದ ಸಮಾಜದ ಭಾವನೆಗಳನ್ನು ಕಡೆಗಣಿಸಬಾರದು. ಸರ್ಕಾರ ಹಾಗೂ ಜಿಲ್ಲಾಡಳಿತ ಮಧ್ಯಪ್ರವೇಶಿಸಿ ಒಂದು ತಿಂಗಳೊಳಗೆ ಪುತ್ಥಳಿಯ ಅನಾವರಣ ಕಾರ್ಯಕ್ರಮವನ್ನು ನಡೆಸಬೇಕು. ಇಲ್ಲವಾದಲ್ಲಿ ಸಮಸ್ತ ವಾಲ್ಮೀಕಿ ಸಮಾಜದ ಸಾವಿರಾರು ಜನರೊಂದಿಗೆ ತಾವೇ ಪುತ್ಥಳಿಯನ್ನು ಅನಾವರಣಗೊಳಿಸಿ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಎನ್. ಸತ್ಯನಾರಾಯಣ, ಹಿರಿಯ ವಕೀಲರಾದ ಬಿ. ಜಯರಾಮ್, ಜನಾರ್ಧನ ನಾಯಕ, ಬಿ. ರುದ್ರಪ್ಪ, ಎನ್. ದುರ್ಗಪ್ಪ, ಗಾದಿಲಿಂಗಪ್ಪ, ಬೆಣಕಲ್ ಸುರೇಶ್, ಗೋಪಾಲ್, ಸಿಂದಿಗೇರಿ ಗೋವಿಂದಪ್ಪ ಅಲ್ಲಿಪುರ ಲೋಕೇಶ್ ಕುರಿಹಟ್ಟಿ ಭಾಸ್ಕರ್ ಮಲ್ಲಿಕಾರ್ಜುನ ರಾಮಾಂಜಿನಪ್ಪ, ಈರಣ್ಣ ಸೇರಿದಂತೆ ಅಖಂಡ ಕರ್ನಾಟಕ ವಾಲ್ಮೀಕಿ ನಾಯಕರ ಒಕ್ಕೂಟದ ಪದಾಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಸಮಾಜದ ನೂರಾರು ಸದಸ್ಯರು ಭಾಗವಹಿಸಿದ್ದರು.

# ಕಾನೂನಿನ ಜ್ಞಾನ,ಉತ್ತಮ ಜೀವನಕ್ಕೆ ಅಡಿಪಾಯ:ಅಟ್ಟೂರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ಗ್ರಾಮೀಣ ಭಾಗದ ಜನರಿಗೆ ಕಾನೂನಿನ ಸಾಮಾನ್ಯ ಜ್ಞಾನ ಉತ್ತಮ ಜೀವನಕ್ಕೆ ಅಡಿಪಾಯವಾಗುತ್ತದೆ ಎಂದು ಜಿಲ್ಲಾ ಕಾನೂನು ಪ್ರಾಧಿಕಾರದ ಪ್ಯಾನಲ್ ವಕೀಲರಾದ ಹಣಮಂತರಾಯ ಅಟ್ಟೂರ ಹೇಳಿದರು. ಕಲಬುರಗಿ ತಾಲ್ಲೂಕಿನ ಆಲಗುಡ ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ಕಲಬುರಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಲಬುರಗಿ ತಾಲ್ಲೂಕ ಪಂಚಾಯತ, ಆಲಗುಡ ಗ್ರಾಮ ಪಂಚಾಯತ ಸಂಯುಕ್ತ ಆಶ್ರಯದಲ್ಲಿ ಉಚಿತ ಕಾನೂನು ನೆರವು ಕೇಂದ್ರ ಉದ್ಘಾಟಿಸಿ ಮಾತನಾಡುತ್ತ ಕಾನೂನು ಸೇವಾ ಪ್ರಾಧಿಕಾರದ ಮುಖ್ಯ ಉದ್ದೇಶವೇನೆಂದರೆ ಎಲ್ಲರಿಗೂ ಸಮಾನ ನ್ಯಾಯ ದೊರೆಯುವಂತೆ ಮಾಡುವುದು.ಬಡವರು ಮತ್ತು ದುರ್ಬಲ ವರ್ಗದವರಿಗೆ ಉಚಿತಕಾನೂನು ನೆರವು ಒದಗಿಸುವುದು. ಜನರಲ್ಲಿ ಕಾನೂನು ಅರಿವು ಮೂಡಿಸುವುದು.ಲೋಕ ಅದಾಲತ್ ಮೂಲಕ ಪ್ರಕರಣಗಳನ್ನು ತ್ವರಿತವಾಗಿ ಮತ್ತು ಸೌಹಾರ್ದಯುತವಾಗಿ ಇತ್ಯರ್ಥಪಡಿಸುವುದು.ನ್ಯಾಯಾಲಯದ ವೆಚ್ಚವನ್ನು ಕಡಿಮೆ ಮಾಡಲು ಸಹಾಯ ಮಾಡುವುದು.ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ಪರಿಶಿಷ್ಟ ಜಾತಿ/ಪಂಗಡದವರು, ಅಂಗವಿಕಲರು ಹಾಗೂ ಇತರ ಅರ್ಹರಿಗೆ ನ್ಯಾಯ ದೊರೆಯಲು ನೆರವಾಗುವುದು ಆಗಿದೆ.ಸಂವಿಧಾನದ ಅನುಚ್ಛೇದ 39೦ ಯ ಆಶಯವನ್ನು ಕಾರ್ಯರೂಪಕ್ಕೆತರುವುದು, ಅಂದರೆ ಆರ್ಥಿಕ ಅಥವಾ ಇತರ ಅಡಚಣೆಗಳಿಂದ ಯಾರೂ ನ್ಯಾಯದಿಂದ ವಂಚಿತರಾಗಬಾರದು.

## ಪದವಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ



**ಬಾಗಲಕೋಟೆ:** ನಗರದ ವಿದ್ಯಾಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಜಮಖಂಡಿಯ ಬಾಗಲಕೋಟ ವಿಶ್ವವಿದ್ಯಾಲಯ ಕಳೆದ ಮೇ–ಜೂನ್ ನಲ್ಲಿ ನಡೆಸಿದ ಬಿ.ಎ ಹಾಗೂ ಬಿ.ಕಾಂ 6ನೇ ಸೆಮೆಸ್ಟರ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ತಿಳಿಸಿದ್ದಾರೆ.

ಬಿ.ಎ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 77 ವಿದ್ಯಾರ್ಥಿಗಳಲ್ಲಿ 52 ವಿದ್ಯಾರ್ಥಿಗಳು ಉತೀರ್ಣರಾಗಿದ್ದು, ಒಟ್ಟಾರೆ ಫಲಿತಾಂಶ ಶೇ.67.52 ಆಗಿದೆ. 18 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ವರ್ಗದಲ್ಲಿ ಹಾಗೂ 14 ವಿದ್ಯಾರ್ಥಿಗಳು ಪ್ರಥಮ ವರ್ಗದಲ್ಲಿ ತೇರ್ಗಡೆಯಾಗಿದ್ದಾರೆ. ಸಾಗರ ವಾಲಿಕಾರ (ಶೇ.92.77) ಪ್ರಥಮ, ಚೈತ್ರಾ ಚಳ್ಳಮರದ (ಶೇ.89.85) ದ್ವಿತೀಯ ಹಾಗೂ ಶ್ರವಣಕುಮಾರ ರೊಟ್ಟಿ (ಶೇ.86.92) ತೃತೀಯ ಸ್ಥಾನ ಪಡೆದಿದ್ದಾರೆ.

ಬಿ.ಕಾಂ ವಿಭಾಗದಲ್ಲಿ 5 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ವರ್ಗದಲ್ಲಿ ಹಾಗೂ 3 ವಿದ್ಯಾರ್ಥಿಗಳು ಪ್ರಥಮ ವರ್ಗದಲ್ಲಿ ತೇರ್ಗಡೆ–ಯಾಗಿದ್ದಾರೆ. ಅರ್ಚನಾ ವಾಡಕರ (ಶೇ.87) ಪ್ರಥಮ, ಪೀರಸಾಬ್ ತಿಮ್ಮಸಾಗರ (ಶೇ.85.14) ದ್ವಿತೀಯ ಹಾಗೂ ಭೀಮನಗೌಡ ಪಾಟೀಲ (ಶೇ.84) ತೃತೀಯ ಸ್ಥಾನ ಪಡೆದಿದ್ದಾರೆ. ಸಂಸ್ಥೆಯ ಕಾರ್ಯಾಧ್ಯಕ್ಷೆ ಶ್ರೀಲತಾ ಹೆರಂಜಲ್, ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ, ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಈ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ಕಾಳ ಸಂತೆಯಲ್ಲಿ ಪಡಿತರ ಮಾರಾಟ: ಕ್ರಮಕ್ಕೆ ಡಿಸಿ ಸೂಚನೆ



**ಬಾಗಲಕೋಟೆ:** ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಣೆಗಾಗಿ ಬಂದ ಆಹಾರಧಾನ್ಯವನ್ನು ಅನಧಿಕೃತವಾಗಿ ದಾಸ್ತಾನು ಮಾಡುವುದು, ಹೆಚ್ಚುವರಿ ದರದಲ್ಲಿ ಮಾರಾಟ ಮಾಡುವವರ ವಿರುದ್ಧ ತಕ್ಷಣ ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾಳಸಂತೆ ಮಾರಾಟ ತಡೆಗಟ್ಟುವಲ್ಲಿ ಆಹಾರ ಇಲಾಖೆ, ಪೊಲೀಸ್ ಇಲಾಖೆ, ತೂಕ ಮತ್ತು ಅಳತೆ ಇಲಾಖೆ ಹಾಗೂ ಇತರೆ ಇಲಾಖೆಗಳ ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಸಂಶಯಾಸ್ಪದ ಸಂಗ್ರಹಣೆ, ಅಕ್ರಮ ಸಾಗಣೆ ಮತ್ತು ನಕಲಿ ಬಿಲ್‌ಗಳ ಮೂಲಕ ನಡೆಯುವ ವಹಿವಾಟಿನ ಮೇಲೆ ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಕ್ರಮ ದಾಸ್ತಾನು, ಸಾಗಾಣಿಕೆ ಕಾಳಸಂತೆಕೋರರ ವಿರುದ್ಧ ಪ್ರಕರಣ ದಾಖಲಿಸಿ, ಸೂಕ್ರ ಕ್ರಮವಹಿಸಲು ತಿಳಿಸಿದ ಅವರು, ಫಲಾನುಭವಿಗಳು ತಮಗೆ ಹಂಚಿಕೆಯಾದ ಉಚಿತ ಆಹಾರಧಾನ್ಯವನ್ನು ಕಾಳಸಂತೆಯಲ್ಲಿ ಮಾರಾಟ ಮಾಡದಂತೆ ತಿಳುವಳಿಕೆ ನೀಡಬೇಕು. ಕಳೆದ 2025–26ನೇ ಸಾಲಿನಲ್ಲಿ 37 ಪ್ರಕರಣ ದಾಖಲಿಸಲಾಗಿದ್ದು, 64ಜನರನ್ನು ಬಂದಿಸಲಾಗಿದೆ. 24ವಾಹನಗಳನ್ನು ಜಪ್ತ ಸಹ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಎಪ್ರೀಲ್‌ದಿಂದ ಜೂನ್ ಮಾಹೆವರೆಗೆ 16 ಪ್ರಕರಣ ದಾಖಲಿಸಲಾಗಿದ್ದು, 20 ಜನರನ್ನು ಬಂಧಿಸಲಾಗಿದೆ. 15ವಾಹನಗಳನ್ನು ಜಪ್ತ ಮಾಡಲಾಗಿದೆ ಎಂದು ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಸಭೆಗೆ ತಿಳಿಸಿದರು.

ತಾಲೂಕಾ ಮಟ್ಟದಲ್ಲಿ ಆಯಾ ವಿಭಾಗದ ಉಪ ವಿಭಾಗಾಧಿಕಾರಿಗಳು ತಮ್ಮ ಹಂತದಲ್ಲಿ ಸಭೆಯನ್ನು ಜರುಗಿಸಿ ಸೂಕ್ತ ಕ್ರಮವಹಿಸಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಸೇರಿದಂತೆ ತಾಲೂಕಾ ಮಟ್ಟದ ಆಹಾರ ನಿರೀಕ್ಷಕರು ಹಾಗೂ ಇತರೆ ಅಧಿಕಾರಿಗಳು ಇದ್ದರು.

## ಆಯುಷ್ಮಾನ್ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಮೇಟಿ ಭೂಮಿ ಪೂಜೆ



**ಬಾಗಲಕೋಟೆ:** ತಾಲ್ಲೂಕಿನ ಹಳ್ಳೂರ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಪ್ರಧಾನಮಂತ್ರಿ ಎಬಿಹೆಚ್‌ಐಎಂ ಯೋಜನೆಯಡಿ ₹65 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿರುವ ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡ ನಿರ್ಮಾಣ ಕಾಮಗಾರಿಗೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಉಮೇಶ್ ಎಚ್. ಮೇಟಿ ಅವರು ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಮನೆಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಸರ್ಕಾರ ಆರೋಗ್ಯ ಮೂಲಸೌಕರ್ಯಗಳನ್ನು ನಿರಂತರವಾಗಿ ಬಲಪಡಿಸುತ್ತಿದೆ. ಹಳ್ಳೂರ ಗ್ರಾಮದಲ್ಲಿ ನಿರ್ಮಾಣವಾಗಲಿರುವ ಆಯುಷ್ಮಾನ್ ಆರೋಗ್ಯ ಮಂದಿರದಿಂದ ಹಳ್ಳೂರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಗಳು ಸುಲಭವಾಗಿ ಲಭ್ಯವಾಗಲಿದ್ದು, ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಇದು ಮಹತ್ವದ ಕೊಡುಗೆಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಪಟ್ಟಣಶೆಟ್ಟಿ, ಜಿಪಂ ಮಾಜಿ ಅಧ್ಯಕ್ಷ ಬಸವಂತಪ್ಪ ಮೇಟಿ, ಬಸನಗೌಡ ಪರನಗೌಡ, ಎನ್.ಸಿ.ದೊಡ್ಡಗೌಡ್ರ, ಸುನಗದ, ಮಂಜು ಹೊಸಗೌಡರ, ಗಂಗಾಧರ ಅಥಣಿ, ಶ್ರೀಶೈಲ ದೊಡ್ಡಗೌಡರ, ವೈ.ವೈ. ತಿಮ್ಮಾಪುರ, ರಮೇಶ ಕೊಳ್ಳಾರ, ಭೀಮನಗೌಡ ಬೂತಲದಿನ್ನಿ, ಗುತ್ತಿಗೆದಾರ ರಮೇಶ್ ವಡ್ಡರ, ಕಾಂಗ್ರೆಸ್ ಮುಖಂಡರು, ಜನಪ್ರತಿನಿಧಿಗಳು, ಆರೋಗ್ಯ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪತ್ರಿಕೋದ್ಯಮ ಪ್ರಜಾಪ್ರಭುತ್ವದ ನಾಲ್ಕನೇ ಅಂಗ



ಕರ್ನಾಟಕದ ಪತ್ರಿಕೋದ್ಯಮದ ಇತಿಹಾಸ ಅತ್ಯಂತ ಶ್ರೀಮಂತವಾಗಿದೆ. ಮಂಗಳೂರು ಸಮಾಚಾರ ಪತ್ರಿಕೆಯಿಂದ ಆರಂಭಗೊಂಡ ಕನ್ನಡ ಪತ್ರಿಕೋದ್ಯಮವು ಅನೇಕ ಸವಾಲುಗಳನ್ನು ಎದುರಿಸುತ್ತಾ ಸಮಾಜಮುಖಿ ಮೌಲ್ಯಗಳನ್ನು ಬೆಳೆಸಿದೆ. ಹಿರಿಯ ಪತ್ರಕರ್ತರ ನಿಷ್ಠೆ, ಪರಿಶ್ರಮ ಮತ್ತು ಸಮಾಜಮುಖಿ ಬರಹಗಳು ಜನಜಾಗೃತಿ ಮೂಡಿಸಿ ಸಾಮಾಜಿಕ ಬದಲಾವಣೆಗೆ ಕಾರಣವಾಗಿವೆ.

–ಮುರಳೀಧರರಾವ್ ಕುಲಕರ್ಣಿ, ಗ್ರೇಡ್–2 ತಹಸೀಲ್ದಾರ್, ಕುಕನೂರು

ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ವ್ಯಾಪಕವಾಗಿ ಹೆಚ್ಚಿದ್ದು, ಮಾಹಿತಿ ಕ್ಷಣಾರ್ಧದಲ್ಲಿ ಹರಡುತ್ತಿದೆ. ಇಂತಹ ಸಂದರ್ಭದಲ್ಲಿ ಪೊಲೀಸರು ಮತ್ತು ಪತ್ರಕರ್ತರ ಕೆಲಸ ಮತ್ತಷ್ಟು ಸವಾಲಿನಿಂದ ಕೂಡಿದೆ. ಜೀವದ ಹಂಗನ್ನೂ ತೊರೆದು, ಯಾವುದೇ ಒತ್ತಡಗಳಿಗೆ ಮಣಿಯದೆ ಸತ್ಯವನ್ನು ಜನರಿಗೆ ತಲುಪಿಸುವ ನಿಮ್ಮ ನಿಷ್ಪಕ್ಷಪಾತ ಸೇವೆ ನಿಜಕ್ಕೂ ಶ್ಲಾಘನೀಯ.

–ಎಸ್.ಪಿ.ನಾಯಕ್, ಪಿಎಸ್‌ಐ ಕುಕನೂರು ಪೊಲೀಸ್ ಠಾಣೆ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಪಕ್ಷಪಾತವಿಲ್ಲದೆ, ಪ್ರಾಣದ ಹಂಗನ್ನೂ ತೊರೆದು ನೈಜ ಸುದ್ದಿಯನ್ನು ಜನರಿಗೆ ತಲುಪಿಸುವ ಪ್ರಾಮಾಣಿಕ ಪತ್ರಕರ್ತರ ಪಾತ್ರ ಸಮಾಜದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಪತ್ರಿಕೋದ್ಯಮವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಗೆ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿದ್ದು, ಸುಳ್ಳು ಸುದ್ದಿಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕು ಎಂದು ಯಲಬುರ್ಗಾ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಗೌಡ್ರು ಹೇಳಿದರು.

ಅವರು ತಾಲ್ಲೂಕಿನ ಇಟಗಿ ಗ್ರಾಮದ ಪಿಎಂಶ್ರೀ ಆದರ್ಶ ವಿದ್ಯಾಲಯದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ (ರಿ.), ಬೆಂಗಳೂರು, ಕುಕನೂರು ತಾಲೂಕು ಸಮಿತಿ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭೂಕಂಪ, ಯುದ್ಧ, ಚಂಡಮಾರುತ, ಅಪಘಾತ, ಅಪರಾಧ, ರಾಜಕೀಯ ಹಾಗೂ ಸಾಮಾಜಿಕ ಬೆಳವಣಿಗೆಗಳಂತಹ ತಾಜಾ ಸುದ್ದಿಗಳನ್ನು ಜನರಿಗೆ ತ್ವರಿತವಾಗಿ ತಲುಪಿಸುವಲ್ಲಿ ಪತ್ರಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕೋವಿಡ್–19 ಸಂಕಷ್ಟದ ಸಂದರ್ಭದಲ್ಲಿಯೂ ಜೀವದ ಹಂಗನ್ನು ಲೆಕ್ಕಿಸದೆ ಕರ್ತವ್ಯ ನಿರ್ವಹಿಸಿ ಜನರಿಗೆ ನಿಖರ ಮಾಹಿತಿಯನ್ನು ತಲುಪಿಸಿದ ಹೆಗ್ಗಳಿಕೆ ಪತ್ರಕರ್ತರದ್ದಾಗಿದೆ ಎಂದು ಹೇಳಿದರು.

ಪ್ರತಿಯೊಬ್ಬರೂ ಮನೆಗೆ ದಿನಪತ್ರಿಕೆ ತರಿಸಿ ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಮೊಬೈಲ್ ಚಟಕ್ಕೆ ಬಲಿಯಾಗದೆ ಓದಿನತ್ತ ಹೆಚ್ಚಿನ ಗಮನ ಹರಿಸುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು. ಪ್ರಿಂಟ್ ಮೀಡಿಯಾ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾ ಸಮಾಜಕ್ಕೆ ನಿಖರ ಮಾಹಿತಿ ತಲುಪಿಸುವುದು, ಜನಜಾಗೃತಿ ಮೂಡಿಸುವುದು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಒಳ್ಳೆಯ ಸುದ್ದಿಗಳ ಜೊತೆಗೆ ಸುಳ್ಳು ಹಾಗೂ ಪರಿಶೀಲಿಸದ ಸುದ್ದಿಗಳೂ ಸಾಮಾಜಿಕ ಜಾಲತಾಣಗಳ ಮೂಲಕ ವೇಗವಾಗಿ ಹರಡುತ್ತಿವೆ. ಆದ್ದರಿಂದ ಸಾರ್ವಜನಿಕರು ಯಾವುದೇ ಮಾಹಿತಿಯನ್ನು ನಂಬುವ ಮುನ್ನ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕು. ವದಂತಿಗಳಿಗೆ ಕಿವಿಗೊಡದೆ ವಿಶ್ವಾಸಾರ್ಹ ಮಾಧ್ಯಮಗಳ ಸುದ್ದಿಗಳನ್ನೇ ಅನುಸರಿಸಿ ಜವಾಬ್ದಾರಿಯುತ ನಾಗರಿಕರಾಗಬೇಕು ಎಂದು ಅವರು ಸಲಹೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜ ಕೊನಾರಿ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಪತ್ರಿಕೋದ್ಯಮ ಬೆಳೆದು ಬಂದ ಹಾದಿ, ಅದರ ಸಾಮಾಜಿಕ ಹೊಣೆಗಾರಿಕೆ ಹಾಗೂ ಇಂದಿನ ಬೆಳವಣಿಗೆಗಳ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷ ಸುನೀಲಕುಮಾರ ಮಠದ, ತಾಲೂಕು ಗೌರವಾಧ್ಯಕ್ಷ ಮಹೇಶ ಕಲ್ಮಠ, ಪದಾಧಿಕಾರಿಗಳಾದ ಶಿವಪ್ಪಯ್ಯ ಮಠ, ಶರಣಬಸಪ್ಪ ಕೆ. ದಾನಕೈ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಹಿರಿಯ ನಾಗರಿಕರ ಸೇವಾ ಸಂಘದ ಆಶ್ರಯದಲ್ಲಿ ತಿಂಗಳ ವಿಶೇಷ ಉಪನ್ಯಾಸ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಇಳಿ ವಯಸ್ಸಿನಲ್ಲಿ ಹಿರಿಯರಿಗೆ ಕುಟುಂಬದ ಪ್ರೀತಿ, ಗೌರವ ಮತ್ತು ಆತ್ಮೀಯತೆ ಅತ್ಯಂತ ಅಗತ್ಯವಾಗಿದೆ, ಹಿರಿಯರು ತಮ್ಮ ಜೀವನಾನುಭವನ್ನು ಮೊಮ್ಮಕ್ಕಳೊಂದಿಗೆ ಹಂಚಿಕೊಳ್ಳುವ ಮೂಲಕ ಅವರಿಗೆ ಅನೌಪಚಾರಿಕ ಬದುಕಿನ ಪಾಠಗಳನ್ನು ಕಲಿಸುವ ಮೂಲಕ ಕೌಟುಂಬಿಕತೆಯ ಅಸ್ಮಿತೆ ಉಳಿಯಲಿ ಎಂದು ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ. ಶಿವಶಂಕರ ಪ್ರಸಾದ ಹೇಳಿದರು.

ನಗರದ ಜಮಖಾನ ಆವರಣದಲ್ಲಿ ಮಂಗಳವಾರ ಸಂಜೆ ಬಾಗಲಕೋಟೆ ಹಿರಿಯ ನಾಗರಿಕರ ಸೇವಾ ಸಂಘದ ಆಶ್ರಯದಲ್ಲಿ ನಡೆದ ತಿಂಗಳ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ "ಮೊಮ್ಮಕ್ಕಳೊಂದಿಗೆ ಉತ್ತಮ ಬಾಂಧವ್ಯ ಮತ್ತು ಡಿಜಿಟಲ್ ಯುಗದಲ್ಲಿ ಹಿರಿಯರ ಪಾತ್ರ" ವಿಷಯದ ಕುರಿತು ಅವರು ಉಪನ್ಯಾಸ ನೀಡಿದ ಅವರು ಹಿರಿಯರು ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯುವುದು, ಕಥೆಗಳು, ಸಂಸ್ಕಾರ, ಸಂಪ್ರದಾಯಗಳು ಹಾಗೂ ಜೀವನ ಮೌಲ್ಯಗಳನ್ನು ಪರಿಚಯಿಸುವುದು ಇಂದಿನ ಕಾಲದ ಅಗತ್ಯವಾಗಿದೆ. ಮೊಬೈಲ್ ಮತ್ತು ಡಿಜಿಟಲ್ ಯುಗದಲ್ಲಿ ಕುಟುಂಬ ಸದಸ್ಯರ ನಡುವಿನ ಸಂವಹನ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಹಿರಿಯರ ಅನುಭವದ ಮಾರ್ಗದರ್ಶನವು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತದೆ, ಡಿಜಿಟಲ್ ತಂತ್ರಜ್ಞಾನವನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಕುಟುಂಬದಲ್ಲಿ ಪ್ರೀತಿ, ವಿಶ್ವಾಸ ಮತ್ತು ಪರಸ್ಪರ ಗೌರವದ ವಾತಾವರಣ ನಿರ್ಮಾಣವಾದರೆ ತಲೆಮಾರುಗಳ ನಡುವೆ ಉತ್ತಮ ಬಾಂಧವ್ಯ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಹಿರಿಯ ವೈದ್ಯ ಡಾ. ಹೆಚ್.ಎಫ್.ಯೋಗಪ್ಪನವರ ಅವರು ವಿಷಯದ ಕುರಿತು ಅರ್ಥಪೂರ್ಣ ಚರ್ಚೆ ನಡೆಸಿ, ಮೊಮ್ಮಕ್ಕಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವಲ್ಲಿ ಹಿರಿಯರ ಪಾತ್ರ ಮಹತ್ವದ್ದಾಗಿದೆ, ಕುಟುಂಬಗಳಿಗೆ ಬದುಕಿನ ಅನೌಪಚಾರಿಕ ಮೌಲ್ವಿಕ ಶಿಕ್ಷಣ ನಿಡಬೇಕಾಗಿದೆ ಎಂದು ಹೇಳಿದರು.

ಉಪನ್ಯಾಸಕ ಚಂದ್ರಶೇಖರ ಕಾಳನ್ನವರ ಮಾತನಾಡಿ, ಅಜ್ಜ–ಅಜ್ಜಿಯರ ಸಾನ್ನಿಧ್ಯದಲ್ಲಿ ಬೆಳೆಯುವ ಮಕ್ಕಳಲ್ಲಿ ನೈತಿಕ ಮೌಲ್ಯಗಳು, ಸಾಮಾಜಿಕ ಸಾಮರಸ್ಯ ಮತ್ತು ಸಂಸ್ಕಾರಗಳು ಸಹಜವಾಗಿ ಬೆಳೆಯುತ್ತವೆ ಎಂದು ಅಭಿಪ್ರಾಯಪಟ್ಟರು.

ಸಂಘದ ಉಪಾಧ್ಯಕ್ಷ ಆರ್.ಎಲ್.ಕಟಗೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಿಜಿಟಲ್ ಯುಗದ ಕುಟುಂಬಗಳು ಸಾಮಾಜಿಕ ಮೌಲ್ಯಗಳಿಗೆ ಹೊಂದಿಕೊಳ್ಳಬೇಕು. ಇಂದು ಕುಟುಂಬಗಳು ಉಳಿದರೆ ಮಾತ್ರ ನಾಡಿನ ಅಸ್ಮಿತೆ ಉಳಿಯಲು ಸಾದ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಮಡಿವಾಳಪ್ಪ ಹರಗದ, ಡಾ. ಎಸ್.ಸಿ. ದಾನರಡ್ಡಿ, ಅಶೋಕ ಪಾಟೀಲ, ರಂಗನಾಥ ಸೂರ್ಯವಂಶಿ, ಮಹಾದೇವಗೌಡ ಪಾಟೀಲ, ಸಿ.ಟಿ. ಪಾಟೀಲ, ಎಸ್.ಬಿ. ಮಾಳಿ ಸೇರಿದಂತೆ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಪತ್ರಿಕೋದ್ಯಮ ಕೇವಲ ವೃತ್ತಿಯಲ್ಲ, ಜವಾಬ್ದಾರಿ: ಡಾ. ಜಗನ್ನಾಥ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಪತ್ರಿಕೋಧ್ಯಮ ಕೇವಲ ಒಂದು ವೃತ್ತಿಯಲ್ಲ, ಅದು ಸಮಾಜದತ್ತ ಇರುವ ಪವಿತ್ರ ಜವಾಬ್ದಾರಿಯಾಗಿದೆ. ಸತ್ಯವನ್ನು ಹುಡುಕುವ ಧೈರ್ಯ, ಜನರ ಧ್ವನಿಯಾಗುವ ಬದ್ಧತೆ ಹಾಗೂ ಇತಿಹಾಸವನ್ನು ದಾಖಲಿಸುವ ಹೊಣೆಗಾರಿಕೆಯೇ ಪತ್ರಿಕೋದ್ಯಮದ ನಿಜವಾದ ಮೌಲ್ಯಗಳಾಗಿವೆ ಎಂದು ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಗನ್ನಾಥ ಚವ್ಹಾಣ ಹೇಳಿದರು.

ನಗರದ ಬಿ.ವಿ.ವಿ. ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ ಆಶ್ರಯದಲ್ಲಿ ಕನ್ನಡ ಸಂಘ ಹಾಗೂ ಕನ್ನಡ ವಿಭಾಗದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಕನ್ನಡ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸತ್ಯವನ್ನು ದಾಖಲಿಸಲು ಸಂಕಷ್ಟಗಳನ್ನು ಲೆಕ್ಕಿಸದೆ ಮೈದಾನಕ್ಕಿಳಿಯುವ ಪತ್ರಕರ್ತರು ಜನರ ಬದುಕಿನ ಕಥೆಗಳನ್ನು ಜಗತ್ತಿನ ಮುಂದೆ ತರುತ್ತಾರೆ. ಪತ್ರಕರ್ತರ ಪ್ರತಿಯೊಂದು ಬರಹ, ಛಾಯಾಚಿತ್ರ ಹಾಗೂ ವರದಿ ಕಾಲದ ಸಾಕ್ಷಿಯಾಗಿ ಉಳಿಯುತ್ತದೆ. ಸುದ್ದಿಗಳು ಕಾಲಕ್ರಮೇಣ ಹಳೆಯದಾಗಬಹುದು, ಆದರೆ ನಿಷ್ಠೆಯಿಂದ ಮಾಡಿದ ಪತ್ರಿಕೋದ್ಯಮ ಇತಿಹಾಸವಾಗಿ ಶಾಶ್ವತವಾಗಿರುತ್ತದೆ ಎಂದು ಅವರು ಹೇಳಿದರು.

ಇಂದಿನ ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪತ್ರಿಕೆಗಳ ಓದಿನಿಂದ ಸಾಮಾಜಿಕ ಅರಿವು, ಸಾಮಾನ್ಯ ಜ್ಞಾನ ಹಾಗೂ ಸಮಕಾಲೀನ ವಿದ್ಯಮಾನಗಳ ಬಗ್ಗೆ ತಿಳುವಳಿಕೆ ವೃದ್ಧಿಯಾಗುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುವ ಮೂಲಕ ಕನ್ನಡ ಪತ್ರಿಕಾ ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು.

ಐಕ್ಯೂಎಸಿ ಸಂಯೋಜಕ ಜಿ.ಎಂ.ನಾವದಗಿ, ಕನ್ನಡ ಸಂಘದ ಕಾರ್ಯಾಧ್ಯಕ್ಷ ಡಾ. ಎಂ. ನಂಜುಂಡಸ್ವಾಮಿ, ಕಾರ್ಯದರ್ಶಿ ಬಸವರಾಜ ಖೋತ, ಬಿಬಿಎ ವಿಭಾಗದ ಮುಖ್ಯಸ್ಥೆ ನಂದಿನಿ ದೊಡ್ಡಮನಿ, ಉಪನ್ಯಾಸಕಿ ಸಂಗೀತಾ ಗರಗದಮಠ ಸೇರಿದಂತೆ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 24/7 ಕುಡಿಯುವ ನೀರಿನ ಸಮಸ್ಯೆಗೆ ಸ್ಪಂದನೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮ ಕೈಗೊಂಡಿದ್ದು ಹಾಗಾಗಿ ಸಾರ್ವಜನಿಕರು ಯಾವುದೇ ಕಾರಣಕ್ಕೂ ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ಅಭಯ ನೀಡಿದ್ದಾರೆ. ತಾಲೂಕಿನ ಮೋರಂಬಿ ಗ್ರಾಮದ ಬಸವಕಲ್ಯಾಣ ರಸ್ತೆಯ ಹೊಸ ಬಡಾವಣೆಯಲ್ಲಿ ಬುಧವಾರ ಹೊಸದಾಗಿ ಕೊರೆಯುತ್ತಿದ್ದ ಕೊಳವೆ ಬಾವಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು. ಜೂನ್ ತಿಂಗಳಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿದಿಲ್ಲ. ಹಾಗಾಗಿ ಅಲ್ಲಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆಯಿದೆ. ಹಾಗಾಗಿ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿ ಪರಿಗಣಿಸುವಂತೆ ಈಗಾಗಲೇ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. 24/7 ಕುಡಿಯುವ ನೀರಿನ ಬಗ್ಗೆ ದೂರು ಸ್ವೀಕರಿಸಲು ಪಂಚಾಯತಿ ಅಧಿಕಾರಿಗಳು ಸಿದ್ಧರಿದ್ದಾರೆ. ಆದ್ದರಿಂದ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಅನಗತ್ಯವಾಗಿ ಪಂಚಾಯಿತಿಗೆ ಬೀಗ ಹಾಕುವುದು, ರಸ್ತೆ ತಡೆ ಮತ್ತು ಪ್ರತಿಭಟನೆ ಮಾಡುವಂತಹದ್ದು ಯಾವುದೇ ಕಾರಣಕ್ಕೂ ಮಾಡಬಾರದು. ಸಾರ್ವಜನಿಕರ ದೂರಿಗೆ ಒಂದು ವೇಳೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸ್ಪಂದಿಸಿದ್ದರೇ ತಕ್ಷಣ ತಾಲೂಕು ಪಂಚಾಯತಿ ಅಂತವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು.

## ಕುಡಿಯುವ ನೀರಿಗೆ 1 ಕೋಟಿ ರೂ ಅನುದಾನ



ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದ 24 ಗಂಟೆಯೊಳಗೆ ಸ್ಪಂದಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು ಆಗಿರುವ ಈಶ್ವರ ಖಂಡ್ರೆ ಅವರು ತಾಲೂಕು ಆಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿ ಕುಡಿಯುವ ನೀರು ಪೂರೈಕೆಗೆ 1 ಕೋಟಿ ರೂ ಅನುದಾನ ಬಿಡುಗಡೆಗೊಳಿಸಿದ್ದಾರೆ. ಈಗಾಗಲೇ ನೀರಿನ ಸಮಸ್ಯೆ ಕಂಡು ಬಂದ ಕಡೆಗಳಲ್ಲಿ 26 ಕೊಳವೆ ಬಾವಿ ಕೊರೆಸಲಾಗಿದೆ. ಜತೆಗೆ ನೀರಿನ ಮೂಲ ಲಭ್ಯ ಇರದ 4 ಕಡೆಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 17 ಕಡೆಗಳಲ್ಲಿ ಖಾಸಗಿ ಜಲಮೂಲ ಬಳಸಿಕೊಂಡು ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ತಿಳಿಸಿದರು.

ಕಳೆದ ಮೇ ತಿಂಗಳಿನಲ್ಲಿ ಮೋರಂಬಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದ ಕೂಡಲೇ ಸ್ಪಂದಿಸಿ ಹೊಸ ಕೊಳವೆ ಬಾವಿ ಕೊರೆಸಿ ಅದಕ್ಕೆ ಮೋಟಾರ್ ಅಳವಡಿಸಲಾಗಿತ್ತು. ಆದರೆ ಈ ಕೊಳವೆ ಬಾವಿಗೆ ನೀರಿನ ಮೂಲ ಕಡಿಮೆ ಇರುವ ಕಾರಣಕ್ಕೆ ಟ್ಯಾಂಕರ್ ಮೂಲಕ ನೀರು ಸರಬರಾಜು ವ್ಯವಸ್ಥೆ ಮಾಡಲಾಗಿತ್ತು. ಆದರೆ ಬಡಾವಣೆಯ ನಾಗರಿಕರು ಕುಡಿಯುವ ನೀರಿಗೆ ಶಾಶ್ವತ ಪರಿಹಾರ ಒದಗಿಸುವಂತೆ ಆಗ್ರಹಿಸಿ ಕಳೆದ ಎರಡು ದಿನಗಳ ಹಿಂದೆ ರಸ್ತೆ ತಡೆ ಮಾಡಿದ್ದರು. ಹಾಗಾಗಿ ಯಾವುದೇ ಕಾರಣಕ್ಕೂ ಸಾರ್ವಜನಿಕರು ಶಾಂತಿ, ಸುವ್ಯವಸ್ಥೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಗ್ರಾಮದಲ್ಲಿ ಬುಧವಾರ ಮತ್ತೊಂದು ಹೊಸದಾಗಿ ಕೊಳವೆ ಬಾವಿ ಕೊರೆಸಿರುವುದಾಗಿ ತಿಳಿಸಿದರು.

ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ಎಷ್ಟೇ ಕೊಳವೆ ಬಾವಿ ಕೊರೆದರು ಕಡಿಮೆ ನೀರಿನ ಅಭಾವವಿರುವುದರಿಂದ ನೀರು ದೊರೆಯುತ್ತಿಲ್ಲ. ತಾಲೂಕು ಆಡಳಿತ ಮಾಡುವ ತಾತ್ಕಾಲಿಕ ಟ್ಯಾಂಕರ್ ನೀರು, ಖಾಸಗಿ ನೀರು ಹೀಗೆ ಕೆಲವು ಪರ್ಯಾಯ ವ್ಯವಸ್ಥೆಗೆ ಸಾರ್ವಜನಿಕರು ಸಹಕರಿಸಬೇಕು. ಸಚಿವ ಈಶ್ವರ ಖಂಡ್ರೆ ಅವರ ನಿರಂತರ ಪ್ರಯತ್ನದಿಂದ ಮುಂದಿನ ಬೇಸಿಗೆಯೊಳಗೆ 160 ಜನವಸತಿಗಳ ಪೈಕಿ 132 ಜನವಸತಿಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರಿನ ಪೂರೈಕೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದು ಭರವಸೆ ನೀಡಿದರು.

## ಜೆಸ್ಕಾಂ: ಗೃಹ ಜ್ಯೋತಿ ಫಲಾನುಭವಿಗಳ ಪರಿಶೀಲನೆ ಆರಂಭ

**ಕಲಬುರಗಿ:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮರುಪರಿಶೀಲನಾ ಅಭಿಯಾನವು ಬುಧವಾರದಿಂದ (ಜುಲೈ 1) ಆರಂಭವಾಗಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕೋರಿದೆ. ಜೆಸ್ಕಾಂ ಮೀಟರ್ ರೀಡರ್‌ಗಳು ಹಾಗೂ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡಿ, ಫಲಾನುಭವಿಗಳ ಗುರುತು ಮತ್ತು ದಾಖಲೆಗಳನ್ನು ಪರಿಶೀಲಿಸಿ, ಅಗತ್ಯ ಮಾಹಿತಿಯನ್ನು ಮೊಬೈಲ್ ಆಪ್ ಮೂಲಕ ದಾಖಲಿಸಲಿದ್ದಾರೆ. ಜೊತೆಗೆ ಘೋಷಣಾ ಪತ್ರವನ್ನು ಭರ್ತಿ ಮಾಡಿಸಿ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿದ್ದಾರೆ. ಪರಿಶೀಲನೆ ವೇಳೆ ಫಲಾನುಭವಿಗಳು ಆಧಾರ್ ಕಾರ್ಡ್, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ, ಪ್ಯಾನ್ ಕಾರ್ಡ್, ರೇಷನ್ ಕಾರ್ಡ್, ಜಾತಿ ಪ್ರಮಾಣ ಪತ್ರ ಹಾಗೂ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರೆ ಬಾಡಿಗೆ ಒಪ್ಪಂದ ಪತ್ರ (ಅನ್ವಯಿಸುವಲ್ಲಿ) ಸಿದ್ಧವಾಗಿಟ್ಟುಕೊಳ್ಳುವಂತೆ ಜೆಸ್ಕಾಂ ಮನವಿ ಮಾಡಿದೆ. ಗೃಹ ಜ್ಯೋತಿ ಯೋಜನೆಯ ಮರುಪರಿಶೀಲನೆ ಸ್ಥಳದಲ್ಲಿಯೇ ಮೀಟರ್ ರೀಡರ್ ಮೂಲಕ ಮಾತ್ರ ನಡೆಯಲಿದ್ದು, ಗ್ರಾಹಕರು ಹಾಗೂ ಫಲಾನುಭವಿಗಳು ಜೆಸ್ಕಾಂ ಸಿಬ್ಬಂದಿಗೆ ಅಗತ್ಯ ಸಹಕಾರ ನೀಡಿ ಪರಿಶೀಲನಾ ಕಾರ್ಯವನ್ನು ಯಶಸ್ವಿಗೊಳಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ. ಈ ಪ್ರಕ್ರಿಯೆಗೆ ಮೀಟರ್ ರೀಡರ್ ಮೂಲಕ ಸ್ಥಳದಲ್ಲೇ ಪರಿಶೀಲನೆ ಮಾಡುವುದು ಏಕೈಕ ಮಾರ್ಗವಾಗಿದ್ದು, ಗ್ರಾಹಕರು ಮತ್ತು ಫಲಾನುಭವಿಗಳು ಮೀಟರ್ ರೀಡರ್ ಗಳಿಗೆ ಸಂಪೂರ್ಣ ಸಹಕಾರ ನೀಡಿ, ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮನವಿ ಮಾಡಿದೆ.

## SIR ಕುರಿತು ಜನಜಾಗೃತಿ: ಜನತೆಗೆ ಸರಿಯಾದ ಮಾಹಿತಿ ಕೊಡಿ



**ಗಂಗಾವತಿ:** ಭಾರತ ಚುನಾವಣಾ ಆಯೋಗ (Election Commission of India) ವತಿಯಿಂದ ಮತದಾರರ ಪಟ್ಟಿಯನ್ನು (Voter List) ನವೀಕರಿಸುವ Special Intensive Revision (SIR) ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗಂಗಾವತಿಯಲ್ಲಿ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕ ಗಾಲಿ ಜನಾರ್ಧನ್ ರೆಡ್ಡಿ ಮಾತನಾಡಿ, ಪ್ರತಿಯೊಬ್ಬ ಮತದಾರರು BLO ಮನೆಗೆ ಬಂದಾಗ ಸರಿಯಾದ ಮಾಹಿತಿಯನ್ನು ನೀಡಿ, Enumeration Form ಅನ್ನು ಭರ್ತಿ ಮಾಡಿ ಸಲ್ಲಿಸುವ ಮೂಲಕ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸರಿಯಾಗಿ ಉಳಿಯುವಂತೆ ಸಹಕರಿಸಬೇಕು ಎಂದು ಸಾರ್ವಜನಿಕರಿಗೆ ಮನವಿ ಮಾಡಿದರು.

ಬಳಿಕ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಎಸ್‌ಐಆರ್ ಕುರಿತು ಮಾಹಿತಿ ನೀಡಿ, ಮತದಾರರ ಪಟ್ಟಿಯ ಶುದ್ಧೀಕರಣ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು. ನಂತರ ಅಕ್ತರ್ ಅನ್ಸಾರಿ ಅವರು ಮಾಧ್ಯಮದೊಂದಿಗೆ ಮಾತನಾಡಿ, Special Intensive Revision (SIR) ಯ ಮುಖ್ಯ ಉದ್ದೇಶವನ್ನು ವಿವರಿಸಿದರು. ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯಬೇಕು. ಮೃತಪಟ್ಟವರು, ಶಾಶ್ವತವಾಗಿ ಮನೆ ಬದಲಿಸಿದವರು ಹಾಗೂ ಡುಪ್ಲಿಕೇಟ್ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಉದ್ದೇಶದಿಂದ ಈ ಪ್ರಕ್ರಿಯೆ ನಡೆಯುತ್ತಿದೆ. BLO ಮನೆಗೆ ಬಂದಾಗ ಸರಿಯಾದ ಮಾಹಿತಿಯನ್ನು ನೀಡಿ, ಅಗತ್ಯವಿದ್ದರೆ ತಿದ್ದುಪಡಿಗಳನ್ನು ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಗಂಗಾವತಿ ತಹಶೀಲ್ದಾರ್, ನಗರಸಭೆ ಪೌರಾಯುಕ್ತರು, ತಾಲೂಕು ಆಡಳಿತದ ಅಧಿಕಾರಿಗಳು ಹಾಗೂ ಚುನಾವಣಾ ಸಿಬ್ಬಂದಿ ಉಪಸ್ಥಿತರಿದ್ದರು.

## ಕೊಪ್ಪಳ-ತಳಕಲ್-ಜಿಲ್ಲಾಧಿಕಾರಿಗಳ ಕಚೇರಿ ಮಾರ್ಗದಲ್ಲಿ ನಗರ ಸಾರಿಗೆ ಆರಂಭ



**ಕೊಪ್ಪಳ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗದ ವತಿಯಿಂದ ಕೊಪ್ಪಳ-ತಳಕಲ್-ಜಿಲ್ಲಾಧಿಕಾರಿಗಳ ಕಛೇರಿ ಮಾರ್ಗದಲ್ಲಿ ಇಂದಿನಿಂದ (ಜುಲೈ 1ರಿಂದ) ನೂತನ ನಗರ ಸಾರಿಗೆ ಆರಂಭಿಸಲಾಗಿದೆ.

ಈ ನೂತನ ಬಸ್ ಸಂಚಾರಕ್ಕೆ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಬುಧವಾರ ಕೊಪ್ಪಳ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಇದೇ ವೇಳೆ ಶಾಸಕರು ಮಾತನಾಡಿ, ಕೊಪ್ಪಳ-ತಳಕಲ್-ಡಿಸಿ ಆಫೀಸ್ ಮಾರ್ಗದಲ್ಲಿ ನೂತನ ನಗರ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕೆಂಬ ಸಾರ್ವಜನಿಕ ಪ್ರಯಾಣಿಕರ ಮನವಿಗೆ ಸ್ಪಂದಿಸಿ, ನೂತನ ಬಸ್ ಸಂಚಾರವನ್ನು ಆರಂಭಿಸಲಾಗಿದೆ. ಇದರಿಂದ ಸಾರ್ವಜನಿಕರಿಗೆ ಕೊಪ್ಪಳ ನಗರ ಸಂಚಾರ ಮತ್ತು ಜಿಲ್ಲಾಸ್ಪತ್ರೆ, ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಲು ಅನುಕೂಲವಾಗಲಿದೆ. ತಳಕಲ್ ಇಂಜಿನಿಯರಿಂಗ್ ಕಾಲೇಜು, ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಹೋಗುವ ವಿದ್ಯಾರ್ಥಿಗಳಿಗೂ ನೂತನ ಬಸ್ ಸಂಚಾರವು ಸಹಕಾರಿಯಾಗಲಿದೆ. ಅಲ್ಲದೇ ನಮ್ಮ ರಾಜ್ಯ ಸರ್ಕಾರದ ಶಕ್ತಿ ಯೋಜನೆಯಡಿ ಮಹಿಳಾ ಫಲಾನುಭವಿಗಳು ಈ ನಗರ ಸಾರಿಗೆ ಮೂಲಕ ಉಚಿತ ಬಸ್ ಪ್ರಯಾಣದ ಸೌಲಭ್ಯವನ್ನು ಸಹ ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಮಂಜುನಾಥ ಜಿ. ಗೊಂಡಬಾಳ, ಕೊಪ್ಪಳ ತಾಲ್ಲೂಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಬಾಲಚಂದ್ರನ್, ಸದಸ್ಯರಾದ ಪರುಶುರಾಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗೀಯ ನಿಯಂತ್ರಣಾಧಿಕಾರಿ ಜಿ. ಸಿನಯ್ಯ, ಕಾರ್ಮಿಕ ಕಲ್ಯಾಣ ಅಧಿಕಾರಿ ಸತ್ಯನಾರಾಯಣ, ಅಂಕಿ ಸಂಖ್ಯೆ ಅಧಿಕಾರಿ ಎಂ.ಡಿ. ಶಬ್ಬೀರ್, ಲೆಕ್ಕಾ ಪತ್ರ ಅಧಿಕಾರಿ ಚಿತ್ತವಡಿಗಪ್ಪ, ಘಟಕ ವ್ಯವಸ್ಥಾಪಕ ರಮೇಶ ಚಿಣಿಗಿ ಸೇರಿದಂತೆ ಇತರೆ ಜನಪ್ರತಿನಿಧಿಗಳು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗದ ಸಿಬ್ಬಂದಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಕರುನಾಡಿನ ಇತಿಹಾಸದಲ್ಲಿ ಅಚ್ಚಳಿಯದ ಮಠಮಾನ್ಯ ಪಾತ್ರ

• **ಮಲ್ಲಮ್ಮ ನುಡಿ ವಾರ್ತೆ ಹೊನ್ನಾಳಿ**

ಕರುನಾಡಿನ ಇತಿಹಾಸದಲ್ಲಿ ವೀರಶೈವ ಲಿಂಗಾಯತ ಮಠಮಾನ್ಯಗಳು ಮೆರೆದಿರುವ ಸಾಮಾಜಿಕ ಜವಾಬ್ದಾರಿ ಮಹತ್ವವಾದ್ದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಹೊನ್ನಾಳಿಯಲ್ಲಿಂದು, ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ 91ನೇ ವರ್ಷದ ಜಯಂತ್ಯುತ್ಸವ, ಹೈಟೆಕ್ ಆಸ್ಪತ್ರೆ, ಫಾರ್ಮಸಿ ಕಾಲೇಜು, ಸೈನಿಕ ಶಾಲೆ, ಗೋ ಸಂವರ್ಧನ ಕೇಂದ್ರ ಹಾಗೂ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೀರಶೈವ ದರ್ಶನ ಶಾಸ್ತ್ರ ಅಧ್ಯಯನ ವಿಭಾಗದ ಫಲಕ ಅನಾವರಣ ಮಾಡಿ ಅವರು ಮಾತನಾಡುತ್ತಿದ್ದರು.

ರಾಜ್ಯದ ವಿವಿಧ ಮಠಗಳು ಎಲ್ಲ ಜಾತಿ, ಜನಾಂಗ, ಧರ್ಮದವರಿಗೂ ಆಶ್ರಯ, ಅನ್ನ ಮತ್ತು ಅಕ್ಷರ ದಾಸೋಹದ ಮೂಲಕ ಜ್ಞಾನದ ದೀವಿಗೆ ಬೆಳಗಿದ್ದಾರೆ. ಈ ಮೂಲಕ ದೇಶದ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದರು.

ಇಂದು ಇಲ್ಲಿ ಹೈಟೆಕ್ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆ ನೆರವೇರಿದೆ. ಆಸ್ಪತ್ರೆಗೆ ವೈದ್ಯರ ಸೇವೆ ಅತ್ಯಗತ್ಯ. ಕಾಯಿಲೆಯಿಂದ ನರಳುತ್ತಿರುವವರಿಗೆ ಚಿಕಿತ್ಸೆ ನೀಡಿ, ಗುಣಪಡಿಸಿ ಮರಳಿ ಜೀವ ನೀಡುವ ವೈದ್ಯರನ್ನು ಭಗವಂತ ವೈದ್ಯೋ ನಾರಾಯಣೋ ಹರಿಃ ಎಂದು ಹೇಳುತ್ತಾರೆ.



ಆರೋಗ್ಯವೇ ಭಾಗ್ಯ. ಆರೋಗ್ಯ ನಾಶವಾದರೆ ಬದುಕೇ ದುಸ್ತರವಾಗುತ್ತದೆ. ಹೀಗಾಗಿ ಎಲ್ಲರೂ ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಿರಲು ಯೋಗ, ನಡಿಗೆಯೇ ಮೊದಲಾದ ಆರೋಗ್ಯಪೂರ್ಣ ಜೀವನ ಕ್ರಮ ರೂಢಿಸಿಕೊಳ್ಳಬೇಕು ಎಂದರು.

ಪವಾಡಪುರುಷರಾಗಿದ್ದ ಹಿರೇಕಲ್ಮಠದ ಸ್ವಾಮೀಜಿ ಒಡೆಯರ್ ಚಂದ್ರಶೇಖರ ಶಿವಾಚಾರ್ಯರು ತಮ್ಮ ಜೀವಿತಾವಧಿಯಲ್ಲಿ ಈ ಭಾಗದಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಜಾಗೃತಿ ಮೂಡಿಸಿದ್ದಾರೆ. ಅದನ್ನು ಈಗಿನ ಸ್ವಾಮೀಜಿಯವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂದರು.

ತಾವು ಬಸವಾದಿ ಶರಣರ ಕರ್ಮಭೂಮಿ ಬಸವಕಲ್ಯಾಣವಿರುವ ಬೀದರ್ ಜಿಲ್ಲೆಯಿಂದ ಬಂದಿದ್ದೇನೆ. ತಮ್ಮ ತಂದೆ ಲಿಂಗೈಕ್ಯ ಡಾ. ಭೀಮಣ್ಣ ಖಂಡ್ರೆ ಅವರು ತಮ್ಮ ದೀಕ್ಷಾ ಗುರುಗಳಾದ ಲಿಂಗೈಕ್ಯ ಚನ್ನಬಸವ ಪಟ್ಟದ್ದೇವರ ಆಶಯದಂತೆ ಈಗಿರುವ ಆಧುನಿಕ ಅನುಭವ ಮಂಟಪ ನಿರ್ಮಾಣಕ್ಕೆ ಸಹಕರಿಸಿದ್ದರು. ಈಗ ಅದೇ ಬಸವಕಲ್ಯಾಣದಲ್ಲಿ ವಿನೂತನ ಅನುಭವ ಮಂಟಪ ನಿರ್ಮಾಣವಾಗುತ್ತಿದೆ. ಇಲ್ಲಿ ಇಷ್ಟಲಿಂಗ ಪೂಜೆಯನ್ನು ವೈಜ್ಞಾನಿಕವಾಗಿ ನಡೆಸುವ ಮಾಹಿತಿಯನ್ನು ಪ್ರಾತ್ಯಕ್ಷಿಕೆ ಸಹಿತ ನೀಡಲಾಗುತ್ತಿದೆ ಎಂದರು.

ವೀರಶೈವ ಲಿಂಗಾಯತರಲ್ಲಿ ಪ್ರತಿಭಾವಂತರಿದ್ದಾರೆ. ದೇಶ ವಿದೇಶಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಆ ಪ್ರತಿಭೆಯ ಸದ್ಬಳಕೆಯನ್ನು ಸಮುದಾಯ ಮಾಡಿಕೊಳ್ಳಬೇಕಿದೆ. ಇಂದು ಯುವಜನರು ದುಶ್ಚಟಗಳ ದಾಸರಾಗುತ್ತಿದ್ದಾರೆ. ಗುರು ಹಿರಿಯರಿಗೆ ಗೌರವ ನೀಡದಂತಾಗಿದ್ದಾರೆ. ಯುವಶಕ್ತಿ ಅಣುಶಕ್ತಿಗಿಂತ ಮಿಗಲಾಗಿದ್ದು, ಯುವಜನರ ದಾರಿ ತಪ್ಪದಂತೆ ಎಚ್ಚರ ವಹಿಸಬೇಕು ಎಂದರು.

ಇಂದು ಶೇ.30ರಷ್ಟು ಯುವಜನರು ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗಿದ್ದರೆ, ಇನ್ನು ಕೆಲವರು ಕೈಯಲ್ಲಿರುವ ಸ್ಮಾರ್ಟ್ ಫೋನ್ ನ ದಾಸರಾಗಿ, ಮಾನಸಿಕವಾಗಿ ದುರ್ಬಲರಾಗುತ್ತಿದ್ದಾರೆ. ಹೀಗಾಗಿ ಮಕ್ಕಳಿಗೆ ಜಾಗೃತಿ ಮೂಡಿಸುವ ಜವಾಬ್ದಾರಿ ಎಲ್ಲ ಮಠ ಮಾನ್ಯಗಳ ಗುರುಗಳ ಮತ್ತು ಪಾಲಕರ ಮೇಲಿದೆ ಎಂದರು.

ಸಮಾರಂಭದಲ್ಲಿ ಬಾಳೆಹೊನ್ನೂರು ರಂಭಾಪುರಿ ಶ್ರೀಪೀಠದ ಶ್ರೀ 1008 ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಉಜ್ಜಯಿನಿ ಪೀಠದ ಶ್ರೀ 1008 ಜಗದ್ಗುರು ಸಿದ್ದಲಿಂಗರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಶ್ರೀಮತ್ ಕಾಶೀ ಜ್ಞಾನ ಸಿಂಹಸನಾಧೀಶ್ವರ ಶ್ರೀ 1008 ಜಗದ್ದುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಕಾಶಿ ಪೀಠದ ಶ್ರೀ 1008 ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶಾಸಕರುಗಳಾದ ಶಾಂತನಗೌಡ, ಸಮರ್ಥ ಶಾಮನೂರು, ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತಿತರರು ಪಾಲ್ಗೊಂಡಿದ್ದರು.

# ಕೈಯಲ್ಲಿ ಬಣ್ಣ, ಹೃದಯದಲ್ಲಿ ಸೇವೆ-ಶಾಲೆಗಳಿಗೆ ಜೀವ ತುಂಬಿದ ಅನು ಅಕ್ಕ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ತಾಲೂಕಿನ ಹರೇಗೊಂಡನಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ 158ನೇ ಶಾಲೆಯ ಬಣ್ಣ ಲೇಪನ ಅಭಿಯಾನದ ಅಂಗವಾಗಿ ಸಮಾಜಸೇವಕಿ ಅನು ಅಕ್ಕ ಭೇಟಿ ನೀಡಿ ಶಾಲೆಯ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅನು ಅಕ್ಕ, "ನಾವು ಭೇಟಿ ನೀಡುವ ಪ್ರತಿಯೊಂದು ಶಾಲೆಯ ಸುತ್ತಮುತ್ತಲಿನ ಗ್ರಾಮದ ಬುದ್ಧಿಜೀವಿಗಳು ಹಾಗೂ ದಾನಿಗಳು ಶಾಲೆಗೆ ಬೇಕಾದ ಬಣ್ಣವನ್ನು ನೀಡುತ್ತಿದ್ದಾರೆ.

ಈ ಕಾರ್ಯಕ್ಕೆ ಅಲ್ಲಿನ ಯುವಕರು ಸಹ ಶ್ರಮದಾನ ಮಾಡುವ ಮೂಲಕ ಕೈಜೋಡಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳು ಸುಂದರವಾಗಿದ್ದರೆ ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಇನ್ನಷ್ಟು ಆಸಕ್ತಿ ಮೂಡುತ್ತದೆ" ಎಂದು ಹೇಳಿದರು.



ಇನ್ನೂ ಮಾತನಾಡಿದ ಅವರು, "ಶಾಲೆಗೆ ಬಣ್ಣ ಹಚ್ಚಿಸುವ ಕಾರ್ಯದಲ್ಲಿ ನನಗೆ ಯಾವುದೇ ಮುಜುಗರವಿಲ್ಲ. ಈ ಸೇವೆಗಾಗಿ ನಾನು ಯಾರಿಂದಲೂ ಹಣದ ಬೇಡಿಕೆ ಇಟ್ಟಿಲ್ಲ. ನಾವು ಯಾವಾಗಲೂ ರೈಲ್ವೆಯಲ್ಲಿ ಪ್ರಯಾಣಿಸಿ ಶಾಲೆಗಳಿಗೆ ತೆರಳಿ ಸೇವಾ ಕಾರ್ಯಗಳನ್ನು ನಡೆಸುತ್ತೇವೆ.

ಕನ್ನಡತಿ ಅನು ಅಕ್ಕ ಮುಂದಿನ ದಿನಗಳಲ್ಲಿ ರಾಜಕೀಯಕ್ಕೆ ಬರುವ ಸಾಧ್ಯತೆ ತುಂಬ ಇದೆ. ವಿದ್ಯಾವಂತರು ರಾಜಕೀಯಕ್ಕೆ ಬರುವುದರಿಂದ ರಾಜಕೀಯ ಕ್ರಾಂತಿಯಲ್ಲಿ ಬದಲಾವಣೆ ಬಯಸುತ್ತಿದ್ದೇನೆ ಎಂದು ಹೇಳಿದರು. ಸಮಾಜದ ಸಹಕಾರವೇ ಈ ಅಭಿಯಾನದ ಯಶಸ್ಸಿನ ಶಕ್ತಿ" ಎಂದು ತಿಳಿಸಿದರು.

ಅನು ಅಕ್ಕ ಅವರ ನಿಸ್ವಾರ್ಥ ಸೇವಾ ಮನೋಭಾವ, ಸರ್ಕಾರಿ ಶಾಲೆಗಳ ಮೇಲಿನ ಕಾಳಜಿ ಹಾಗೂ ಮಕ್ಕಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸುವ ಸಂಕಲ್ಪಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು.

ಅವರ ಈ ಸೇವಾ ಕಾರ್ಯವು ಅನೇಕ ಮಂದಿಗೆ ಪ್ರೇರಣೆಯಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯ ಅಭಿಯಾನವಾಗಿ ರೂಪುಗೊಳ್ಳುತ್ತಿದೆ. ಎಂದರು ಈ ವೇಳೆ ಶಾಲೆ ಮುಖ್ಯ ಗುರುಗಳಾದ ವಿಶ್ವನಾಥ, ಎಸ್ ಡಿಎಂಸಿ ಅಧ್ಯಕ್ಷರಾದ ಸುರೇಶ್ ಹಾಗೂ ಗ್ರಾಮದ ಹಿರಿಯರು ಭಾಗವಹಿಸಿದರು.

# ಅರ್ಹರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯಬಾರದು

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ರಾಜ್ಯಾದ್ಯಂತ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ (SIR) ಪ್ರಾರಂಭವಾಗಿದ್ದು, ಬುಧವಾರ ತಮ್ಮ ಗೃಹ ಕಚೇರಿಗೆ ಆಗಮಿಸಿದ ಬಿ.ಎಲ್.ಓಗಳಿಗೆ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ತಮ್ಮ ಮತ್ತು ತಮ್ಮ ಕುಟುಂಬ ಸದಸ್ಯರ ಅಗತ್ಯ ದಾಖಲೆ ಮತ್ತು ಮಾಹಿತಿ ನೀಡಿ ನೋಂದಣಿ ಪ್ರಕ್ರಿಯೆಯಲ್ಲಿ ಭಾಗಿಯಾದರು.

ಬಳಿಕ ಮಾತನಾಡಿದ ಅವರು, ಅರ್ಹ ಯಾವೊಬ್ಬ ಮತದಾರರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯಬಾರದು. ಬೇರೆ ಊರುಗಳಲ್ಲಿ ಉದ್ಯೋಗದಲ್ಲಿರು ಜನರು, ಗುಳೆ ಹೋದವರು ಸೇರಿದಂತೆ ಯಾರ ಹೆಸರನ್ನೂ ಕೈ ಬಿಡಬಾರದು. ನಾವೂ ಕೂಡ ಪಕ್ಷದಿಂದ ಜನಜಾಗೃತಿ ಮೂಡಿಸುತ್ತಿದ್ದೇವೆ. ಅರ್ಹ ಮತದಾರರು ತಮ್ಮ ಮನೆಗೆ ಬರುವ ಬೂತ್ ಮಟ್ಟದ ಅಧಿಕಾರಿಗಳಿಗೆ ಅಗತ್ಯ ದಾಖಲೆ ಮತ್ತು ಮಾಹಿತಿ ನೀಡಿ ಸಹಕರಿಸಬೇಕು. ಮತದಾರರ ಪಟ್ಟಿಯಲ್ಲಿ ವಿವರಗಳು ಪಟ್ಟಿಯಲ್ಲಿ ಸರಿಯಾಗಿ ದಾಖಲಾಗಿರುವ ಕುರಿತು ಖಚಿತಪಡಿಸಿಕೊಳ್ಳಬೇಕು. ಈ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು. ಮತ ಪ್ರತಿಯೊಬ್ಬರ ಹಕ್ಕಾಗಿದ್ದು, ಪ್ರತಿಯೊಂದು ಮತ ರಾಜ್ಯ ಮತ್ತು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಪ್ರತಿಯೊಬ್ಬರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ದಾಖಲಾಗಿರುವ ಕುರಿತು ಖಚಿತ ಪಡಿಸಿಕೊಳ್ಳಬೇಕು ಎಂದು ಹೇಳಿದರು. ಅನರ್ಹರು, ಎರಡು ಕಡೆ ಹೆಸರು ಹೊಂದಿರುವವರ ವ್ಯಕ್ತಿಗಳ ಒಂದು ಕಡೆಯ ಹೆಸರನ್ನು ಬೇಕಿದ್ದರೆ ತೆಗೆಯಲಿ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.



ಈ ಸಂದರ್ಭದಲ್ಲಿ ಮಹಾನಗರಪಾಲಿಕೆ ಆಯುಕ್ತ ಮತ್ತು ವಿಜಯಪುರ ನಗರ ವಿಧಾನಸಭೆ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿ ವಿಜಯಕುಮಾರ ಮೆಕ್ಕಳಕಿ, ವಿಜಯಪುರ ನಗರ ಮತಕ್ಷೇತ್ರದ ಮತಗಟ್ಟೆ ಸಂಖ್ಯೆ 46ರ ಬಿ.ಎಲ್.ಓ ಎ. ಎಚ್. ಬಿಜ್ಜೂರ, ಮೇಲ್ವಿಚಾರಕ ಸುರೇಶ ಬಿರಾದಾರ ಹಾಗೂ ಸಿಬ್ಬಂದಿ ಉಸ್ಥಿತರಿದ್ದರು.

# ಹೈಟೆಕ್ ಸೊಸೆ ಸ್ಮಾರ್ಟ್ ಅತ್ತೆ..!



**ಕಥೆ-ವ್ಯಥೆ**
• ಕಸ್ತೂರಿ ಡಿ ಪತ್ತಾರ
ಬೆಂಗಳೂರು

ವಟಾರಕ್ಕೆ ಮಂಜಮ್ಮನೇ ಬಾಸ್ಸು. ಅರವತ್ತು ದಾಟಿದರೂ ಅಷ್ಟೇ ಎನರ್ಜಿ. ಕೈಕಾಲು ಆಡಿಸದೆ ಸುಮ್ಮನೆ ಕೂರುವ ಜಾಯಮಾನ ಅವಳದ್ದಲ್ಲ. ದಿನಕ್ಕೆ ನಾಲ್ಕಾರು ಮನೆ ಕೆಲಸ ಮುಗಿಸಿ ಹತ್ತು ಸಾವಿರ ದುಡಿಯುವ ಆಕೆಗೆ ಲೋಕಜ್ಞಾನ ಅಜಗಜಾಂತರ. ಓದುಬರಹ ಬರದಿದ್ದರೂ ಮಂಜಮ್ಮನ ಬಾಯಲ್ಲಿ ಇಂಗ್ಲಿಷ್ ಪದಗಳು ಸಲೀಸಾಗಿ ಉದುರುತ್ತಿದ್ದವು. ಇತ್ತ ಸೊಸೆ ಸವಿತಾ ಮಾತ್ರ ಪಕ್ಕಾ ಮಾಡೆರ್ನ್. ಯಾವುದೋ ಟ್ರಾವೆಲ್ ಆಫೀಸಿನಲ್ಲಿ ರಿಸೆಪ್ಷನಿಸ್ಟು ಕೆಲಸ. ದಿನಾ ಗಂಟೆಗಟ್ಟಲೆ ಮೇಕಪ್ಪೇ ಅವಳ ಕಾಯಕ. ಮಂಜಮ್ಮನಿಗೆ ಮಾತ್ರ ಇವಳ ಬಿಲ್ಡಪ್ಪನ್ನು ಕಂಡು ಒಳಗೊಳಗೆ ನಗು.

ಒಂದು ದಿನ ಮಂಜಮ್ಮ ತನ್ನ ಲೈಫಿನ ಬಹುದಿನದ ಕನಸಾದ ಉತ್ತರ ಭಾರತದ ಪ್ರವಾಸಕ್ಕೆ ಮನಸ್ಸು ಮಾಡಿದಳು. ಮಗ ಸುಧಾಕರನಿಗೆ ಹೇಳಿ ಪ್ಯಾಕೇಜೂ ಟೂರು ಬುಕ್ ಮಾಡಿಸಿದಳು. ಇದನ್ನು ಕೇಳಿದ ಸೊಸೆ ಸವಿತಾ ತಕ್ಷಣ ಒಂದು ಪ್ಲಾನು ಮಾಡಿದಳು. "ಅತ್ತೆ, ನಮ್ಮಮ್ಮನೂ ಬರ್ತಾಳೆ, ಅವಳು ನಿಮಗೂ ಸ್ವಲ್ಪ ಕಂಪನಿ ಕೊಟ್ಟ ಹಾಗಾಗುತ್ತೆ" ಎಂದು ತನ್ನ ತಾಯಿಯನ್ನು (ಬೀಗತಿ) ಜೊತೆ ಕಳಿಸಿದಳು. ಅಷ್ಟೇ ಅಲ್ಲ, ಮಂಜಮ್ಮನಿಗೆ ಸೀರೆ ಉಟ್ಟರೆ ಕಂಫರ್ಟು ಇರಲ್ಲ ಎಂದು ಬಲವಂತವಾಗಿ ಚೂಡಿದಾರು ಮತ್ತು ನೈಟಿಯನ್ನು ಬ್ಯಾಗಿನಲ್ಲಿ ತುರುಕಿದಳು.

ಅಂತು ಇಂತು ಮಂಜಮ್ಮ ಪ್ರವಾಸಕ್ಕೆ ಹೊರಟಳು. ಪ್ರವಾಸ ಶುರುವಾದ ಮೇಲೆ ಮಂಜಮ್ಮನಿಗೆ ಅಸಲಿ ಟೆಂಕ್ಷನ್ನು ಶುರುವಾಯಿತು. ಹದಿನೈದು ದಿನದ ಉತ್ತರ ಭಾರತದ ಬೆಟ್ಟಗುಡ್ಡಗಳ ಪಯಣ ಅಷ್ಟು ಈಜಿಯಾಗಿರಲಿಲ್ಲ. ಮಂಜಮ್ಮ ಚೂಡಿದಾರ ಹಾಕಿಕೊಂಡು "ಇದ್ಯಾಕೋ ಸೀರೆ ತರ ಫ್ರೀ ಅನಿಸುತ್ತಿಲ್ಲವಲ್ಲ ನನಗ್ ಸವಿತಾ ಇದು ಬೇರೆ ಮೂಲಾ ಮಾಡಿದಳಲ್ಲ ಇದು ಯಾವ ಚೂಡಿದಾರ ಫುಲ್ ಟೈಟು ಆಗಿದೆ" ಎಂದು ಗೊಣಗುತ್ತಲೇ ಎಲ್ಲವನ್ನೂ ಮ್ಯಾನೇಜ್ ಮಾಡಿದಳು.


ಆದರೆ ಜೊತೆಗೆ ಬಂದ ಬೀಗತಿ ಮಾತ್ರ ಫುಲ್ ಶೋಕಿ. ಅಲ್ಲಿನ ಕೊರೆಯುವ ಚಳಿಯಲ್ಲೂ "ನನಗೆ ಕೂಲು ಬೇಕು" ಎಂದು ಐಸ್ ಕ್ರೀಮು, ಜ್ಯೂಸು ಅಂತ ಚಪ್ಪರಿಸಿದಳು. ಪರಿಣಾಮ? ಬೀಗತಿಗೆ ಉಬ್ಬಸ ಶುರುವಾಗಿ ಹಾಸಿಗೆ ಹಿಡಿದಳು. ಇಡೀ ಪ್ರವಾಸ ಮಂಜಮ್ಮ ಆಸ್ಪತ್ರೆಗೆ ಅಲೆಯುವ ಡ್ಯೂಟಿ ಮಾಡುವಂತಾಯಿತು. ನಡುವೆ ತಂಡದಲ್ಲಿದ್ದ ರಂಗಣ್ಣನಿಗೆ ಹಾರ್ಟ್ ಅಟ್ಯಾಕ್ ಆಗಿ ತೀರಿಕೊಂಡಾಗಲಂತೂ ಎಲ್ಲರಿಗೂ ದಿಗಿಲು ಬಿದ್ದು, ಪ್ರವಾಸವೇ ಕ್ಯಾನ್ಸಲ್ ಆಗುವಂತಾಯಿತು. ಮಂಜಮ್ಮ ಮಾತ್ರ ಧೃತಿಗೆಡದೆ, ಬೀಗತಿಯ ಲಗೇಜನ್ನು ತಾನೇ ಹೊತ್ತು ಎಲ್ಲವನ್ನೂ ಹ್ಯಾಂಡಲ್ ಮಾಡಿ ಮನೆಗೆ ಮರಳಿದಳು.

ಮಂಜಮ್ಮ ಟೂರ್ ಮುಗಿಸಿಕೊಂಡು ಮನೆಗೆ ಬಂದ ಕೂಡಲೇ ಸೊಸೆ ಸವಿತಾ ಬಹಳ ಸ್ಟೈಲಾಗಿ ಸ್ವಾಗತಿಸುತ್ತಾ ಕೇಳಿದಳು, "ಏನತ್ತೆ, ನಿಮ್ಮ ನಾರ್ತ್ ಇಂಡಿಯಾ ಟ್ರಿಪ್ಪು ಹೇಗಿತ್ತು? ನೀವು ಚೂಡಿದಾರದಲ್ಲಿ ಫುಲ್ ಯಂಗ್ ಆಗಿ ಕಾಣ್ತಿದ್ದೀರಲ್ಲ?" ಎಂದಳು.

ಮಂಜಮ್ಮ ತನ್ನ ಬ್ಯಾಗನ್ನು ಕೆಳಗಿಟ್ಟು, ಒಂದು ಗ್ಲಾಸ್ ನೀರು ಕುಡಿದು ಚುರುಕಾಗಿ ಹೇಳಿದಳು: "ನೋಡು ಸವಿತಾ, ಟ್ರಿಪ್ಪು ಅಂತೂ ಸೂಪರ್ ಆಗಿತ್ತು. ಆದರೆ ನಾನು ಕಾಶಿ ದೇವಸ್ಥಾನ ನೋಡೋದಕ್ಕಿಂತ ಹೆಚ್ಚಾಗಿ ನಿಮ್ಮಮ್ಮನಿಗೆ ಫಸ್ಟ್ ಏಡ್ ಮಾಡೋದ್ರಲ್ಲೇ ಅರ್ಧ ಟೈಮ್ ಕಳೆದೆ! ನೀನು ನನಗೆ ಪಂಜಾಬಿ ಡ್ರೆಸ್ಸು ಹಾಕಿಸಿ ಬೆಟ್ಟ ಹತ್ತೋಕೆ ಕಳಿಸಿದೆ, ಆದರೆ ನಿಮ್ಮಮ್ಮ ಅತಿಯಾಗಿ ಐಸ್ ಕ್ರೀಮು ತಿಂದು ಬೆಡ್ ರೆಸ್ಟ್ ಮಾಡೋದ್ರಲ್ಲಿ ಬ್ಯುಸಿಯಾಗಿದ್ಲು."

ಅತ್ತೆಯ ಮಾತು ಕೇಳಿ ಸವಿತಾಳ ಮುಖ ಫುಲ್ ಬ್ಲಾಂಕ್ ಆಯಿತು. ಮಂಜಮ್ಮ ತನ್ನ ಮಾತು ಮುಂದುವರಿಸಿದಳು: "ನೋಡಮ್ಮಾ, ಬರೀ ಹದಿನೈದು ಸಾವಿರ ಸಂಬಳ ತಗೊಂಡು ಮೇಕಪ್ಪು ಮಾಡ್ಕೊಂಡು ಆಫೀಸಿನಲ್ಲಿ ಕೂತರೆ ಸಾಲದು. ಲೈಫ್ ಅಂದ್ರೆ ಬರೀ ಈ ಲಕ್ಸುರಿ ಅಲ್ಲ. ಕಷ್ಟ ಬಂದಾಗ ನಾವು ಹಳೇ ಕಾಲದವರು ಎಷ್ಟು ಸ್ಟ್ರಾಂಗು ಅನ್ನೋದು ಈಗಲಾದರೂ ಗೊತ್ತಾಯ್ತಾ? ನಿನಗೆ ಫೋಟೋ ತೆಗೆಸಿಕೊಳ್ಳೋ ಕ್ರೇಜು ಮುಖ್ಯ ಇರಬಹುದು, ಆದರೆ ನನಗೆ ಮನುಷ್ಯರ ಕಷ್ಟಕ್ಕೆ ಹೆಲ್ಪ್ ಮಾಡೋ ಈ ಕ್ಯಾರೆಕ್ಟರು ಮುಖ್ಯ. ಇನ್ಮೇಲೆ ಈ ಎಕ್ಸ್ಟ್ರಾ ಬಿಲ್ಡಪ್ಪನ್ನು ಬಿಟ್ಟು ಮನುಷ್ಯತ್ವ ಕಲಿ!"

ಮಂಜಮ್ಮನ ಈ ಪವರ್ ಫುಲ್ ಸ್ಪೀಚ್ ಕೇಳಿ ಸೊಸೆ ಸವಿತಾ ಸೈಲೆಂಟ್ ಆದಳು. ವಟಾರದ ಜನ ಮಂಜಮ್ಮನ ಜಾಣ್ಮೆಗೆ "ಶಹಬ್ಬಾಷ್" ಎಂದರು.



Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222
PRGI NO. 120927
(RNINO:KARKAN/2011/48371)